ಮನುಷ್ಯ ಜಾತಿ
ತಾನೊಂದೆ ವಲಂ

ಸಂಪಾದಕರು:
ಪ್ರೊ. ಕೆ. ಎಸ್. ಮಧುಸೂದನ
ಡಾ. ಎಚ್. ಎನ್. ಮುರಳೀಧರ

ತಿಳಿ ಕನ್ನಡ

ಭಾಗ ೧, ೨

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು

ತಿಳಿ ಕನ್ನಡ

(ಭಾಗ – ೧, ೨)

ಸಂಪಾದಕರು
ಪ್ರೊ. ಕೆ.ಎಸ್. ಮಧುಸೂದನ
ಡಾ. ಎಚ್.ಎನ್. ಮುರಳೀಧರ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮

TILI KANNADA PART - 1, 2

Edited by: Prof. K.S. Madhusudana , Dr. H.N. Muralidhara
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : iv + 80 Price : **Rs.50=00** : **2010**

ಪ್ರಥಮ ಮುದ್ರಣ : ೨೦೧೦
ಪ್ರತಿಗಳು : ೧೦೦೦
ಬೆಲೆ : ಐವತ್ತು ರೂಪಾಯಿಗಳು

ಪಠ್ಯರಚನಾ ಸಮಿತಿ – ಸದಸ್ಯರು

ಪ್ರೊ.ಎಂ.ಜಿ. ಚಂದ್ರಶೇಖರಯ್ಯ
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ಡಾ. ಬೈರಮಂಗಲ ರಾಮೇಗೌಡ

ಪ್ರಕಟಣಾ ಸಮಿತಿ

ಅಧ್ಯಕ್ಷರು – ಡಾ. ನಲ್ಲೂರು ಪ್ರಸಾದ್. ಆರ್.ಕೆ.

ಸಂಚಾಲಕರು – ಶ್ರೀ ಎಚ್.ಕೆ. ಮಳಲಿಗೌಡ

ಸದಸ್ಯರು

ಶ್ರೀ ಟಿ.ಎಸ್.ದಕ್ಷಿಣಾಮೂರ್ತಿ
ಡಾ. ಗಿರಡ್ಡಿ ಗೋವಿಂದರಾಜ
ಪ್ರೊ. ಎಸ್.ಜಿ.ಸಿದ್ಧರಾಮಯ್ಯ
ಶ್ರೀ ಬಿ.ಆರ್.ಪೊಲೀಸ್ ಪಾಟೀಲ
ಶ್ರೀ ಮಾನಸ
ಶ್ರೀ ಪ್ರದೀಪ್‌ಕುಮಾರ ಕಲ್ಕೂರ
ಶ್ರೀ ಪುಂಡಲೀಕ ಹಾಲಂಬಿ
ಡಾ. ಎಚ್. ಜಯಮ್ಮ ಕರಿಯಣ್ಣ
ಶ್ರೀ ಕುಂ.ವೀರಭದ್ರಪ್ಪ
ಶ್ರೀ ವಿಷ್ಣು ನಾಯ್ಕ
ಡಾ. ಬೈರಮಂಗಲ ರಾಮೇಗೌಡ

ಸಮ್ಮೇಳನಾಧ್ಯಕ್ಷರು – ನಾಡೋಜ ಡಾ. ಗೀತಾ ನಾಗಭೂಷಣ
೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು – ಶ್ರೀ ಮನು ಬಳಿಗಾರ್
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುಖಪುಟ ವಿನ್ಯಾಸ : ಶ್ರೀ ಬಾಗೂರು ಮಾರ್ಕಾಂಡೇಯ

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಮುಖಪುಟ ವಿನ್ಯಾಸ : ಶ್ರೀ ಬಾಗೂರು ಮಾರ್ಕಾಂಡೇಯ

ಅಧ್ಯಕ್ಷರ ನುಡಿ

'ಪ್ರವೇಶ' 'ಕಾವ' 'ಜಾಣ' ಮತ್ತು 'ರತ್ನ' ಕನ್ನಡ ಸಾಹಿತ್ಯ ಪರಿಷತ್ತಿನ ಬಹು ಜನಪ್ರಿಯವಾದ ಸಾಹಿತ್ಯ ಪರೀಕ್ಷೆಗಳು. ಬಹಳಷ್ಟು ವರ್ಷಗಳಿಂದ ಸಾಹಿತ್ಯಪ್ರಿಯರು ಈ ಪರೀಕ್ಷೆಗಳಿಗೆ ನೋಂದಾವಣೆ ಮಾಡಿಸಿ, ಶ್ರದ್ಧೆಯಿಂದ ಅಭ್ಯಾಸ ಮಾಡಿ, ಪರೀಕ್ಷೆ ಬರೆದು ಅರ್ಹತಾ ಪತ್ರಗಳನ್ನು ಪಡೆದುಕೊಂಡಿದ್ದಾರೆ. ರ್‍ಯಾಂಕುಗಳಿಗೆ ನಿಶ್ಚಿತ ಮೊತ್ತದ ನಗದು ಬಹುಮಾನ ಗಳಿಸಿ ಹೆಮ್ಮೆಪಟ್ಟಿದ್ದಾರೆ. ಸಾಹಿತ್ಯ ಪರೀಕ್ಷೆಗಳ ರ್‍ಯಾಂಕ್ ವಿಜೇತರಿಗೆ ಬಹುಮಾನ ಪ್ರದಾನ ಮಾಡುವ ಸಮಾರಂಭವೇ ಪರಿಷನ್ಮಂದಿರದಲ್ಲಿ ನಡೆಯುವ ಪುಟ್ಟದೊಂದು ಸಾಹಿತ್ಯ ಹಬ್ಬದಂತಿರುತ್ತದೆ. ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ವಿದ್ಯಾರ್ಥಿಗಳು ತಮ್ಮ ಸಾಹಿತ್ಯ ಜ್ಞಾನವನ್ನು ಒರೆಗೆ ಹಚ್ಚಿ ನೋಡಿಕೊಳ್ಳುವುದಕ್ಕೋ ಮುಂದಿನ ಪರೀಕ್ಷೆಗಳಿಗೆ ಅಗತ್ಯವಾದ ಆತ್ಮವಿಶ್ವಾಸವನ್ನು ಗಳಿಸಿಕೊಳ್ಳುವುದಕ್ಕೋ ಈ ಪರೀಕ್ಷೆಗಳನ್ನು ತೆಗೆದುಕೊಂಡರೆ, ವಯಸ್ಸಾಗಿರುವವರು ತಮ್ಮೊಳಗಿರುವ ವಿದ್ಯಾರ್ಥಿಯನ್ನು ಜೋಪಾನವಾಗಿ ಕಾಪಾಡಿಕೊಂಡು, ಪೋಷಿಸಿಕೊಂಡು ಹೋಗುವ ಉದ್ದೇಶದಿಂದ ಪರೀಕ್ಷೆ ಬರೆಯುತ್ತಾರೆ. ಈ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಪಡೆಯುವುದರಿಂದ ಕರ್ನಾಟಕ ಸರ್ಕಾರದ ನೌಕರರು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯ ಉತ್ತೀರ್ಣತೆಯಿಂದ ವಿನಾಯಿತಿ ಪಡೆಯಬಹುದಾದ ಲೌಕಿಕ ಲಾಭವೂ ಉಂಟು. ಹಾಗೆಯೇ ಬಿ.ಎ. ಪದವಿಯಲ್ಲಿ ಕನ್ನಡವನ್ನು ಐಚ್ಛಿಕ ವಿಷಯವಾಗಿ ಅಧ್ಯಯನ ಮಾಡಿರದಿದ್ದರೂ 'ರತ್ನ' ಪರೀಕ್ಷೆಯ ಅರ್ಹತಾ ಪತ್ರದ ನೆರವಿನಿಂದ ಕನ್ನಡ ಎಂ.ಎ. ತರಗತಿಗಳಿಗೆ ಗರಿಷ್ಠ ಇಬ್ಬರು ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದಾದ ಅನುಕೂಲವೂ ಇದೆ.

ಇಷ್ಟೆಲ್ಲ ಮಹತ್ವ ಪಡೆದುಕೊಂಡಿರುವ ಪರೀಕ್ಷೆಗಳಿಗೆ ಪಠ್ಯಕ್ರಮವನ್ನು ರೂಪಿಸಿ, ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದಿಂದ ಮೊದಲುಗೊಂಡು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಇವುಗಳ ವಿಭಿನ್ನ ಪ್ರಕಾರಗಳು, ಆಸಕ್ತಿಗಳು, ಚಳುವಳಿಗಳು, ಸಿದ್ಧಾಂತಗಳು – ಇವೆಲ್ಲವನ್ನೂ ದೃಷ್ಟಿಯಲ್ಲಿರಿಸಿಕೊಂಡು ಎಲ್ಲೂ ಅರೆಕೊರೆಯಾಗದಂತೆ, ಭಾರವಾಗದಂತೆ ಸಮತೋಲನವನ್ನು ಕಾಯ್ದುಕೊಂಡು ಈ ಕೆಲಸವನ್ನು ಮಾಡಬೇಕಾಗುತ್ತದೆ. ಸಮಕಾಲೀನ ಬದುಕು – ಅಭಿರುಚಿ–ಚಿಂತನೆಗಳಿಗೆ ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ. ವಿಶ್ವವಿದ್ಯಾಲಯಗಳು ರೂಪಿಸುವ ಇದೇ ಉದ್ದೇಶದ ಪಠ್ಯಗಳಿಗೆ ಹೊಯ್‌ಕಯ್ ಆಗಿ ನಿಲ್ಲಬೇಕಾಗುತ್ತದೆ. ನಮ್ಮ ಈ ಆಶಯಕ್ಕೆ ಸ್ಪಂದಿಸುವಂತೆ ಸಾಹಿತ್ಯ ಪರೀಕ್ಷೆಗಳ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ರೂಪಿಸುವ ಜವಾಬ್ದಾರಿಯನ್ನು ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್, ಡಾ. ಬೈರಮಂಗಲ ರಾಮೇಗೌಡ ಮತ್ತು ಪ್ರೊ. ಎಂ.ಜಿ. ಚಂದ್ರಶೇಖರಯ್ಯ ಪ್ರೀತಿಯಿಂದ ನಿರ್ವಹಿಸಿದ್ದಾರೆ. ವಿವಿಧ ಪಠ್ಯಗಳ ಸಂಪಾದಕರು ಸಕಾಲದಲ್ಲಿ ಅಚ್ಚುಕಟ್ಟಾಗಿ ಪುಸ್ತಕಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿ ಸುಂದರ ವಿನ್ಯಾಸದೊಂದಿಗೆ ಪುಸ್ತಕಗಳನ್ನು ಮುದ್ರಿಸಿದ್ದಾರೆ. ಇವರೆಲ್ಲರಿಗೂ ಪರಿಷತ್ತು ಆಭಾರಿಯಾಗಿದೆ. ಸಾಹಿತ್ಯ ವಿದ್ಯಾರ್ಥಿಗಳು ಈ ಪುಸ್ತಕಗಳಿಂದ ನಿರೀಕ್ಷಿತ ಪ್ರಯೋಜನ ಪಡೆಯುವರೆಂದು ಭಾವಿಸಿದ್ದೇನೆ.

ದಿನಾಂಕ : ೨೧-೦೭-೨೦೧೧

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಸಂಪಾದಕರ ನುಡಿ

'ತಿಳಿ ಕನ್ನಡ' ಕೃತಿ ಕನ್ನಡ ಭಾಷಾ ಕಲಿಕೆಯ ಪ್ರಾರಂಭದ ಅಭ್ಯಾಸಿಗಳಿಗೆ ಪ್ರಾಥಮಿಕ ಹಂತದ ಪುಸ್ತಕ. ಇಲ್ಲಿ ಕನ್ನಡ ಭಾಷಾ ಕಲಿಕೆಯನ್ನು ಮೂರು ನೆಲೆಗಳಲ್ಲಿ ಗುರುತಿಸಲಾಗಿದೆ. ೧. ಅಕ್ಷರದ ನೆಲೆ, ೨. ಪದದ ನೆಲೆ, ೩. ವಾಕ್ಯದ ನೆಲೆ.

'ಅಕ್ಷರದ ನೆಲೆ'ಯಲ್ಲಿ ಕನ್ನಡದ ಅಕ್ಷರಮಾಲೆಯನ್ನು 'ಧ್ವನಿಯ ನೆಲೆ' ಹಾಗೂ 'ಲಿಪಿಯ ನೆಲೆ' ಎಂಬ ಎರಡು ನೆಲೆಗಳಲ್ಲಿ ಪರಿಚಯ ಮಾಡಿಕೊಡಲಾಗಿದೆ. ಕನ್ನಡದ ಅಕ್ಷರಗಳ ಸಮಗ್ರ ಹಾಗೂ ವಿಸ್ತಾರವಾದ ವಿವರಗಳನ್ನು, ಅವುಗಳ ವಿವಿಧ ಸ್ವರೂಪಗಳನ್ನು ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. ಸ್ವರ ಹಾಗೂ ಸ್ವರಗಳ ಬಗೆಗಳು, ವ್ಯಂಜನ ಹಾಗೂ ವ್ಯಂಜನದ ವಿವಿಧ ಬಗೆಗಳು ಮತ್ತು ಯೋಗವಾಹ – ಇತ್ಯಾದಿಗಳ ಸಂಪೂರ್ಣ ಮಾಹಿತಿ ಇಲ್ಲಿದೆ. ವಿವಿಧ ರೀತಿಯ ಪದಗಳು ಹಾಗೂ ವಾಕ್ಯಗಳ ನಾನಾ ಮಾದರಿಗಳ ವಿಶ್ಲೇಷಣೆಯ ಮೂಲಕ ಕನ್ನಡ ಭಾಷೆಯ ಆವಾಹನೆ ಅಭ್ಯಾಸಿಗಳಿಗೆ ಆಗುವಂತೆ ನಿಗಾ ವಹಿಸಿದ್ದೇವೆ.

ಕನ್ನಡದ ಪ್ರಸಿದ್ಧ ಬರಹಗಾರರಾದ ಕುವೆಂಪು, ಜಿ.ಪಿ.ರಾಜರತ್ನಂ, ಮ.ಶಂ.ರಾವ್ ಮುಂತಾದವರ ಕತೆ, ಕವಿತೆಗಳ ಮೂಲಕ ಕನ್ನಡಾಭ್ಯಾಸಿಗಳಿಗೆ ಕನ್ನಡ ಭಾಷೆಯಲ್ಲಿ ಆಸಕ್ತಿ ಮೂಡುವಂತೆ ಪಾಠಗಳನ್ನು ರಚಿಸುವ ಪ್ರಯತ್ನ ಮಾಡಲಾಗಿದೆ. ಸ್ವರಚಿಹ್ನೆಗಳು, ಒತ್ತಕ್ಷರದ ಚಿಹ್ನೆಗಳು, ಒಂದರಿಂದ ನೂರರವರೆಗಿನ ಕನ್ನಡದ ಅಂಕಿಗಳು, ಲೇಖನ ಚಿಹ್ನೆಗಳು ಮುಂತಾದ ಪೂರಕ ಮಾಹಿತಿಗಳನ್ನು ಅಭ್ಯಾಸಿಗಳ ಅನುಕೂಲಕ್ಕಾಗಿ ನೀಡಿದ್ದೇವೆ. ಪರೀಕ್ಷಾರ್ಥಿಗಳ ಅನುಕೂಲಕ್ಕಾಗಿ ಕೊನೆಯಲ್ಲಿ ಪ್ರಶ್ನೆಪತ್ರಿಕೆಯೊಂದರ ಮಾದರಿ ನೀಡಿದ್ದೇವೆ. ಪ್ರತಿ ಪಾಠದ ಕೊನೆಯಲ್ಲಿ ಅಭ್ಯಾಸಗಳನ್ನು ನೀಡಿರುವುದರ ಜೊತೆಗೆ ಪರೀಕ್ಷೆ ದೃಷ್ಟಿಯಿಂದ ಅಗತ್ಯವಲ್ಲದ ಆದರೆ ತಿಳಿಯಬೇಕಾದ ಮಾಹಿತಿಗಳನ್ನು 'ಹೆಚ್ಚಿನ ತಿಳಿವಳಿಕೆ' ಎಂಬ ಶೀರ್ಷಿಕೆಯಡಿ ನೀಡಿದ್ದೇವೆ.

ನಮ್ಮ ಈ ನಮ್ರ ಪ್ರಯತ್ನ ಅಭ್ಯಾಸಿಗಳಲ್ಲಿ ಕನ್ನಡದ ಅರಿವನ್ನು ಸಾಕ್ಷಾತ್ಕಾರಗೊಳಿಸುತ್ತದೆ ಎಂಬ ನಿರೀಕ್ಷೆ ನಮ್ಮದು. ಇದನ್ನು ರಚಿಸಲು ಅವಕಾಶ ಮಾಡಿಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿಗೆ ನಮ್ಮ ನಮನಗಳು.

ಕೆ.ಎಸ್. ಮಧುಸೂದನ
ಎಚ್.ಎನ್. ಮುರಳೀಧರ

ಪಾಠ–೧

ಕನ್ನಡ ಅಕ್ಷರ ಮಾಲೆ

ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ = ೧೪

ಅಂ ಅಃ = ೨

ಕ್ ಖ್ ಗ್ ಘ್ ಙ್
ಚ್ ಛ್ ಜ್ ಝ್ ಞ್
ಟ್ ಠ್ ಡ್ ಢ್ ಣ್
ತ್ ಥ್ ದ್ ಧ್ ನ್
ಪ್ ಫ್ ಬ್ ಭ್ ಮ್ = ೨೫

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ = ೯

ಒಟ್ಟು = ೫೦ ಅಕ್ಷರಗಳು

ಕನ್ನಡ ಅಕ್ಷರ ಮಾಲೆಯನ್ನು ಧ್ವನಿಯ ನೆಲೆ ಮತ್ತು ಲಿಪಿಯ ನೆಲೆ ಎಂಬ ಎರಡು ನೆಲೆಗಳಲ್ಲಿ ಚೆನ್ನಾಗಿ ಕಲಿತುಕೊಳ್ಳಬಹುದು.

ಮುಂದಿನ ಪಾಠಗಳಲ್ಲಿ ಅವುಗಳನ್ನು ಗಮನಿಸೋಣ.

ಅಭ್ಯಾಸ

೧. ಕನ್ನಡದ ಅಕ್ಷರ ಮಾಲೆಯನ್ನು ಬರೆಯಿರಿ.
೨. ಕನ್ನಡದ ಅಕ್ಷರ ಮಾಲೆಯ ಎರಡು ನೆಲೆಗಳನ್ನು ತಿಳಿಸಿ.

* * *

ಹೆಚ್ಚಿನ ತಿಳಿವಳಿಕೆ

ಸಂಸ್ಕೃತ ವರ್ಣಮಾಲೆಯಲ್ಲಿ ಕನ್ನಡ ಅಕ್ಷರಗಳಾದ ಎ, ಒ, ಳ ಎಂಬ ಅಕ್ಷರಗಳಿಲ್ಲ.
ಎ, ಒ, ಳ, ಱ, ೞ – ಈ ಐದು ಅಕ್ಷರಗಳಿಗೆ ಕನ್ನಡದಲ್ಲಿ 'ದೇಶೀಯ ಅಕ್ಷರಗಳು' ಎನ್ನುತ್ತಾರೆ.

ಪಾಠ–೨

ಧ್ವನಿಯ ನೆಲೆ

[ಉಚ್ಚಾರಣಾ ಸ್ಥಾನ ಮತ್ತು ಉಚ್ಚಾರಣಾ ವಿಧಾನದ ನೆಲೆ]

೧. ಸ್ವರಗಳು (೬+೪+೪ =೧೪)

ಅ). ಹ್ರಸ್ವ ಸ್ವರ ಅ ಇ ಉ ಋ ಎ ಒ = ೬

ಆ). ದೀರ್ಘ ಸ್ವರ ೧. ಸವರ್ಣದೀರ್ಘ ಆ ಈ ಊ ೠ ಏ ಓ = ೪+[೨]=[೬]

೨. ಸಂಧ್ಯಕ್ಷರ ಏ ಐ ಓ ಔ = ೪

೨. ಯೋಗವಾಹಗಳು (೨)

ಂ = ಅನುಸ್ವಾರ

ಃ = ವಿಸರ್ಗ

೩. ವ್ಯಂಜನಗಳು (೨೫+೯ =೩೪)

ಅ). ವರ್ಗೀಯ ವ್ಯಂಜನಗಳು(೨೫)

	ಕಂಠ್ಯ	**ತಾಲವ್ಯ**	**ಮೂರ್ಧನ್ಯ**	**ದಂತ್ಯ**	**ಓಷ್ಠ್ಯ**
ಅಲ್ಪ ಪ್ರಾಣ	ಕ್ಗ್	ಚ್ಜ್	ಟ್ಡ್	ತ್ದ್	ಪ್ಬ್
ಮಹಾ ಪ್ರಾಣ	ಖ್ಘ್	ಛ್ಝ್	ಠ್ಢ್	ಥ್ಧ್	ಫ್ಭ್
ಅನುನಾಸಿಕ	ಙ್	ಞ್	ಣ್	ನ್	ಮ್

ಆ). ಅವರ್ಗೀಯ ವ್ಯಂಜನಗಳು (೯)

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ ಒಟ್ಟು = ೫೦ ಅಕ್ಷರಗಳು.

ಇವುಗಳಲ್ಲಿ

ಋ ೠ

ಖ್ ಙ್

ಛ್ ಞ್

ಠ್ ಥ್ ಫ್

ಘ್ ಝ್ ಢ್ ಧ್ ಭ್

ಷ್

ಈ ಹದಿನೈದು (೧೫) ಅಕ್ಷರಗಳನ್ನು ಕನ್ನಡದ ಅಕ್ಷರಮಾಲೆಯಿಂದ ಬಿಟ್ಟು ಬಿಡಬಹುದೆಂದು ಆಧುನಿಕ ಭಾಷಾವಿಜ್ಞಾನಿಗಳ ಅಭಿಪ್ರಾಯ. ಹಾಗಾದಾಗ ಕನ್ನಡದಲ್ಲಿ ಒಟ್ಟು ೩೫ ಅಕ್ಷರಗಳು ಉಳಿಯುತ್ತವೆ.

ಅಭ್ಯಾಸ

೧. ಸಂಧ್ಯಕ್ಷರಗಳನ್ನು ಬರೆಯಿರಿ

೨. ಹ್ರಸ್ವ ಸ್ವರಗಳು ಎಷ್ಟು? ಅವು ಯಾವುವು?

೩. ಮಹಾಪ್ರಾಣಾಕ್ಷರಗಳ ಪಟ್ಟಿಯನ್ನು ನೀಡಿ.
೪. ೦ , ಃ ಈ ಅಕ್ಷರಗಳಿಗೆ ಏನೆಂದು ಹೆಸರು?
೫. ಯಾವ ಅಕ್ಷರಗಳನ್ನು ಬಿಡಬಹುದೆಂದು ಭಾಷಾವಿಜ್ಞಾನಿಗಳ ಅಭಿಪ್ರಾಯ?

ಹೆಚ್ಚಿನ ತಿಳಿವಳಿಕೆ

ಸಂಸ್ಕೃತ ಭಾಷೆಯ ಸ್ವರಗಳಾದ

೧. ಅ ಆ ಇ ಈ ಉ ಊ ಋ ೠ ಏ ಐ ಓ ಔ ಮತ್ತು ಹೆಚ್ಚು ಬಳಕೆಯಲ್ಲಿಲ್ಲದ ಇನ್ನೆರಡು ಸ್ವರಗಳು ಸೇರಿ ಒಟ್ಟು ೧೪ ಸ್ವರಗಳಲ್ಲಿ ಅ, ಆ ಗಳನ್ನು ಹೊರತು ಪಡಿಸಿ ಉಳಿದ ೧೨ ಸ್ವರಗಳಿಗೆ 'ನಾಮಿ' ಎಂದು ಹೆಸರು. 'ನಾಮಿ' ಎಂದರೆ 'ಬಾಗು' ಎಂದರ್ಥ.

ಪಾಠ–೩

ಲಿಪಿಯ ನೆಲೆ

[ಬರೆದ ಅಕ್ಷರಗಳನ್ನು ಕಲಿಯಲು ಅನುವಾಗುವಂತೆ ಅಕ್ಷರಗಳ ಸಾಮ್ಯದ ನೆಲೆ]

ಕ್ರ.ಸಂ.	ಚಿಹ್ನೆ	ಅಕ್ಷರಗಳು	
೧.	U	ಅ ಆ ಅಂ ಅಃ ಲ ತ	೬
೨.	ಇ	ಇ ಈ	೨
೩.	O	ಈ ಕ ಝ ಠ ರ ಯ	೬
೪.	ಉ	ಉ ಊ ಹ	೩
೫.	೩	ಋ ೠ ಖ	೩
೬.	ᴗ	ಎ ಏ ಐ ಘ ಛ ಪ ಫ ಮ ವ ಷ	೧೦
೭.	ಒ	ಒ ಓ ಔ ಜ ಚ ಜ ಬ ಭ	೮
೮.	೧	ಗ ಣ	೨
೯.	ᴗ	ಟ ಡ ಢ ಥ ದ ಧ	೬
೧೦.	~	ನ ಸ	೨
೧೧.	४	ಶ ಳ	೨
		ಒಟ್ಟು =	೫೦

ಅಭ್ಯಾಸ

೧. ಕನ್ನಡದಲ್ಲಿ ಲಿಪಿ ಸಾಮ್ಯದ ಅಕ್ಷರ ಚಿಹ್ನೆಗಳನ್ನು ಬರೆಯಿರಿ

ಹೆಚ್ಚಿನ ತಿಳಿವಳಿಕೆ

ಕನ್ನಡ ಲಿಪಿಯನ್ನು ಕಲಿಯಲು ಬಿಂದು ಅಥವಾ ಸೊನ್ನೆ ಅಥವಾ ಅನುಸ್ವಾರ (೦) ಬರೆಯುವುದು ಗೊತ್ತಿರಬೇಕು. ಗುಂಡುರದ ರೀತಿಯಲ್ಲಿ ಲೇಖನಿಯನ್ನು ಬಳಸಿ ಎಂದರೆ ಸುತ್ತಿ ಬರೆಯಲು ತಿಳಿದಿರಬೇಕು. ಕನ್ನಡದ ಅಕ್ಷರಗಳು ಗುಂಡಗೆ ಇರುತ್ತವೆ. ಕನ್ನಡ ಅಕ್ಷರಗಳನ್ನು ಚೆನ್ನಾಗಿ ಬರೆಯುವುದು ಎಂದರೆ ಗುಂಡಾಗಿ ಬರೆಯುವುದು ಎಂದೇ ಅರ್ಥ.

* * *

ಪಾಠ–೪

ಸ್ವರಗಳು

ಸುಲಭವಾಗಿ ಉಚ್ಚಾರ ಮಾಡುವ ಅಕ್ಷರಗಳನ್ನು ಸ್ವರಗಳೆನ್ನುತ್ತಾರೆ.

ಅ ಆ   ಇ ಈ   ಉ ಊ   ಋ ೠ   ಎ ಏ ಐ   ಒ ಓ ಔ   = ೧೪

೧. ಅ ಆ

೨. ಇ ಈ

೩. ಉ ಊ

೪. ಋ ೠ

೫. ಎ ಏ

೬. ಒ ಓ

ಈ ಆರೂ ಜೋಡಿ ಸ್ವರಗಳು ಒಂದಕ್ಕೊಂದು ಪರಸ್ಪರ ಸವರ್ಣಾಕ್ಷರಗಳು.

ಸ್ವರಗಳಲ್ಲಿ ಮೂರು ವಿಧಗಳಿವೆ :

ಅವೆಂದರೆ   ೧. ಹ್ರಸ್ವ ಸ್ವರ   ೨. ದೀರ್ಘ ಸ್ವರ   ೩. ಸಂಧ್ಯಕ್ಷರ

ಅಭ್ಯಾಸ

೧. ಮೊದಲ ಎಂಟು ಸ್ವರಗಳನ್ನು ಬರೆಯಿರಿ

೨. ಕೊನೆಯ ಆರು ಸ್ವರಗಳನ್ನು ಬರೆಯಿರಿ

೩. ಮೂರು ಜೋಡಿ ಸವರ್ಣಗಳನ್ನು ಬರೆಯಿರಿ

೪. ಸ್ವರದ ಮೂರು ಬಗೆಗಳಾವುವು ?

* * *

ಪಾಠ–೫

ಹ್ರಸ್ವಸ್ವರ

ಅತ್ಯಂತ ಕಡಿಮೆ ಕಾಲದಲ್ಲಿ ಉಚ್ಚಾರ ಮಾಡುವ ಸ್ವರಗಳನ್ನು ಹ್ರಸ್ವಸ್ವರ ಎನ್ನುತ್ತಾರೆ. ಒಂದು ಹ್ರಸ್ವಸ್ವರವನ್ನು ಉಚ್ಚಾರ ಮಾಡುವ ಕಾಲಕ್ಕೆ ಒಂದು ಮಾತ್ರೆಯ ಕಾಲವೆನ್ನುತ್ತಾರೆ. ಛಂದಸ್ಸಿನಲ್ಲಿ ಒಂದು ಮಾತ್ರೆಯ ಗುರುತು U. ಇದನ್ನು ಲಘು ಎನ್ನುತ್ತಾರೆ.

ಅ ಇ ಉ ಋ ಎ ಒ

ಅಭ್ಯಾಸ

ಅವನು

ಇವಳು

ಉಡು

ಋಕಾರ

ಎಲೆ

ಒನಕೆ

೧. ಇಂತಹ ಇನ್ನೂ ಹತ್ತು ಪದಗಳನ್ನು ಬರೆಯಿರಿ

೨. ಯಾವುದಾದರೂ ನಾಲ್ಕು ಹ್ರಸ್ವಸ್ವರಗಳನ್ನು ಬರೆಯಿರಿ

೩. ಅ, ಇ, ಉ– ಹ್ರಸ್ವಸ್ವರಗಳಿರುವ ಐದು ಪದಗಳನ್ನು ಬರೆಯಿರಿ.

* * *

ಪಾಠ–೬

ದೀರ್ಘಸ್ವರ

ಹ್ರಸ್ವಸ್ವರದ ಸುಮಾರು ಎರಡರಷ್ಟು ಕಾಲ ಉಚ್ಚಾರ ಮಾಡುವ ಸ್ವರಗಳನ್ನು ದೀರ್ಘಸ್ವರ ಎನ್ನುತ್ತಾರೆ. ಒಂದು ದೀರ್ಘಸ್ವರವನ್ನು ಉಚ್ಚಾರ ಮಾಡುವ ಕಾಲವನ್ನು ಎರಡು ಮಾತ್ರೆಗಳ ಕಾಲ ಎನ್ನುತ್ತಾರೆ. ಛಂದಸ್ಸಿನಲ್ಲಿ ಎರಡು ಮಾತ್ರೆಯ ಗುರುತು –. ಇದನ್ನು ಗುರು ಎನ್ನುತ್ತಾರೆ.

ಆ ಈ ಊ ೠ ಏ ಐ ಓ ಔ

ಆ ಈ ಊ ೠ ಏ ಓ– ಈ ದೀರ್ಘಸ್ವರಗಳನ್ನು ಸವರ್ಣ ದೀರ್ಘಗಳೆಂದು ಹೇಳುತ್ತಾರೆ. ಇವು ಕ್ರಮವಾಗಿ ಅ ಇ ಉ ಋ ಎ ಒ– ಈ ಹ್ರಸ್ವಸ್ವರಗಳಿಗೆ ಸವರ್ಣದೀರ್ಘ ಸ್ವರಗಳು.

ಏ ಐ ಓ ಔ – ಈ ದೀರ್ಘಸ್ವರಗಳನ್ನು ಸಂಧ್ಯಕ್ಷರಗಳೆನ್ನುವರು.

ಸವರ್ಣದೀರ್ಘಸ್ವರ ಮತ್ತು ಸಂಧ್ಯಕ್ಷರಗಳನ್ನು ಕುರಿತು ಮುಂದಿನ ಪಾಠಗಳಲ್ಲಿ ಗಮನಿಸೋಣ.

ಅಭ್ಯಾಸ

ಆಟ

ಈಟಿ

ಊಟ

ೠಕಾರ

ಏನು

ಓಡು

೧. ಇಂತಹ ಇನ್ನೂ ಹತ್ತು ಪದಗಳನ್ನು ಬರೆಯಿರಿ

೨. ನಾಲ್ಕು ದೀರ್ಘಸ್ವರಗಳನ್ನು ಬರೆಯಿರಿ

೩. ದೀರ್ಘಸ್ವರಗಳಲ್ಲಿ ಎಷ್ಟು ಬಗೆ ? ಅವು ಯಾವುವು ?

* * *

ಪಾಠ–೭

ಸವರ್ಣದೀರ್ಘಸ್ವರ

ಸವರ್ಣ ಎಂದರೆ ಒಂದೇ ಜಾತಿಯ ವರ್ಣ. ಸವರ್ಣ ದೀರ್ಘವೆಂದರೆ ಅದೇ ಜಾತಿಯ ವರ್ಣದ ದೀರ್ಘ. ಸವರ್ಣ ದೀರ್ಘಸ್ವರ ಎಂದರೆ ಒಂದು ಹ್ರಸ್ವಸ್ವರವನ್ನು ಎಳೆದು ದೀರ್ಘಸ್ವರವಾಗಿ ಉಚ್ಚಾರ ಮಾಡುವುದು. 'ಅ' ಹ್ರಸ್ವಸ್ವರವನ್ನು ದೀರ್ಘವಾಗಿ ಎಳೆದು ಉಚ್ಚಾರಣೆ ಮಾಡಿದರೆ ಅದರ ಸಂವಾದಿಯಾದ 'ಆ' ಎಂಬ ಸವರ್ಣ ದೀರ್ಘಸ್ವರವಾಗುತ್ತದೆ.

ಹಾಗೆಯೇ ಇ, ಉ, ಋ, ಎ ಮತ್ತು ಒ–ಹ್ರಸ್ವಸ್ವರಗಳನ್ನು ಎಳೆದು ದೀರ್ಘವಾಗಿ ಉಚ್ಚಾರ ಮಾಡಿದರೆ ಕ್ರಮವಾಗಿ ಈ, ಊ, ೠ, ಏ ಮತ್ತು ಓ – ಎಂಬ ಸವರ್ಣ ದೀರ್ಘಗಳಾಗುತ್ತವೆ.

	ಹ್ರಸ್ವಸ್ವರ	ಸವರ್ಣ ದೀರ್ಘಸ್ವರ
೧.	ಅ	ಆ
೨.	ಇ	ಈ
೩.	ಉ	ಊ
೪.	ಋ	ೠ
೫.	ಎ	ಏ
೬.	ಒ	ಓ

ಅಭ್ಯಾಸ

೧. ಊ ಯಾವ ಹ್ರಸ್ವಸ್ವರದ ಸವರ್ಣ ದೀರ್ಘಸ್ವರ ?

೨. ಎ ಹ್ರಸ್ವಸ್ವರದ ಸವರ್ಣ ದೀರ್ಘಸ್ವರದ ರೂಪ ಯಾವುದು ?

೩. ಸವರ್ಣ ಎಂದರೇನು ?

೪. ಸವರ್ಣ ದೀರ್ಘಸ್ವರ ಎಂದರೇನು ?

ಹೆಚ್ಚಿನ ತಿಳಿವಳಿಕೆ

ಈ ಸವರ್ಣ ಹಾಗೂ ಸವರ್ಣ ದೀರ್ಘ ಸ್ವರಗಳು ಸಂಸ್ಕೃತದಲ್ಲಿ ಬರುವ 'ಸವರ್ಣದೀರ್ಘ ಸಂಧಿ' ಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತವೆ.

* * *

ಪಾಠ–೮

ಸಂಧ್ಯಕ್ಷರ

ಅ + ಇ = ಏ

ಅ + ಏ = ಐ

ಅ + ಉ = ಓ

ಅ + ಓ = ಔ

ಮೇಲೆ ಅ ಮತ್ತು ಇ ಸೇರಿಸಿದರೆ ಏ ಆಗುತ್ತದೆ

ಹಾಗೆಯೇ ಅ ಮತ್ತು ಏ ಸೇರಿಸಿದರೆ ಐ ಆಗುತ್ತದೆ

ಅ ಮತ್ತು ಉ ಸೇರಿಸಿದರೆ ಓ ಆಗುವುದು.

ಹಾಗೂ ಅ ಮತ್ತು ಓ ಸೇರಿಸಿದರೆ ಔ ಆಗುವುದು.

ಹೀಗೆ ಎರಡು ಸ್ವರಗಳು ಸೇರಿ, ಸಂಧಿಸಿ ಏ ಐ ಓ ಮತ್ತು ಔ ಸ್ವರಗಳು ಉಂಟಾಗಿರುವುದರಿಂದ ಈ ದೀರ್ಘಸ್ವರಗಳನ್ನು ಸಂಧ್ಯಕ್ಷರಗಳೆನ್ನುವರು.

ಅಭ್ಯಾಸ

ಬೈರನ ಕುಣಿತ

ಕೈಲಿ ಬೈರಿಗೆ !

ಮೈಲಿ ಚೈನು !

ಬೈರ ಕುಣಿದನು ! ತೈ ತಕಾ !

ಹೈಹ ! ಸೈಸೈ

ಕುಣಿದು ಜೈಜೈ !

ಪೈಸ ಕೇಳಿದ ! ತೈ ತಕಾ !

–ಜಿ. ಪಿ. ರಾಜರತ್ನಂ

೧. ಯಾವ ಎರಡು ಸ್ವರಗಳು ಸೇರಿ ಏ ಆಗುತ್ತದೆ ?

೨. ಔ ಸಂಧ್ಯಕ್ಷರದಲ್ಲಿ ಯಾವ ಎರಡು ಸ್ವರಗಳಿವೆ ?

೩. ಅ + ಏ ಸೇರಿದರೆ ಯಾವ ಸಂಧ್ಯಕ್ಷರವಾಗುತ್ತದೆ ?

೪. ಏ ಐ ಓ ಮತ್ತು ಔ ಅಕ್ಷರಗಳನ್ನು ಏಕೆ ಸಂಧ್ಯಕ್ಷರಗಳೆಂದು ಕರೆಯುತ್ತಾರೆ ?

೫. ಮೇಲಿನ ಪದ್ಯದಲ್ಲಿ ಐ ಇರುವ ಅಕ್ಷರಗಳನ್ನು ಪಟ್ಟಿ ಮಾಡಿ.

೬. ಬೈರನ ಕೈಲಿ ಮತ್ತು ಮೈಲಿ ಏನೇನಿದ್ದವು ?

೭. ಬೈರನು ಕುಣಿದಾಗ ಏನೆಂದು ಹೇಳಿದನು ?

ಔ ! ಔ !

ಚೌಡಿಯ ಗುಡಿಗೆ

ಸೌದೆಯು ಬೇಕು ;

ಗೌಡನ ಹಸುವಿಗೆ

ತೌಡನು ಹಾಕು.

–ಜಿ. ಪಿ. ರಾಜರತ್ನಂ

೧. ಔ ಇರುವ ಅಕ್ಷರಗಳನ್ನು ಗುರುತಿಸಿ.

೨. ಸೌದೆಯು ಎಲ್ಲಿಗೆ ಬೇಕು ?

೩. ಗೌಡನ ಹಸುವಿಗೆ ಏನನ್ನು ಹಾಕಬೇಕು ?

ಹೆಚ್ಚಿನ ತಿಳಿವಳಿಕೆ

ಏ ಮತ್ತು ಓ ಎಂಬ ಸವರ್ಣ ದೀರ್ಘಾಕ್ಷರಗಳನ್ನು ಸಂಸ್ಕೃತ ಭಾಷೆಯಲ್ಲಿ ಗುಣ ಎನ್ನುವರು. ಗುಣ ಎಂದರೆ ಎರಡರಷ್ಟಾಗುವುದು ಎಂದರ್ಥ. ಸಂಸ್ಕೃತದಲ್ಲಿ ಬರುವ ಗುಣ ಸಂಧಿಯಲ್ಲಿ ಈ ಗುಣಾಕ್ಷರಗಳಾದ ಏ ಮತ್ತು ಓ ಅಕ್ಷರಗಳು ಭಾಗವಹಿಸುತ್ತವೆ.

ಐ ಮತ್ತು ಔ ಎಂಬ ಸಂಧ್ಯಕ್ಷರಗಳನ್ನು ಸಂಸ್ಕೃತದಲ್ಲಿ ವೃದ್ಧಿ ಎನ್ನುವರು. ಅಲ್ಲಿ ಬರುವ ವೃದ್ಧಿ ಸಂಧಿಯಲ್ಲಿ ವೃದ್ಧ್ಯಕ್ಷರಗಳಾದ ಐ ಮತ್ತು ಔ ಅಕ್ಷರಗಳು ಭಾಗವಹಿಸುತ್ತವೆ.

* * *

ಯೋಗವಾಹ

ಸ್ವರಗಳ ಮುಂದೆ ಮತ್ತು ವ್ಯಂಜನಗಳ ಹಿಂದೆ ಬಂದು ಉಚ್ಚಾರವಾಗುವ ಅಕ್ಷರಾಂಶಗಳಿಗೆ ಯೋಗವಾಹಗಳು ಎಂದು ಹೆಸರು. ಸಂಸ್ಕೃತದಲ್ಲಿರುವ ನಾಲ್ಕು ಯೋಗವಾಹಗಳಲ್ಲಿ ಕನ್ನಡ ಭಾಷೆಯೊಳಗೆ ಎರಡು ಮಾತ್ರ ಬಳಕೆಯಲ್ಲಿವೆ.

ಂ = ಅನುಸ್ವಾರ

ಃ = ವಿಸರ್ಗ

ಯೋಗವಾಹ ಎಂದರೆ ಸಂಬಂಧ ಹೊಂದಿದ ಎಂದರ್ಥ. ಈ ಯೋಗವಾಹಗಳಿಗೆ ಸ್ವತಂತ್ರವಾದ ಉಚ್ಚಾರಣೆ ಇಲ್ಲ. ಸ್ವರ ಮತ್ತು ವ್ಯಂಜನಗಳ ನಡುವೆ ಬಂದೇ ಉಚ್ಚಾರಗೊಳ್ಳುವುದು.

ಅಂಗ

ದುಃಖ

ಯೋಗವಾಹಗಳ ಉಚ್ಚಾರಣೆಗೆ ಸ್ವರಗಳ ಮತ್ತು ವ್ಯಂಜನಗಳ ನೇರವಾದ ನೆರವು ಬೇಕಾಗಿರುವುದರಿಂದ ಯೋಗವಾಹಗಳಿಗೆ ಸ್ವರಾಂಗ ಹಾಗೂ ವ್ಯಂಜನಾಂಗ ಎಂದು ಕರೆಯುವುದುಂಟು.

ಅಭ್ಯಾಸ

೧. ಂ ಅನುಸ್ವಾರವಿರುವ ಐದು ಪದಗಳನ್ನು ಬರೆಯಿರಿ.

೨. ಃ ವಿಸರ್ಗವಿರುವ ನಾಲ್ಕು ಪದಗಳನ್ನು ಬರೆಯಿರಿ

ಹೆಚ್ಚಿನ ತಿಳಿವಳಿಕೆ

ಕನ್ನಡದಲ್ಲಿ ಬಳಕೆಯಲ್ಲಿಲ್ಲದ ಇನ್ನೆರಡು ಯೋಗವಾಹಗಳೆಂದರೆ

೧. ಜಿಹ್ವಾಮೂಲೀಯ – ೱ

೨. ಉಪಧ್ಮಾನೀಯ – ೲ

* * *

ಪಾಠ–೧೦

ವ್ಯಂಜನಗಳು

ಸ್ವರಗಳ ಸಹಾಯದಿಂದ ಸುಲಭವಾಗಿ ಉಚ್ಚಾರ ಮಾಡುವ ಅಕ್ಷರಗಳನ್ನು ವ್ಯಂಜನಗಳೆನ್ನುತ್ತಾರೆ.

'ಕ್' ಎಂಬುದು ಒಂದು ವ್ಯಂಜನ. ಇದರ ಅಕ್ಕಪಕ್ಕದಲ್ಲಿ ಸ್ವರವನ್ನು ತಂದು ಉಚ್ಚಾರ ಮಾಡಿದರೆ 'ಕ್' ಎಂಬ ವ್ಯಂಜನದ ಉಚ್ಚಾರ ಸುಲಭವಾಗುತ್ತದೆ.

ಅ + ಕ್ = ಅಕ್

ಕ್ + ಇ = ಕಿ

ಕ್ ಉಚ್ಚಾರಕ್ಕಿಂತ ಅಕ್, ಮತ್ತು ಕಿ ಗಳ ಉಚ್ಚಾರ ಸುಲಭ.

ವ್ಯಂಜನಗಳ ಪಟ್ಟಿ :

ಕ್ ಖ್ ಗ್ ಘ್ ಙ್

ಚ್ ಛ್ ಜ್ ಝ್ ಞ್

ಟ್ ಠ್ ಡ್ ಢ್ ಣ್

ತ್ ಥ್ ದ್ ಧ್ ನ್

ಪ್ ಫ್ ಬ್ ಭ್ ಮ್

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

ಅಭ್ಯಾಸ

೧. ಹತ್ತು ವ್ಯಂಜನಗಳನ್ನು ಬರೆಯಿರಿ.

ಹೆಚ್ಚಿನ ತಿಳಿವಳಿಕೆ

ತಮಿಳಿನಲ್ಲಿ ಸ್ವರಗಳಿಗೆ "ಉಯಿರ್" ಎಂದು ಹೇಳುತ್ತಾರೆ

ಹಾಗೆಯೇ ವ್ಯಂಜನಗಳಿಗೆ "ಮೆಯ್" ಎಂದೂ ಹೇಳುವರು.

* * *

ಪಾಠ–೧೧

ವರ್ಗೀಯ ವ್ಯಂಜನಗಳು

ಪಾಠ–೧೦ರಲ್ಲಿ ಬರುವ ವ್ಯಂಜನಗಳ ಪಟ್ಟಿಯಲ್ಲಿ ಮೊದಲ ೨೫ ವ್ಯಂಜನಗಳು ಒಂದು ನಿಯಮಕ್ಕೆ, ವರ್ಗಕ್ಕೆ ಒಳಪಡುವುದರಿಂದ ಈ ೨೫ ಅಕ್ಷರಗಳನ್ನು ವರ್ಗೀಯ ವ್ಯಂಜನಗಳೆನ್ನುವರು. ಈ ವರ್ಗೀಯ ವ್ಯಂಜನಗಳಲ್ಲಿ ಐದು ವರ್ಗಗಳಿವೆ. ಒಂದೊಂದು ವರ್ಗದಲ್ಲಿಯೂ ಐದೈದು ವ್ಯಂಜನಗಳಿವೆ. ಪ್ರತಿಯೊಂದು ವರ್ಗವನ್ನೂ ಆಯಾ ವರ್ಗದ ಮೊದಲ ವ್ಯಂಜನದ ಹೆಸರಿನ ವರ್ಗವೆಂದು ಕರೆಯುವುದು ವಾಡಿಕೆ.

ಕವರ್ಗ	ಕ್ ಖ್ ಗ್ ಘ್ ಙ್
ಚವರ್ಗ	ಚ್ ಛ್ ಜ್ ಝ್ ಞ್
ಟವರ್ಗ	ಟ್ ಠ್ ಡ್ ಢ್ ಣ್
ತವರ್ಗ	ತ್ ಥ್ ದ್ ಧ್ ನ್
ಪವರ್ಗ	ಪ್ ಫ್ ಬ್ ಭ್ ಮ್

ವರ್ಗೀಯ ವ್ಯಂಜನಗಳಲ್ಲಿ ೧. ಅಲ್ಪ ಪ್ರಾಣ ೨. ಮಹಾ ಪ್ರಾಣ ಮತ್ತು ೩. ಅನುನಾಸಿಕಗಳೆಂಬ ಮೂರು ವಿಧದ ವ್ಯಂಜನಾಕ್ಷರಗಳಿವೆ. ಹಾಗೆಂದರೇನು ? ಅವು ಯಾವುವು ? ಎಂಬುದನ್ನು ಮುಂದಿನ ಪಾಠಗಳಲ್ಲಿ ಗಮನಿಸೋಣ.

ಅಭ್ಯಾಸ

೧. ಐದು ವರ್ಗದ ಹೆಸರುಗಳನ್ನು ಬರೆಯಿರಿ

೨. ಚವರ್ಗದ ಅಕ್ಷರಗಳನ್ನು ಬರೆಯಿರಿ

೩. ಪ್ರತಿ ವರ್ಗದ ಆರಂಭದ ಅಕ್ಷರಗಳನ್ನು ಬರೆಯಿರಿ

೪. ಪ್ರತಿ ವರ್ಗದ ಕೊನೆಯ ಅಕ್ಷರಗಳನ್ನು ಬರೆಯಿರಿ

* * *

ಅಲ್ಪ ಪ್ರಾಣ

'ಅಲ್ಪ' ಎಂದರೆ ಕಡಿಮೆ.

'ಪ್ರಾಣ' ಎಂದರೆ ಉಸಿರು, ಗಾಳಿ.

'ಅಲ್ಪ ಪ್ರಾಣ' ಎಂದರೆ ಕಡಿಮೆ ಉಸಿರು ಅಥವಾ ಕಡಿಮೆ ಗಾಳಿ.

ಕಡಿಮೆ ಉಸಿರಿನ ಸಹಾಯದಿಂದ ಉಚ್ಚಾರ ಮಾಡುವ ವ್ಯಂಜನಗಳನ್ನು 'ಅಲ್ಪ ಪ್ರಾಣ' ಎನ್ನುವರು.

ವರ್ಗೀಯ ವ್ಯಂಜನಗಳ ಪ್ರತಿ ವರ್ಗಗಳಾದ ಕವರ್ಗ, ಚವರ್ಗ, ಟವರ್ಗ, ತವರ್ಗ ಮತ್ತು ಪವರ್ಗ–ಈ ಐದೂ ವರ್ಗಗಳ ಮೊದಲನೆಯ ಅಕ್ಷರಗಳಾದ ಕ್, ಚ್, ಟ್, ತ್ ಮತ್ತು ಪ್

ಮತ್ತು ಮೂರನೆಯ ಅಕ್ಷರಗಳಾದ ಗ್, ಜ್, ಡ್, ದ್ ಮತ್ತು ಬ್–ಒಟ್ಟು ಈ ಹತ್ತೂ ವ್ಯಂಜನಗಳೇ ಅಲ್ಪ ಪ್ರಾಣಗಳು.

ಕವರ್ಗ	ಕ್	ಗ್
ಚವರ್ಗ	ಚ್	ಜ್
ಟವರ್ಗ	ಟ್	ಡ್
ತವರ್ಗ	ತ್	ದ್
ಪವರ್ಗ	ಪ್	ಬ್

ಅಭ್ಯಾಸ

೧. ವರ್ಗದ ಮೊದಲ ಅಕ್ಷರಗಳಾದ ಅಲ್ಪ ಪ್ರಾಣಗಳನ್ನು ಬರೆಯಿರಿ

೨. ವರ್ಗದ ಮೂರನೆಯ ಅಕ್ಷರಗಳಾದ ಅಲ್ಪ ಪ್ರಾಣಗಳನ್ನು ಬರೆಯಿರಿ.

೩. ಅಲ್ಪ ಪ್ರಾಣಗಳಿರುವ ಐದು ಪದಗಳನ್ನು ಬರೆಯಿರಿ.

* * *

ಮಹಾ ಪ್ರಾಣ

'ಮಹಾ' ಎಂದರೆ ಹೆಚ್ಚು.

'ಪ್ರಾಣ' ಎಂದರೆ ಉಸಿರು, ಗಾಳಿ.

'ಮಹಾ ಪ್ರಾಣ' ಎಂದರೆ ಹೆಚ್ಚು ಉಸಿರು ಅಥವಾ ಹೆಚ್ಚು ಗಾಳಿ.

ಹೆಚ್ಚು ಉಸಿರಿನ ಸಹಾಯದಿಂದ ಉಚ್ಚಾರ ಮಾಡುವ ವ್ಯಂಜನಗಳನ್ನು 'ಮಹಾ ಪ್ರಾಣ' ಎನ್ನುವರು.

ವರ್ಗೀಯ ವ್ಯಂಜನಗಳ ಪ್ರತಿ ವರ್ಗಗಳಾದ ಕವರ್ಗ, ಚವರ್ಗ, ಟವರ್ಗ, ತವರ್ಗ ಮತ್ತು ಪವರ್ಗ–ಈ ಐದೂ ವರ್ಗಗಳ ಎರಡನೆಯ ಅಕ್ಷರಗಳಾದ ಖ್, ಛ್, ಠ್, ಥ್ ಮತ್ತು ಫ್ ಹಾಗೂ ನಾಲ್ಕನೆಯ ಅಕ್ಷರಗಳಾದ ಘ್, ಝ್, ಢ್, ಧ್ ಮತ್ತು ಭ್–ಒಟ್ಟು ಈ ಹತ್ತೂ ವ್ಯಂಜನಗಳೇ ಮಹಾ ಪ್ರಾಣಗಳು.

ಕವರ್ಗ	ಖ್	ಘ್
ಚವರ್ಗ	ಛ್	ಝ್
ಟವರ್ಗ	ಠ್	ಢ್
ತವರ್ಗ	ಥ್	ಧ್
ಪವರ್ಗ	ಫ್	ಭ್

ಅಭ್ಯಾಸ

೧. ವರ್ಗದ ಎರಡನೆಯ ಅಕ್ಷರಗಳಾದ ಮಹಾ ಪ್ರಾಣಗಳನ್ನು ಬರೆಯಿರಿ.

೨. ವರ್ಗದ ನಾಲ್ಕನೆಯ ಅಕ್ಷರಗಳಾದ ಮಹಾ ಪ್ರಾಣಗಳನ್ನು ಬರೆಯಿರಿ

೩. ಮಹಾ ಪ್ರಾಣಗಳಿರುವ ಐದು ಪದಗಳನ್ನು ಬರೆಯಿರಿ.

* * *

ಅನುನಾಸಿಕ

'ನಾಸಿಕ' ಎಂದರೆ ಮೂಗು.

ಮೂಗಿನ ಸಹಾಯದಿಂದ ಉಚ್ಚಾರ ಮಾಡುವ ವ್ಯಂಜನಗಳಿಗೆ 'ಅನುನಾಸಿಕ' ಎನ್ನುವರು.

ಪ್ರತಿ ವರ್ಗಗಳಾದ ಕವರ್ಗ, ಚವರ್ಗ, ಟವರ್ಗ, ತವರ್ಗ ಮತ್ತು ಪವರ್ಗ–ಈ ಐದೂ ವರ್ಗಗಳ ಕೊನೆಯ ಅಕ್ಷರಗಳಾದ ಙ್, ಞ್, ಣ್, ನ್ ಮತ್ತು ಮ್–ಒಟ್ಟು ಈ ಐದೂ ವ್ಯಂಜನಗಳೇ ಅನುನಾಸಿಕಗಳು.

ಕವರ್ಗ	ಙ್
ಚವರ್ಗ	ಞ್
ಟವರ್ಗ	ಣ್
ತವರ್ಗ	ನ್
ಪವರ್ಗ	ಮ್

ಅಭ್ಯಾಸ

೧. ಅನುನಾಸಿಕಾಕ್ಷರಗಳನ್ನು ಬರೆಯಿರಿ.

೨. ಅನುನಾಸಿಕಾಕ್ಷರಗಳಿರುವ ಹತ್ತು ಪದಗಳ ಪಟ್ಟಿಯೊಂದನ್ನು ನೀಡಿರಿ.

* * *

ಅವರ್ಗೀಯ ವ್ಯಂಜನಗಳು

ಅಲ್ಪ ಪ್ರಾಣ, ಮಹಾ ಪ್ರಾಣ ಮತ್ತು ಅನುನಾಸಿಕ ಎಂಬ ವರ್ಗೀಯ ವ್ಯಂಜನಗಳ ಐದು ವರ್ಗಗಳ ಐದೈದು ವ್ಯಂಜನಗಳ ಗುಂಪಿಗೆ ಒಳಪಡದ ಇನ್ನು ಒಂಬತ್ತು ವ್ಯಂಜನಗಳಿವೆ. ಈ ವರ್ಗಗಳಿಗೆ ಒಳಪಡದ ಈ ವ್ಯಂಜನಗಳನ್ನು 'ಅವರ್ಗೀಯ ವ್ಯಂಜನ' ಗಳೆನ್ನುವರು.

ಯ್, ರ್, ಲ್, ವ್, ಶ್, ಷ್, ಸ್, ಹ್, ಳ್

ಅಭ್ಯಾಸ

೧. ಅವರ್ಗೀಯ ವ್ಯಂಜನಗಳನ್ನು ಬರೆಯಿರಿ

೨. ಶ, ಷ, ಸ ಅಕ್ಷರಗಳಿರುವ ಎರಡೆರಡು ಪದಗಳನ್ನು ಬರೆಯಿರಿ.

೩. ಅವರ್ಗೀಯ ವ್ಯಂಜನ ಎಂದರೇನು ?

ಹೆಚ್ಚಿನ ತಿಳಿವಳಿಕೆ

ಅವರ್ಗೀಯ ವ್ಯಂಜನಗಳ ಮೊದಲ ನಾಲ್ಕು ಅಕ್ಷರಗಳಾದ ಯ್, ರ್, ಲ್ ಮತ್ತು ವ್– ಈ ವ್ಯಂಜನಗಳನ್ನು 'ಯಣ್' ಅಕ್ಷರಗಳು ಎನ್ನುತ್ತಾರೆ. 'ಯಣ್' ಸಂಧಿಯ ಪ್ರಕ್ರಿಯೆಯಲ್ಲಿ ಈ ಅಕ್ಷರಗಳ ಭಾಗವಹಿಕೆ ಇವೆ.

ಹಳಗನ್ನಡದಲ್ಲಿ 'ಱ' (ಶಕಟ ರೇಫ), 'ೞ' (ರಳ) ಗಳೆಂಬ ಎರಡು ಅಕ್ಷರಗಳಿದ್ದವು. ಅವು ಕನ್ನಡದ್ದೇ ಅಕ್ಷರಗಳು. ಆದರೆ ಕಾಲಾನುಕ್ರಮದಲ್ಲಿ ಈ ಅಕ್ಷರಗಳ ಉಚ್ಚಾರಣೆಯಲ್ಲಿ ಭೇದಗಳುಂಟಾಗಿ ಈ ಅಕ್ಷರಗಳನ್ನು ಹೊಸಗನ್ನಡದಲ್ಲಿ ಕೈಬಿಡಲಾಗಿದೆ.

ಕನ್ನಡ ಅಕ್ಷರ ಮಾಲೆಯಲ್ಲಿ ಈಗಿರುವ 'ಳ' ಕಾರವನ್ನು "ಕುಳ ಳಕಾರ"ವೆನ್ನುತ್ತಾರೆ.

ಇದು ದೇಸಿ ಅಕ್ಷರ, ಎಂದರೆ ಕನ್ನಡದ್ದೇ.

ಇದೇ "ಕುಳ ಳಕಾರ" ದ ಲಿಪಿಯಾದ 'ಳ' ವನ್ನೇ ಕನ್ನಡದಲ್ಲಿ ಬಳಕೆಯಲ್ಲಿರುವ ಸಂಸ್ಕೃತದ ಪದಗಳಲ್ಲಿ ಬರುವ 'ಲ' ಕ್ಕೆ ಬದಲು ಕೆಲವು ಸಲ ಬಳಸುವುದುಂಟು.

ಸಂಸ್ಕತದ 'ಲ' ಕ್ಕೆ ಬದಲು ಕನ್ನಡದಲ್ಲಿ ಬಳಸುವ 'ಳ' ಕಾರಕ್ಕೆ "ಕ್ಷಳ ಳಕಾರ" ಎನ್ನುವರು.

* * *

ಗುಣಿತಾಕ್ಷರ

'ಗುಣಿತ' ಎಂದರೆ ಗುಣಾಕಾರ, ಹೆಚ್ಚು ಮಾಡಿಕೊಳ್ಳುವುದು ಎಂದರ್ಥ.

ಒಂದು ವ್ಯಂಜನದ ಮುಂದೆ ಒಂದು ಸ್ವರ ಸೇರಿಸಿ ಉಚ್ಚಾರ ಮಾಡುವ ಅಕ್ಷರಕ್ಕೆ ಗುಣಿತಾಕ್ಷರ ಎಂದು ಹೆಸರು.

	ವ್ಯಂಜನ	+	ಸ್ವರ	=	ಗುಣಿತಾಕ್ಷರ
೧.	ಕ್	+	ಅ	=	ಕ
೨.	ಗ್	+	ಇ	=	ಗಿ
೩.	ಚ್	+	ಉ	=	ಚು
೪.	ತ್	+	ಎ	=	ತೆ
೫.	ಮ್	+	ಒ	=	ಮೊ
೬.	ಶ್	+	ಋ	=	ಶೃ

ಇವುಗಳಲ್ಲಿ ಕ್, ಗ್, ಚ್, ತ್, ಮ್ ಮತ್ತು ಶ್– ಇವುಗಳು ವ್ಯಂಜನಗಳು.

ಇವುಗಳಿಗೆ ಕ್ರಮವಾಗಿ ಅ, ಇ,ಉ,ಎ,ಒ ಮತ್ತು ಋ –ಈ ಸ್ವರಗಳು ಸೇರಿ

ಕ, ಗಿ, ಚು, ತೆ, ಮೊ ಮತ್ತು ಶೃ– ಎಂಬ ಗುಣಿತಾಕ್ಷರಗಳು ಉಂಟಾಗಿವೆ.

ಅಭ್ಯಾಸ

೧. 'ಬ್' ವ್ಯಂಜನಕ್ಕೆ ಸವರ್ಣ ದೀರ್ಘಸ್ವರಗಳನ್ನು ಸೇರಿಸಿ ಗುಣಿತಾಕ್ಷರಗಳನ್ನು ರೂಪಿಸಿ

೨. 'ನ್' ವ್ಯಂಜನಕ್ಕೆ ಸಂಧ್ಯಕ್ಷರಗಳನ್ನು ಸೇರಿಸಿ ಗುಣಿತಾಕ್ಷರಗಳನ್ನು ರೂಪಿಸಿ

೩. 'ಜ' 'ಯ್ಯೆ' ಮತ್ತು 'ಲೌ' – ಈ ಗುಣಿತಾಕ್ಷರಗಳು ಯಾವ ವ್ಯಂಜನ ಮತ್ತು ಸ್ವರಗಳು ಸೇರಿ ರೂಪುಗೊಂಡಿವೆ ? ಬಿಡಿಸಿ ತೋರಿಸಿ.

* * *

ಕಾಗುಣಿತ

ವರ್ಗೀಯ ವ್ಯಂಜನಗಳು (೨೫) ಮತ್ತು ಅವರ್ಗೀಯ ವ್ಯಂಜನಗಳು (೯) ಒಟ್ಟು ಈ ಮೂವತ್ನಾಲ್ಕು ವ್ಯಂಜನಗಳಿಗೆ ಸ್ವರಗಳು (೧೪) ಮತ್ತು ಅನುಸ್ವಾರ, ವಿಸರ್ಗಗಳಾದ ಯೋಗವಾಹಗಳು (೨) – ಈ ೧೬ ಅಕ್ಷರಗಳನ್ನು ಸೇರಿಸಿ ರೂಪಿಸಿಕೊಳ್ಳುವ ಗುಣಿತಾಕ್ಷರಗಳ ಕ್ರಮಬದ್ಧವಾದ ಪಟ್ಟಿಯನ್ನು ಕಾಗುಣಿತ ಎಂದು ಕರೆಯುವರು.

ಈ ಕಾಗುಣಿತ ಪಟ್ಟಿಯಲ್ಲಿ [೨೫ + ೯ = ೩೪] ಅಕ್ಷರಗಳನ್ನು [೧೪ + ೨ = ೧೬] ಅಕ್ಷರಗಳಿಂದ ಗುಣಿಸಿದರೆ ಬರುವ ೫೪೪ ಅಕ್ಷರಗಳಿರುತ್ತವೆ.

ಒಂದು ವ್ಯಂಜನಕ್ಕೆ ಎಲ್ಲಾ ಸ್ವರಗಳು ಮತ್ತು ಯೋಗವಾಹಗಳನ್ನು ಸೇರಿಸಿ ನೋಡೋಣ.

'ಕ್' ವ್ಯಂಜನಕ್ಕೆ ಹೀಗೆ ಸೇರಿಸಿದರೆ ರೂಪುಗೊಳ್ಳುವ ಗುಣಿತಾಕ್ಷರಗಳು :

'ಕ್' + ಎಲ್ಲಾ ಸ್ವರಗಳು ಮತ್ತು ೨ ಯೋಗವಾಹಗಳು :

ಕ ಕಾ ಕಿ ಕೀ ಕು ಕೂ ಕೃ ಕೄ ಕೆ ಕೇ ಕೈ ಕೊ ಕೋ ಕೌ ಕಂ ಕಃ

ಅಭ್ಯಾಸ

೧. ಕಾಗುಣಿತ ಎಂದರೇನು ?

೨. ಯಾವುದಾದರೂ ಐದು ವ್ಯಂಜನಗಳ ಕಾಗುಣಿತಾಕ್ಷರಗಳನ್ನು ರೂಪಿಸಿ.

೩. ಒಟ್ಟು ಕಾಗುಣಿತಾಕ್ಷರಗಳ ಪಟ್ಟಿಯನ್ನು ಬರೆಯಿರಿ.

* * *

ಸ್ವರ ಚಿಹ್ನೆಗಳು

ವ್ಯಂಜನಗಳಿಗೆ ಸ್ವರ ಸೇರಿಸಿದಾಗ ಆಗುವ ಗುಣಿತಾಕ್ಷರದ ಲಿಪಿಸ್ವರೂಪ ಬದಲಾಗುತ್ತದೆ.

ವ್ಯಂಜನಗಳಿಗೆ ಸೇರುವ 'ಅ' ಇಂದ 'ಔ' ವರೆಗಿನ ೧೪ ಸ್ವರಗಳು ಮತ್ತು 'ಅಂ' ಮತ್ತು 'ಅಃ' ಎಂಬ ಯೋಗವಾಹಗಳಿಗೆ ನಿರ್ದಿಷ್ಟ ರೀತಿಯ ಚಿಹ್ನೆಗಳ ಗುರುತಿದೆ.

ಈ ಚಿಹ್ನೆಗಳಿಗೆ ಸ್ವರ ಚಿಹ್ನೆ ಎನ್ನುವರು.

ಸ್ವರ ಚಿಹ್ನೆಗಳ ಪಟ್ಟಿ

ಕ್ರ.ಸಂ	ಸ್ವರ	ಸ್ವರ ಚಿಹ್ನೆ	ಹೆಸರು
೧.	ಅ	‍ೕ	ತಲೆಕಟ್ಟು
೨.	ಆ	ಾ	ತಲೆಕಟ್ಟಿನ ದೀರ್ಘ
೩.	ಇ	ಿ	ಗುಡಸಿ
೪.	ಈ	ೀ	ಗುಡಸಿನ ದೀರ್ಘ
೫.	ಉ	ು	ಕೊಂಬು
೬.	ಊ	ೂ	ಕೊಂಬಿನ ದೀರ್ಘ
೭.	ಋ	ೃ	ಒಟರ್ ಸುಳಿ
೮.	ೠ	ೄ	ಒಟರ್ ಸುಳಿ ದೀರ್ಘ
೯.	ಎ	ೆ	ಏತ್ವ
೧೦.	ಏ	ೇ	ಏತ್ವನ ದೀರ್ಘ
೧೧.	ಐ	ೈ	ಐತ್ವ
೧೨.	ಒ	ೊ	ಓತ್ವ
೧೩.	ಓ	ೋ	ಓತ್ವನ ದೀರ್ಘ
೧೪.	ಔ	ೌ	ಔತ್ವ

	ಯೋಗವಾಹ	ಚಿಹ್ನೆ	ಹೆಸರು
೧.	ಂ	ಂ	ಅನುಸ್ವಾರ
೨.	ಃ	ಃ	ವಿಸರ್ಗ

ಈಗ 'ಲ್' ವ್ಯಂಜನಕ್ಕೆ ಈ ಚಿಹ್ನೆಗಳನ್ನು ಸೇರಿಸಿ ನೋಡೋಣ.

ಲ್ ಲ ಲಾ ಲಿ ಲೀ ಲು ಲೂ ಲೃ ಲೄ ಲೆ ಲೇ ಲೈ ಲೊ ಲೋ ಲೌ ಲಂ ಲಃ

ಅಭ್ಯಾಸ

೧. ಸ್ವರ ಚಿಹ್ನೆಗಳು ಎಂದರೇನು ?

೨. ಸ್ವರ ಚಿಹ್ನೆಗಳನ್ನು ಬರೆಯಿರಿ.

೩. 'ಟ್' ವ್ಯಂಜನಕ್ಕೆ ಸ್ವರ ಚಿಹ್ನೆಗಳನ್ನು ಸೇರಿಸಿ ಬರೆಯಿರಿ.

ಹೆಚ್ಚಿನ ತಿಳಿವಳಿಕೆ

ಮೇಲ್ಕಂಡ ಸ್ವರ ಚಿಹ್ನೆಗಳಲ್ಲಿ ಒಟರ್ ಸುಳಿ, ಒಟರ್ ಸುಳಿ ದೀರ್ಘ ಮತ್ತು ಐತ್ವ–ಇವುಗಳ ಚಿಹ್ನೆಗಳನ್ನು ವ್ಯಂಜನಕ್ಕೆ ಸೇರಿಸಿದಾಗ ಕಾಣುವ ಅಕ್ಷರದ ಲಿಪಿರೂಪವು ಸಂಯುಕ್ತಾಕ್ಷರದಂತೆ (ಒತ್ತಕ್ಷರದಂತೆ) ಕಾಣುತ್ತದೆ. ಆದರೆ ಆ ಅಕ್ಷರದ ಲಿಪಿರೂಪವು ಗುಣಿತಾಕ್ಷರವೇ ಹೊರತು ಒತ್ತಕ್ಷರವಲ್ಲ ಎಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕು.

ಕನ್ನಡದ ಮಗ್ಗಿ ಪುಸ್ತಕಗಳಲ್ಲಿ ಕಾಗುಣಿತದ ಪಟ್ಟಿಯನ್ನು ಸಮಗ್ರವಾಗಿ ನೀಡಿರುತ್ತಾರೆ.

* * *

ಸಂಯುಕ್ತಾಕ್ಷರ

[ಒತ್ತಕ್ಷರ]

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳು ಒಟ್ಟಿಗೆ ಸೇರಿ ಉಚ್ಚಾರವಾದರೆ ಅದಕ್ಕೆ ಸಂಯುಕ್ತಾಕ್ಷರವೆನ್ನುವರು. ರೂಢಿಯಲ್ಲಿ ಸಂಯುಕ್ತಾಕ್ಷರವನ್ನು ಒತ್ತಕ್ಷರ ಎನ್ನುತ್ತಾರೆ.

'ಶಬ್ದ' ಎಂಬ ಪದವನ್ನು ಗಮನಿಸಿ.

ಈ ಪದದಲ್ಲಿ ಶ್ ಅ ಬ್ ದ್ ಮತ್ತು ಅ ಎಂಬ ಐದು ಅಕ್ಷರಗಳಿವೆ.

'ಬ್ದ' ಎಂಬ ಅಕ್ಷರದಲ್ಲಿ ಬ್, ದ್ ಮತ್ತು ಅ ಎಂಬ ಮೂರು ಅಕ್ಷರಗಳಿವೆ.

ಈ 'ಬ್ದ' ಅಕ್ಷರದಲ್ಲಿರುವ ಮೇಲ್ಕಂಡ ಮೂರು ಅಕ್ಷರಗಳಲ್ಲಿ ಕೊನೆಯ ಸ್ವರ 'ಅ' ಬಿಟ್ಟರೆ ಉಳಿಯುವುದ 'ಬ್' ಮತ್ತು 'ದ್' ಎಂಬ ಎರಡು ವ್ಯಂಜನಗಳು. ಹೀಗೆ 'ಶಬ್ದ' ಪದದಲ್ಲಿ ಎರಡು ವ್ಯಂಜನಗಳು ಒಟ್ಟಿಗೆ ಬಂದಿರುವುದರಿಂದ ಇದು ಸಂಯುಕ್ತಾಕ್ಷರ ಅಥವಾ ಒತ್ತಕ್ಷರ.

ಒತ್ತಕ್ಷರವನ್ನು ಲಿಪಿರೂಪದಲ್ಲಿ ಬರೆಯುವಾಗ ಒತ್ತಕ್ಷರದ ಒತ್ತನ್ನು ಮೊದಲ ಅಕ್ಷರದ ಕೆಳಗೆ ಒಂದು ಚಿಹ್ನೆಯಾಗಿ ಬರೆಯುತ್ತಾರೆ. ಇದು ಕನ್ನಡ ಭಾಷೆಯ ಲಿಪಿಯ ವಿಶೇಷ. ಒತ್ತಕ್ಷರದ ಉಚ್ಚಾರಣೆಯಲ್ಲಿ ಮೊದಲ ಅಕ್ಷರದ ಅಡಿಯಲ್ಲಿ ಒತ್ತಿನ ಚಿಹ್ನ ರೂಪದಲ್ಲಿ ಬಂದ ಅಕ್ಷರವನ್ನು ಸ್ವರಸಹಿತವಾಗಿ ಅರ್ಥಾತ್ ಗುಣಿತಾಕ್ಷರವಾಗಿ ಉಚ್ಚಾರ ಮಾಡುತ್ತಾರೆ. ಲಿಪಿಯಲ್ಲಿ ಪೂರ್ಣ ರೂಪದಲ್ಲಿರುವ ಮೊದಲ ಅಕ್ಷರವನ್ನು ವ್ಯಂಜನವಾಗಿ ಉಚ್ಚಾರ ಮಾಡುತ್ತಾರೆ.

'ಬ್ದ' ಎಂಬ ಒತ್ತಕ್ಷರದಲ್ಲಿ 'ಬ' ಅಕ್ಷರವನ್ನು 'ಬ್' ಎಂದು ವ್ಯಂಜನವಾಗಿಯೂ,

'್ದ' ಎಂಬ ಒತ್ತಿನ ಚಿಹ್ನೆಯನ್ನು 'ದ' ಎಂಬ ಗುಣಿತಾಕ್ಷರವಾಗಿ (ಸ್ವರಸಹಿತ)ವಾಗಿಯೂ ಉಚ್ಚಾರ ಮಾಡುತ್ತಾರೆ.

ಅಭ್ಯಾಸ

೧. ಸಂಯುಕ್ತಾಕ್ಷರ ಎಂದರೇನು ?

೨. ಸಂಯುಕ್ತಾಕ್ಷರಕ್ಕಿರುವ ಮತ್ತೊಂದು ಹೆಸರೇನು ?

೩. ಸಂಯುಕ್ತಾಕ್ಷರಗಳಿರುವ ಐದು ಶಬ್ದಗಳನ್ನು ಬರೆಯಿರಿ.

೪. ಕೃ, ಕೈ ಮತ್ತು ಕ್ರು – ಈ ಮೂರು ಅಕ್ಷರಗಳನ್ನು ಬಿಡಿಸಿ ಬರೆಯಿರಿ

* * *

ಪಾಠ–೨೦

ಸಜಾತೀಯ ಸಂಯುಕ್ತಾಕ್ಷರ

[ದ್ವಿತ್ವ]

ಒಂದೇ ವ್ಯಂಜನ ಒಟ್ಟಿಗೆ ಎರಡು ಸಲ ಬಂದರೆ ಅದನ್ನು ಸಜಾತೀಯ ಸಂಯುಕ್ತಾಕ್ಷರ ಎನ್ನುತ್ತಾರೆ. ಸಜಾತೀಯ ಸಂಯುಕ್ತಾಕ್ಷರವನ್ನು ದ್ವಿತ್ವ ಎಂದೂ ಕರೆಯುವುದುಂಟು. ದ್ವಿತ್ವ ಎಂದರೆ ಎರಡರ ಭಾವ ಎಂದರ್ಥ.

ಅಕ್ಕ ಅಣ್ಣ ಈ ಎರಡು ಶಬ್ದಗಳಲ್ಲಿ 'ಕ್' ಮತ್ತು 'ಣ್' ವ್ಯಂಜನಗಳು ಕ್ರಮವಾಗಿ ಎರಡು ಸಲ ಒಟ್ಟಿಗೆ ಬಂದಿವೆ. ಆದ್ದರಿಂದ ಕ್ಕ ಮತ್ತು ಣ್ಣ ಇವು ಸಜಾತೀಯ ಸಂಯುಕ್ತಾಕ್ಷರಗಳು ಅರ್ಥಾತ್ ದ್ವಿತ್ವಗಳು.

ಅಭ್ಯಾಸ

೧. ತ ಅಕ್ಷರದ ಸಜಾತೀಯ ಸಂಯುಕ್ತಾಕ್ಷರವಿರುವ ಐದು ಶಬ್ದಗಳನ್ನು ಬರೆಯಿರಿ

೨. ಸಜಾತೀಯ ಸಂಯುಕ್ತಾಕ್ಷರಕ್ಕೆ ಮತ್ತೊಂದು ಹೆಸರೇನು ?

೩. ಗ ಮತ್ತು ರ ಅಕ್ಷರಗಳ ಸಜಾತೀಯ ಸಂಯುಕ್ತಾಕ್ಷರ ಲಿಪಿರೂಪಗಳನ್ನು ನೀಡಿರಿ.

ಹೆಚ್ಚಿನ ತಿಳಿವಳಿಕೆ

ಕನ್ನಡದಲ್ಲಿ ಬಳಕೆಯಲ್ಲಿರುವ ಎಲ್ಲ ಸಂಬಂಧಗಳನ್ನೂ ಸೂಚಿಸುವ ಹೆಚ್ಚಿನ ಶಬ್ದ ರೂಪಗಳಲ್ಲಿ ಸಜಾತೀಯ ಸಂಯುಕ್ತಾಕ್ಷರ (ಅಥವಾ ದ್ವಿತ್ವ) ಗಳಿರುವುದನ್ನು ಗಮನಿಸಿ.

ಸಂಬಂಧ ಸೂಚಕ ಶಬ್ದ ರೂಪಗಳು :

ಅಮ್ಮ ಅಪ್ಪ ಅಣ್ಣ ಅಕ್ಕ ತಮ್ಮ ಅಜ್ಜ ಅಜ್ಜಿ ಅತ್ತೆ ಚಿಕ್ಕಪ್ಪ ಚಿಕ್ಕಮ್ಮ

ದೊಡ್ಡಪ್ಪ ದೊಡ್ಡಮ್ಮ ಅತ್ತಿಗೆ ಶಡ್ಡಕ

* * *

ವಿಜಾತೀಯ ಸಂಯುಕ್ತಾಕ್ಷರ

ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಬೇರೆ ಬೇರೆ ವ್ಯಂಜನಗಳು ಒಟ್ಟಿಗೆ ಬಂದರೆ ಅದನ್ನು ವಿಜಾತೀಯ ಸಂಯುಕ್ತಾಕ್ಷರವೆನ್ನುವರು. ವಿಜಾತಿ ಎಂದರೆ ಬೇರೆ ಬೇರೆಯದು ಎಂದರ್ಥ.

'ಶಬ್ದ' ಎಂಬ ಪದದಲ್ಲಿ ಬರುವ ಬ್ ಮತ್ತು ದ್ ವ್ಯಂಜನಗಳು ಒಟ್ಟಿಗೆ ಬಂದಿವೆ ಮತ್ತು ಅವು ಬೇರೆ ಬೇರೆ ವ್ಯಂಜನಗಳು. ಆದ್ದರಿಂದ 'ಶಬ್ದ' ಪದದಲ್ಲಿ ಬರುವ 'ಬ್ದ' ಅಕ್ಷರವು ವಿಜಾತೀಯ ಸಂಯುಕ್ತಾಕ್ಷರ.

'ಇಸ್ತ್ರಿ' ಎಂಬ ಶಬ್ದದ 'ಸ್ತ್ರಿ' ಅಕ್ಷರವನ್ನು ಗಮನಿಸಿ. ಈ ಅಕ್ಷರದಲ್ಲಿ ಸ್ ತ್ ಮತ್ತು ರ್ ಎಂಬ ಮೂರು ವ್ಯಂಜನಗಳು ಒಟ್ಟಿಗೆ ಬಂದಿವೆ. ಇಲ್ಲಿ 'ಸ್ತ್ರಿ' ಅಕ್ಷರ ವಿಜಾತೀಯ ಸಂಯುಕ್ತಾಕ್ಷರ.

ಅಭ್ಯಾಸ

೧. ವಿಜಾತೀಯ ಸಂಯುಕ್ತಾಕ್ಷರ ಎಂದರೇನು ?

೨. ಕ ಮತ್ತು ತ ಅಕ್ಷರಗಳಿರುವ ಸಂಯುಕ್ತಾಕ್ಷರದ ಐದು ಪದಗಳ ಪಟ್ಟಿಯನ್ನು ನೀಡಿ.

ಹೆಚ್ಚಿನ ತಿಳಿವಳಿಕೆ

ಸ್ವರ ಚಿಹ್ನೆಯಾದ ಐತ್ವ ೃ ಮತ್ತು ಯ ಅಕ್ಷರದ ಒತ್ತಿಗೆ ್ಯ ಇರುವ ವ್ಯತ್ಯಾಸವನ್ನು ಗಮನಿಸಿ.

ಲಿಪಿ ರೂಪದಲ್ಲಿ ಅವೆರಡಕ್ಕೂ ಸ್ವಲ್ಪ ಸಾಮ್ಯವಿದೆ.

ಹಾಗೆಯೇ ಶ ಮತ್ತು ಳ ಅಕ್ಷರದ ಒತ್ತು ಒಂದೇ ರೀತಿ ಇರುವಂತೆ ಕಂಡುಬಂದರೂ ಅವೆರಡಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಬೇಕು.

* * *

ಸಂಯುಕ್ತಾಕ್ಷರದ ಚಿಹ್ನೆಗಳು

[ಒತ್ತಕ್ಷರದ ಚಿಹ್ನೆಗಳು]

ಪ್ರತಿಯೊಂದು ವ್ಯಂಜನಕ್ಕೂ ಇನ್ನೊಂದು ವ್ಯಂಜನದ ಒತ್ತನ್ನು ಲಿಪಿರೂಪದಲ್ಲಿ ಕೊಟ್ಟು ಬರೆಯಬೇಕಾದರೆ ಮೊದಲ ವ್ಯಂಜನದ ಕೆಳಗಡೆ ಒತ್ತನ್ನು ಬರೆಯಬೇಕು.

ಕ್ತ ಇಲ್ಲಿ ಮೊದಲ ವ್ಯಂಜನ ಕ್. ಇದನ್ನು ಮೊದಲು ಬರೆಯಬೇಕು. ನಂತರದ ವ್ಯಂಜನ ತ್. ಇದರ ಒತ್ತನ್ನು ಕ ಗುಣಿತಾಕ್ಷರದ ಕೆಳಗಡೆ ಬರೆದು ಕ್ತ ಎಂದು ನಮೂದಿಸಬೇಕು.

ಒಂದೊಂದು ವ್ಯಂಜನದ ಒತ್ತಿಗೂ ಒಂದೊಂದು ಚಿಹ್ನೆ ಇದೆ. ಈ ಚಿಹ್ನೆಗಳನ್ನು ಸಂಯುಕ್ತಾಕ್ಷರದ ಚಿಹ್ನೆ ಅಥವಾ ಒತ್ತಕ್ಷರದ ಚಿಹ್ನೆ ಎನ್ನುವರು.

ಸಂಯುಕ್ತಾಕ್ಷರದ ಚಿಹ್ನೆಗಳ ಪಟ್ಟಿ

ವ್ಯಂಜನ	ಕ್	ಖ್	ಗ್	ಘ್	ಙ್	ಚ್	ಛ್	ಜ್	ಝ್	ಞ್
ಒತ್ತು ಚಿಹ್ನೆ	್ಕ	್ಖ	್ಗ	್ಘ	್ಙ	್ಚ	್ಛ	್ಜ	್ಝ	್ಞ
ವ್ಯಂಜನ	ಟ್	ಠ್	ಡ್	ಢ್	ಣ್	ತ್	ಥ್	ದ್	ಧ್	ನ್
ಒತ್ತು ಚಿಹ್ನೆ	್ಟ	್ಠ	್ಡ	್ಢ	್ಣ	್ತ	್ಥ	್ದ	್ಧ	್ನ
ವ್ಯಂಜನ	ಪ್	ಫ್	ಬ್	ಭ್	ಮ್					
ಒತ್ತು ಚಿಹ್ನೆ	್ಪ	್ಫ	್ಬ	್ಭ	್ಮ					
ವ್ಯಂಜನ	ಯ್	ರ್	ಲ್	ವ್	ಶ್	ಷ್	ಸ್	ಹ್	ಳ್	
ಒತ್ತು ಚಿಹ್ನೆ	್ಯ	್ರ	್ಲ	್ವ	್ಶ	್ಷ	್ಸ	್ಹ	್ಳ	

* * *

ಪದವನ್ನು ಕುರಿತ ವಿಚಾರಗಳು

೧. ಪದ

ಒಂದು ಅಥವಾ ಹೆಚ್ಚಿನ ಅಕ್ಷರಗಳ ಗುಂಪಿಗೆ ಒಂದು ನಿಗದಿತ ಅರ್ಥವಿದ್ದರೆ ಆ ಅಕ್ಷರಗಳ ಗುಂಪಿಗೆ ಪದ ಎನ್ನುವರು. ಪದದ ಮೂಲ ರೂಪವನ್ನು ಪ್ರಕೃತಿ ಎನ್ನುತ್ತಾರೆ. ಪ್ರಕೃತಿಗೆ ಪ್ರತ್ಯಯಗಳು ಸೇರಿ ಪದವಾಗುತ್ತದೆ.

ಮನೆ ಗುರುಗಳು ದಾರಿಯಲ್ಲಿ ಹೊಟ್ಟೆಗೆ

೨. ಪ್ರಕೃತಿ

ಸ್ವತಂತ್ರವಾದ, ಕನಿಷ್ಠ ಪಕ್ಷದ ಅರ್ಥವುಳ್ಳ ಅಕ್ಷರಗಳ ಗುಂಪಿಗೆ ಪ್ರಕೃತಿ ಎಂದು ಹೆಸರು.

ಮನೆ ಗುರು ದಾರಿ ಹೊಟ್ಟೆ

೩. ಪ್ರತ್ಯಯ

ತನಗೆ ತಾನೇ ಸ್ವತಂತ್ರ ಬಳಕೆ ಮತ್ತು ಅರ್ಥವಿಲ್ಲದ, ಆದರೆ ಪ್ರಕೃತಿ, ಪದಗಳಿಗೆ ಸೇರಿ ಅರ್ಥವನ್ನು ಬದಲಾವಣೆ ಮಾಡುವ ರೂಪಗಳಿಗೆ ಪ್ರತ್ಯಯ ಎನ್ನುತ್ತೇವೆ.

ಅನ್ನು, ಗೆ, ಓಸ್ಕರ, ಗಳು

ಪ್ರಕೃತಿ	+	**ಪ್ರತ್ಯಯ**	=	**ಪದ**
ಗುರು	+	ಗಳು	=	ಗುರುಗಳು
ದಾರಿ	+	ಅಲ್ಲಿ	=	ದಾರಿಯಲ್ಲಿ
ಹೊಟ್ಟೆ	+	ಗೆ	=	ಹೊಟ್ಟೆಗೆ

೪. ಸಾಧಿತ ಪದ

ಇರುವ ಸಹಜಪದಗಳಿಗೆ ಕೆಲವು ಪ್ರತ್ಯಯಗಳನ್ನು ಸೇರಿಸಿ ಕೆಲವು ಬೇರೆ ಪದಗಳನ್ನು ರೂಪಿಸಿಕೊಂಡಾಗ ಅವು ಸಾಧಿತ ಪದಗಳಾಗುತ್ತವೆ.

ಕನ್ನಡ + ಇಸು = ಕನ್ನಡಿಸು

ನೋಡು + ಅ = ನೋಟ

೫. ನಾಮಪದ

ಬಗೆಬಗೆಯ ಹೆಸರುಗಳನ್ನು ತಿಳಿಸುವ ಪದಗಳಿಗೆ ನಾಮಪದ ಎನ್ನುವರು. ಆಧುನಿಕ ಭಾಷಾವಿಜ್ಞಾನಿಗಳು ಇದನ್ನು 'ಹೆಸರುಪದ' ಎನ್ನುತ್ತಾರೆ.

ಹಸು ಹುಡುಗ ಸೀತೆ ಸಂತೋಷ

೬. ಕ್ರಿಯಾಪದ

ಕೆಲಸ ಅಥವಾ ಕ್ರಿಯೆಯನ್ನು ತಿಳಿಸುವ ಪದಗಳಿಗೆ ಕ್ರಿಯಾಪದ ಎನ್ನುವರು, ಇದನ್ನು ಆಧುನಿಕ ಭಾಷಾವಿಜ್ಞಾನಿಗಳು 'ಕೆಲಸಪದ' ಎನ್ನುತ್ತಾರೆ.

ತಿನ್ನು ಓಡು ತೊಳೆ ಹರಿ

೭. ಗುಣವಚನ

ವ್ಯಕ್ತಿ, ವಸ್ತು ಮುಂತಾದವುಗಳ ಗುಣವಿಶೇಷಗಳನ್ನು ತಿಳಿಸುವ ಪದಗಳನ್ನು ಗುಣವಚನ ಎಂದು ಕರೆಯುತ್ತಾರೆ. ಇದನ್ನು ಕನ್ನಡದಲ್ಲಿ 'ಹೆಚ್ಚುಗಾರಿಕೆ ಪದ' ಎನ್ನಬಹುದು.

ಒಳ್ಳೆಯ ಹಸಿರು ದಪ್ಪ

೮. ಕರ್ತೃಪದ

ಒಂದು ವಾಕ್ಯದಲ್ಲಿ ಕೆಲಸ, ಕ್ರಿಯೆ ಮಾಡುವ, ಮಾಡಿರುವ ವ್ಯಕ್ತಿ, ವಸ್ತುಗಳನ್ನು ಸೂಚಿಸುವ ಪದಗಳಿಗೆ ಕರ್ತೃಪದ ಎಂದು ಹೆಸರು.

ಬೆಕ್ಕು ಇಲಿಯನ್ನು ತಿಂದಿತು. –ಈ ವಾಕ್ಯದಲ್ಲಿ 'ಬೆಕ್ಕು' ಕರ್ತೃಪದ.

ಹುಡುಗನು ನಿದ್ದೆ ಮಾಡಿದನು. –ಈ ವಾಕ್ಯದಲ್ಲಿ ಹುಡುಗ ಕರ್ತೃಪದ.

೯. ಕರ್ಮಪದ

ಒಂದು ವಾಕ್ಯದಲ್ಲಿ ಕ್ರಿಯೆಗೆ, ಕೆಲಸಕ್ಕೆ ಗುರಿಯಾದ ವ್ಯಕ್ತಿ, ವಸ್ತುವನ್ನು ಸೂಚಿಸುವ ಪದಗಳಿಗೆ ಕರ್ಮಪದ ಎನ್ನುವರು. ಇದನ್ನು ಕನ್ನಡದಲ್ಲಿ 'ಈಡುಪದ' ಅಥವ 'ಗುರಿಪದ' ಎನ್ನಬಹುದು.

ಕರ್ತೃಪದಕ್ಕೆ ಉದಾಹರಣೆಯಾಗಿ ನೀಡಿರುವ ವಾಕ್ಯಗಳಲ್ಲಿ 'ಇಲಿ' ಮತ್ತು 'ನಿದ್ದೆ' ಈ ಎರಡು ಕರ್ಮಪದಗಳು.

೧೦. ಜೋಡಿಪದ

ಕೆಲವು ಪದಗಳ ಜೊತೆಜೊತೆಯಲ್ಲೇ ರೂಢಿಯಾಗಿ ಅನಿವಾರ್ಯವಾಗಿ ಇನ್ನು ಕೆಲವು ಪದಗಳು ಕೂಡಿಕೊಂಡು ಬರುತ್ತವೆ. ಇವೇ ಜೋಡಿಪದಗಳು.

ಪಾತ್ರೆಪರಡಿ ಸಾಮಾನುಸರಂಜಾಮು ತರಲೆತಾಪತ್ರಯ ಮನೆಮಾರು

೧೧. ಸಮಾಸಪದ

ಎರಡು ಪದಗಳು ಸೇರಿ ಒಂದೇ ಪದವಾಗಿ ತೋರುವಂತೆ ಕಾಣುವುದು. ಇಂತಹ ಪದವನ್ನು ಸಮಾಸಪದ ಅಥವ ಸಮಸ್ತಪದ ಎನ್ನುತ್ತಾರೆ.

ತಲೆನೋವು ಅರಮನೆ ಇಪ್ಪತ್ತೈದು ದಾರಿದೀಪ

೧೨. ಪದಪುಂಜ

ಹಲವು ಪದಗಳು ಕೂಡಿಕೊಂಡು ಬಂದರೆ ಅವನ್ನು ಪದಪುಂಜ ಎನ್ನುವರು. ಪದಪುಂಜವನ್ನು ಪದಗುಚ್ಛ ಎಂದೂ ಪದಸಮುಚ್ಚಯ ಎಂದೂ ಹೇಳುವುದುಂಟು.

ನನ್ನ ಬಟ್ಟೆ ಮನೆಯ ಬಾಗಿಲು ಅಟ್ಟದ ಮೇಲೆ ನಡುವಣ ಸಾಲು

ಅಭ್ಯಾಸ

೧. ಹತ್ತು ಪದಗಳನ್ನು ಬರೆಯಿರಿ

೨. ಒಂದು ವಾಕ್ಯ ಬರೆದು ಅದರಲ್ಲಿ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ

೩. ಐದು ಜೋಡಿಪದಗಳನ್ನು ಬರೆಯಿರಿ.

೪. ಸಮಾಸಪದ, ಪದಪುಂಜಗಳೆದರೇನೆಂದು ಉದಾಹರಣೆಗಳೊಂದಿಗೆ ತಿಳಿಸಿ

* * *

ವಾಕ್ಯವಿಚಾರ

೧. ವಾಕ್ಯ

ಸಂಪೂರ್ಣವಾದ ಅರ್ಥವನ್ನು ನೀಡುವ ಪದಗಳ ಗುಂಪಿಗೆ ವಾಕ್ಯ ಎಂದು ಹೆಸರು.

ನನ್ನ ತಾಯಿ ಪೂಜೆ ಮಾಡುತ್ತಿದ್ದಾರೆ.

ಗುರುಗಳು ನನಗೆ ಪಾಠವನ್ನು ಹೇಳಿಕೊಟ್ಟರು.

ಮಗು ಚೆನ್ನಾಗಿ ನಿದ್ದೆ ಮಾಡುತ್ತಿದೆ.

೨. ಸರಳ ವಾಕ್ಯ

ಒಂದು ಪೂರ್ಣಕ್ರಿಯಾಪದವುಳ್ಳ ಸ್ವತಂತ್ರ ವಾಕ್ಯವನ್ನು ಸರಳ ವಾಕ್ಯ ಅಥವ ಸಾಮಾನ್ಯ ವಾಕ್ಯ ಎನ್ನುತ್ತೇವೆ.

ನದಿ ಹರಿಯುತ್ತಿದೆ.

ಅವರು ಬಂದರು.

೩. ಸಂಯೋಜಿತ ವಾಕ್ಯ

ಎರಡು ಅಥವ ಅನೇಕ ಉಪವಾಕ್ಯಗಳು ಸೇರಿ ರೂಪುಗೊಳ್ಳುವ ವಾಕ್ಯವೇ ಸಂಯೋಜಿತ ವಾಕ್ಯ. ಸಂಯೋಜಿತ ವಾಕ್ಯದೊಳಗಿರುವ ಸರಳ ವಾಕ್ಯವೇ ಉಪವಾಕ್ಯ.

ಅವನಿಗೆ ನಾನು ಬರಲು ಹೇಳಿದ್ದೆ ; ಆದರೆ ಅವನು ಬರಲಿಲ್ಲ.

ಕೆಲವರು ಪಾಠವನ್ನು ಓದುತ್ತಿದ್ದರು ; ಇನ್ನು ಕೆಲವರು ಊಟವನ್ನು ಮಾಡುತ್ತಿದ್ದರು.

೪. ಮಿಶ್ರವಾಕ್ಯ

ಪ್ರಮುಖ ವಾಕ್ಯವೊಂದಕ್ಕೆ ಇತರೆ ಉಪವಾಕ್ಯ ಅಥವ ಉಪವಾಕ್ಯಗಳು ಅಧೀನವಾಗಿ ಸೇರಿದ್ದರೆ ಅವನ್ನು ಮಿಶ್ರವಾಕ್ಯ ಎನ್ನುತ್ತಾರೆ.

ಪುಸ್ತಕವು ಹರಿದು ಹೋಯಿತೆಂದು ಆ ಹುಡುಗನಗೆ ಬೇಸರವಾಯಿತು.

ಮನೆಯೊಳಗೆ ಹಾವು ಬಂದಿತೆಂದು ತಿಳಿದು ಮನೆಮಂದಿಯೆಲ್ಲಾ ಗಾಬರಿಯಾದರು.

೫. ಸಂಯುಕ್ತ ವಾಕ್ಯ

ಎರಡು ಸರಳ ವಾಕ್ಯಗಳು ಮತ್ತು, ಹಾಗೂ ಮುಂತಾದ ಪದಗಳಿಂದ ಜೋಡಣೆಗೊಂಡಿದ್ದರೆ ಅವಕ್ಕೆ ಸಂಯುಕ್ತ ವಾಕ್ಯ ಎನ್ನುವರು.

ಅವಳು ಊಟವನ್ನು ಮಾಡಿದಳು ಮತ್ತು ಕೂಡಲೇ ಮಲಗಿದಳು.

ನನ್ನ ಹೆಂಡತಿಯು ಬಾಗಿಲನ್ನು ತಟ್ಟಿದಳು ಹಾಗೂ ಒಳಗೆ ಬಂದಳು.

೬. ಸಂಕೀರ್ಣ ವಾಕ್ಯ

ಒಂದು ವಾಕ್ಯ ದೀರ್ಘವಾಗಿದ್ದು ಅದನ್ನು ಅರ್ಥ ಮಾಡಿಕೊಳ್ಳಲು ಯೋಚಿಸಬೇಕಾದರೆ ಅಂತಹ ವಾಕ್ಯಗಳಿಗೆ ಸಂಕೀರ್ಣ ವಾಕ್ಯಗಳೆನ್ನುವರು.

ಸಂಸ್ಕೃತದಲ್ಲಿ ವಿಭಕ್ತಿ ಪ್ರತ್ಯಯಗಳು ಈ ರೀತಿ ನಾಮಪದಕ್ಕೂ ಮತ್ತು ಕ್ರಿಯಾ ಪದಕ್ಕೂ ನಡುವಿರುವ ಸಂಬಂಧಗಳನ್ನು ಮಾತ್ರವಲ್ಲದೆ ವಚನಭೇದವನ್ನೂ ಸೂಚಿಸಬೇಕಾಗಿದೆಯಾದ ಕಾರಣ, ಮೇಲೆ ಸೂಚಿಸಿದ ಪ್ರತಿಯೊಂದು ವಿಭಕ್ತಿಯಲ್ಲೂ ಏಕವಚನ, ದ್ವಿವಚನ ಮತ್ತು ಬಹುವಚನಗಳನ್ನು ಸೂಚಿಸಬಲ್ಲ ಮೂರು ಮೂರು ಪ್ರತ್ಯಯಗಳಿವೆ.

ಅಭ್ಯಾಸ

೧. ವಾಕ್ಯ ಎಂದರೇನು ?

೨. ವಾಕ್ಯದ ಬಗೆಗಳನ್ನು ತಿಳಿಸಿ

೩. ಎರಡು ಸಂಯೋಜಿತ ವಾಕ್ಯಗಳನ್ನು ಬರೆಯಿರಿ.

೪. ಒಂದು ಸಂಯುಕ್ತ ವಾಕ್ಯವನ್ನು ಬರೆದು ಅದರಲ್ಲಿ ಬರುವ ಎರಡು ವಾಕ್ಯಗಳನ್ನು ಪ್ರತ್ಯೇಕವಾಗಿ ಗುರುತಿಸಿ.

೫. ಎರಡು ವಾಕ್ಯಗಳನ್ನು ಬರೆದು ಅವುಗಳನ್ನು ಕೂಡಿಸಿ ಒಂದು ಮಿಶ್ರ ವಾಕ್ಯವನ್ನಾಗಿ ಮಾರ್ಪಡಿಸಿ.

* * *

ಸರಪಣಿ

" ಹಣ್ಣು ಸಿಕ್ಕೀತೇ ? ಹಣ್ಣು ಸಿಕ್ಕೀತೇ ? "
–ಹಾರುತಿತ್ತು ಹಕ್ಕಿ
ಅಲ್ಲಿ ಇಲ್ಲಿ ಕುಕ್ಕಿ
–ಹಾರುತಿತ್ತು ಹಕ್ಕಿ.

" ಹಕ್ಕಿ ಸಿಕ್ಕೀತೇ ? ಹಕ್ಕಿ ಸಿಕ್ಕೀತೇ ? "
–ಹುಡುಕುತಿತ್ತು ಬೆಕ್ಕು
' ಸಿಗಲಿ ! ' ಎಂದು ನಕ್ಕು
–ಹುಡುಕುತಿತ್ತು ಬೆಕ್ಕು.

" ಬೆಕ್ಕು ಸಿಕ್ಕೀತೇ ? ಬೆಕ್ಕು ಸಿಕ್ಕೀತೇ ? "
–ಅಲೆಯುತಿತ್ತು ನಾಯಿ
ಬಿಟ್ಟುಕೊಂಡು ಬಾಯಿ
–ಅಲೆಯುತಿತ್ತು ನಾಯಿ.

" ನಾಯಿ ಸಿಕ್ಕೀತೇ ? ನಾಯಿ ಸಿಕ್ಕೀತೇ ? "
–ನೋಡುತಿದ್ದ ಹುಡುಗ
ಕೈಲಿ ಕಲ್ಲು ಮಡಗಿ
–ನೋಡುತಿದ್ದ ಹುಡುಗ.

ಹಣ್ಣನು ನೋಡಿತು ಹಕ್ಕಿ; –ಆ
ಹಕ್ಕಿಯ ನೋಡಿತು ಬೆಕ್ಕು;
ಬೆಕ್ಕನು ನೋಡಿತು ನಾಯಿ; –ಆ
ನಾಯಿಯ ಹುಡುಗನ ತಾಯಿ

ಕಂಡಳು; ಕಂಡೊಡನೆ ಕೂಗಿದಳ್;
" ಅಯ್ಯೋ ! ನಾಯೀ ! ಮಡಿ ! ಮಡೀ !
ಹುಡುಗ ಹಿಗ್ಗಿದ: ಕಲ್ಲು ಬೀರಿದ–
ಕೂಗಿಕೊಳುತ : ಹೊಡಿ ! ಹೊಡೀ ! "

ಕಲ್ಲು ಬಂತು –ಸುಂಯ್ !
ನಾಯಿ ಓಡಿ –ಕುಂಯ್ !
ಬೆಕ್ಕು ನೆಗೆದು –ಸಿರ್ರ್ !
ಹಕ್ಕಿ ಹೋಯ್ತು –ಪುರ್ರ್ !

–ಜಿ. ಪಿ. ರಾಜರತ್ನಂ

ಅಭ್ಯಾಸ

೧. ಈ ಪದ್ಯದಲ್ಲಿ ಬರುವ ದೀರ್ಘಾಕ್ಷರಗಳನ್ನೂ ಒತ್ತಕ್ಷರಗಳನ್ನೂ ಪಟ್ಟಿ ಮಾಡಿ.
೨. ಹಕ್ಕಿ ಹಾರಿ ಹೋಗಿದ್ದು ಏಕೆ ?

೩. ಈ ಪದ್ಯದಲ್ಲಿ ಬರುವ ನಾಮಪದಗಳನ್ನೂ ಕ್ರಿಯಾಪದಗಳನ್ನೂ ಪಟ್ಟಿ ಮಾಡಿ.
೪. ತಾಯಿ ಏನೆಂದು ಕೂಗಿದಳು ?
೫. ಈ ಪದ್ಯದಲ್ಲಿ ಬರುವ ಅನುಕರಣ ಶಬ್ದಗಳನ್ನು ಬರೆಯಿರಿ.
೬. ನಾಯಿಯನ್ನು ಯಾರು ನೋಡಿದರು ?
೭. ಹುಡುಗ ಏನು ಮಾಡಿದ ?
೮. ಈ ಪದ್ಯಕ್ಕೆ ಸರಪಣಿ ಎಂದು ಏಕೆ ಹೆಸರಿಟ್ಟಿದ್ದಾರೆ ?
೯. ಇಲ್ಲಿ ಬರುವ ಲೇಖನ ಚಿಹ್ನೆಗಳನ್ನು ಪಟ್ಟಿ ಮಾಡಿ.

* * *

ಅರ್ಧಚಂದ್ರ

" ದೇವರ ಪೆಪ್ಪರಮೆಂಟೇನಮ್ಮ
ಗಗನದೊಳಲೆಯುವ ಚಂದಿರನು ?
ಎಷ್ಟೇ ತಿಂದರು ಖರ್ಚೇ ಆಗದ
ಬೆಳೆಯುವ ಪೆಪ್ಪರಮೆಂಟಮ್ಮಾ ! "

" ದಿನದಿನ ನೋಡುವೆ ದಿನವೂ ಕರಗುತ
ಎರಡೇ ವಾರದೊಳಳಿಯುವುದು !
ಮತ್ತದು ದಿನ ದಿನ ಹೆಚ್ಚುತ ಬಂದು
ಎರಡೇ ವಾರದಿ ಬೆಳೆಯುವುದು ! "

ಅಕ್ಷಯವಾಗಿಹ ಪೆಪ್ಪರಮೆಂಟದು
ನನಗೂ ದೊರಕುವುದೇನಮ್ಮಾ ?
" ನೀನೂ ದೇವರ ಬಾಲಕನಾಗಲು
ನಿನಗೂ ಕೊಡುವನು ಕಂದಯ್ಯ ! "

" ದೇವರ ಬಾಲಕನಾಗಲು ಒಲ್ಲೆ
ಆತನ ಮೀರಿಹೆ ನೀನಮ್ಮಾ !
ತಾಯಿಯನಗಲಿಸಿ ದೇವರ ಹಿಡಿಸುವ
ಪೆಪ್ಪರಮೆಂಟೂ ಬೇಡಮ್ಮಾ ! "

– ಕುವೆಂಪು

ಅಭ್ಯಾಸ

ಇವುಗಳ ಅರ್ಥ ಬರೆಯಿರಿ :

ಗಗನ ಖರ್ಚು ವಾರ ಅಕ್ಷಯ ಒಲ್ಲೆ ಮೀರು ದೊರಕು

೧. ಇಲ್ಲಿ ಯಾರು ಯಾರಿಗೆ ಸಂವಾದ ನಡೆಯುತ್ತಿದೆ ?
೨. ಚಂದಿರನನ್ನು ಯಾವುದಕ್ಕೆ ಹೋಲಿಸಲಾಗಿದೆ ?
೩. ತಾಯಿಯು ಮಗುವನ್ನು ಏನೆಂದು ಕರೆದಿದ್ದಾಳೆ ?
೪. ಕಂದನು ಪೆಪ್ಪರಮೆಂಟನ್ನು ನಿರಾಕರಿಸುವುದು ಏಕೆ ?
೫. ಅಮ್ಮ–ಕಂದ : ಇವರ ಆತ್ಮೀಯತೆಯನ್ನು ಪದ್ಯದಲ್ಲಿ ಕವಿ ಹೇಗೆ ಹೇಳಿದ್ದಾರೆ ?

ಹೆಚ್ಚಿನ ತಿಳಿವಳಿಕೆ

ಪೆಪ್ಪರಮೆಂಟ್ ಎಂಬುದು ಇಂಗ್ಲಿಷ್ ಭಾಷೆಯ ಪದ. ಅದಕ್ಕೆ 'ಉ' ಪ್ರತ್ಯಯ ಸೇರಿ ಕನ್ನಡದಲ್ಲಿ 'ಪೆಪ್ಪರಮೆಂಟು' ಎಂದಾಗಿದೆ.

ಈ ಪದ್ಯದಲ್ಲಿ ಅಮಾವಾಸ್ಯೆ ಮತ್ತು ಹುಣ್ಣಿಮೆಗಳ ಪ್ರಸ್ತಾಪ ಬರುತ್ತದೆ :
ಎರಡೇ ವಾರದೊಳಳಿಯುವುದು ಎಂಬುದು ಅಮಾವಾಸ್ಯೆಯನ್ನು ಕುರಿತದ್ದಾಗಿದೆ.
ಎರಡೇ ವಾರದಿ ಬೆಳೆಯುವುದು ಎಂಬುದು ಹುಣ್ಣಿಮೆಯನ್ನು ಕುರಿತದ್ದಾಗಿದೆ.
ಈ ಪದ್ಯದಲ್ಲಿ ಚಿತ್ರಿತವಾಗಿರುವ ಚಂದಿರನು ಬಿದಿಗೆಯ ಚಂದಿರ.

* * *

ಮಂಗಗಳ ಉಪವಾಸ

ಬಾಳೆಯ ತೋಟದ
ಪಕ್ಕದ ಕಾಡೊಳು
ವಾಸಿಸುತ್ತಿದ್ದುವು ಮಂಗಗಳು;
ಮಂಗಗಳೆಲ್ಲವು
ಒಟ್ಟಿಗೆ ಸೇರುತ
ಒಂದುಪವಾಸವ ಮಾಡಿದುವು

ಏನು ತಿನ್ನದೆ,
ಮಟಮಟ ನೋಡುತ,
ಇದ್ದುವು ಮರದಲಿ ಕುಳಿತಲ್ಲೆ,
"ನಾಳೆಗೆ ತಿಂಡಿಯ
ಈಗಲೆ ಹುಡುಕುವ
ಬನ್ನಿರಿ" , ಎಂದಿತು ಕಪಿಯೊಂದು.

“ ಹೌದೌದಣ್ಣಾ ” ಎಂ
ದೆನ್ನುತ ಎಲ್ಲವು
ಬಾಳೆಯ ತೋಟಕೆ ಹಾರಿದುವು.
ತೋಟದಿ ಬಾಳೆಯ
ಹಣ್ಣನು ನೋಡಲು
ಆಶೆಯು ಹೆಚ್ಚಿತು, ನೀರೂರಿ.

“ ಸುಲಿದೇ ಇಡುವ
ಆಗದೆ ? ” ಎಂದಿತು
ಆಶೆಯ ಮರಿಕಪಿಯೋಂದಾಗ;
“ ಹೌದೌದೆ” ನ್ನುತ
ಹಣ್ಣನು ಸುಲಿದುವು,
ಕೈಯೊಳೆ ಹಿಡಿದೂ ಕುಳಿತಿರಲು.

“ ಕೈಯಲ್ಲೇತಕೆ
ಬಾಯೊಳಗಿಟ್ಟರೆ
ಆಗದೆ ? ” ಎಂದಿತು ಇನ್ನೊಂದು.
ಹಣ್ಣನು ಬಾಯಲಿ

ಇಟ್ಟವು. " ಜಗಿದೇ
ಇಡುವೆವು " ಎಂದಿತು ಮತ್ತೊಂದು.

ಜಗಿದೂ ಜಗಿದೂ,
ನುಂಗಿದುವೆಲ್ಲಾ
ಆಗಲೆ ಮುಗಿಯಿತು ಉಪವಾಸ.

–ಮಚ್ಚಮಲೆ ಶಂಕರನಾರಾಯಣ ರಾವ್

ಅಭ್ಯಾಸ

೧. ಇವುಗಳ ಅರ್ಥ ಬರೆಯಿರಿ :

ಉಪವಾಸ ತಿಂಡಿ ಆಶೆ ನೀರೂರು ಜಗಿ ನುಂಗು

೨. ನೀರೂರು, ಬಾಯೊಳಗೆ, ಮತ್ತೊಂದು –ಈ ಶಬ್ದಗಳನ್ನು ಬಿಡಿಸಿ ಬರೆಯಿರಿ

೩. ಮಟಮಟ, ಹೌದೌದು, ಜಗಿದೂ ಜಗಿದೂ –ಈ ಪದಗಳ ವಿಶೇಷವೇನು ?

೪. ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ :

೧. ಮಂಗಗಳು ಎಲ್ಲಿ ವಾಸಿಸುತ್ತಿದ್ದವು ?

೨. ಬಾಳೆಯ ಹಣ್ಣನ್ನು ನೋಡಿದ ಕಪಿಗಳಿಗೇನಾಯಿತು ?

೩. ಮರಿ ಕಪಿ ಹೇಳಿದ್ದೇನು ?

೪. "ಹೌದೌದಣ್ಣಾ " ಎಂದು ಹೇಳಿದ್ದು ಯಾರು ?

೫. ಈ ಪದ್ಯದ ಕತೆಯನ್ನು ಸರಳವಾಗಿ ಬರೆಯಿರಿ.

೬. ಈ ಪದ್ಯದಲ್ಲಿ ಬರುವ ಸಂಭಾಷಣೆಗಳನ್ನು ಸಂಗ್ರಹಿಸಿ.

* * *

ಪಾಠ–೨೮

ಹನುಮಂತು

ಹನುಮಂತು !
ಹನುಮಂತು !
ಕೂಗುವುದೇ ತಡ
ಎದ್ದು ನಿಂತಿತಾ
ಮಂಗಣ್ಣ !
ಅಂಗಿ, ಷರಾಯಿಯ
ಹಸುರು ಕುಲಾವಿಯ
ತೊಟ್ಟುಕೊಂಡಿಹ
ಮಂಗಣ್ಣ !

ದೊಡ್ಡ ಪೇಟೆಗೆ
ಅಂಗಡಿ ಬೀದಿಗೆ
ಮನೆಯಜಮಾನರು
ಹೆಜ್ಜೆಯಿಕ್ಕುತ
ಹೋಗುವುದೆಂತು ?
ಹನುಮಂತು !
ಹನುಮಂತು !

ಎರಡೂ ಕೈಗಳ
ಕಟ್ಟುತ ಹಿಂದೆ
ಕತ್ತ ತಗ್ಗಿಸುತ
ಹೊರಟಿತು ನಿಂತು
ಮಂಗಣ್ಣ !
ಮಂಗಣ್ಣ !

ಅತ್ತೆಯ ಮನೆಯಲಿ
ಕೆಲಸವ ಮಾಡಲು
ಯಾರೂ ಇಲ್ಲದೆ
ಕಾಗದ ಬಂದಿದೆ–
ಎಂದು ಹೊರಡುವೆ ?
ಹನುಮಂತು !
ಹನುಮಂತು !

ಸೊಂಟವ ತೋರಿಸಿ
ಕುಂಟತೊಡಗಿತು !

ತಲೆಯನು ತೋರಿಸಿ
ಬಲು ನೋವೆಂದಿತು !
ಅತ್ತೆಯ ಹೆಸರನು
ಕೇಳುತ, ಒಲ್ಲೆನು
ಎಂದು ಕೂತಿತು
ಮಂಗಣ್ಣ !
ಮಂಗಣ್ಣ !
ಅಮ್ಮನ ಮನೆಗೆ
ನಿಮ್ಮ ಊರಿಗೆ
ಹೋಗುವೆಯಂತೆ
ನೋಡುವೆಯಂತೆ–
ಎಂದು ಹೊರಡುವೆ ?
ಹನುಮಂತು !
ಹನುಮಂತು !

ಛಂಗನೆ ಹಾರಿತು !
ಚಿಮ್ಮಿ ನೆಗೆಯಿತು !
ಮೂಟೆಯ ಹೊತ್ತು
ಎದ್ದು ನಿಂತಿತು !
ಸಿದ್ಧವಾಯಿತು !
ಇಂದೇ ಹೊರಡುವೆ
ಎಂದು ನಿಂತಿತು !
ಮಂಗಣ್ಣ !
ಮಂಗಣ್ಣ !

ತ್ರೇತಾಯುಗದಲಿ
ದೇವರ ಬಳಿಯಲಿ
ಉಪ್ಪು ನೀರಿನ
ದೊಡ್ಡ ಸಮುದ್ರವ
ಹೇಗೆ ದಾಟಿದೆ ?
ಹನುಮಂತು !
ಹನುಮಂತು !

ಕೇಳಿದ ಕೂಡಲೆ
ಚಕ್ರವ ಹಿಡಿಯಲು
ಎರಡಡಿ ಎತ್ತರ
ಹಾರಿತು ಒಮ್ಮೆ !

ಚಿಮ್ಮಿ ನೆಗೆಯಿತು
 ಇನ್ನೊಮ್ಮೆ !
 ಮಂಗಣ್ಣ !
 ಮಂಗಣ್ಣ !

ರಾವಣನೆದುರಲಿ
ಬಾಲಬಿಚ್ಚುತಲಿ
ಕೂತಿರೆ ನೀನು,
ಕಿಡಿಕಿಡಿಯಾಗುತ
ಬೆಂಕಿ ಹೊತ್ತಿಸಲು
ಲಂಕೆ ಪಟ್ಟಣವ
ಹೇಗೆ ಸುಟ್ಟೆಯೋ ?
ಹನುಮಂತು !
ಹನುಮಂತು !

ಎರಡು ಕೈಗಳಲಿ
ಬಾಲವ ಹಿಡಿದು
ಸುತ್ತಲಿದ್ದವರ
ಹತ್ತಿರ ಸುಳಿದು
ಬಂದು ಕೂತಿತು
ಪೀಠದ ಮೇಲೆ
 ಮಂಗಣ್ಣ !
 ಮಂಗಣ್ಣ !

ಅದೊ ! ಅಮ್ಮಾವರು
ಬಂದರು ನೋಡು !
ಮಾಡು ಸಲಾಮನು
ಅಕ್ಕಿಯ ಬೇಡು,
 ಹನುಮಂತು !
 ಹನುಮಂತು !

ಸಲಾಮು ಮಾಡಿ
ಬಟ್ಟಲ ನೋಡಿ
ತಲೆ ಮೇಲಿಟ್ಟು
ಹೆಜ್ಜೆಯನಿಟ್ಟು
ಹೊರಟಿತು ಮುಂದೆ !

ರೆಪ್ಪೆಯ ಬಡಿಯುತ
ಕೂತುಕೊಂಡಿತು
 ಮಂಗಣ್ಣ !
 ಮಂಗಣ್ಣ !

ಹೇಳಿದ ಮಾತನು
ಕೇಳುವನಣ್ಣ !
ಹೇಳಿದಂತೆಯೆ
ಮಾಡುವನಣ್ಣ !
 ಹನುಮಂತು !
 ಹನುಮಂತು !

–ಜಿ. ವರದರಾಜ ರಾವ್

ಅಭ್ಯಾಸ

೧. ಹನುಮಂತು ಏನನ್ನು ತೊಟ್ಟುಕೊಂಡಿದ್ದನು ?
೨. ಅತ್ತೆಯ ಮನೆಗೆ ಹೊರಡೆಂದಾಗ ಹನುಮಂತುವಿನ ಪ್ರತಿಕ್ರಿಯೆ ಏನು ?
೩. ಅಮ್ಮನ ಮನೆಗೆ ಹೊರಡೆಂದಾಗ ಹನುಮಂತುವಿನ ಉತ್ಸಾಹ ಹೇಗಿತ್ತು ?
೪. ಸಮುದ್ರ ಹಾರಿದ್ದನ್ನು ಹನುಮಂತು ಹೇಗೆ ನಟಿಸಿ ತೋರಿಸಿದನು ?
೫. ಲಂಕೆ ಪಟ್ಟಣ ಸುಟ್ಟದ್ದನ್ನು ಹನುಮಂತು ಹೇಗೆ ಅಭಿನಯಿಸಿದನು ?
೬. ಹನುಮಂತು ಅಕ್ಕಿಯನ್ನು ಬೇಡಿದ್ದು ಹೇಗೆ ?
೭. ಈ ಪದ್ಯದಲ್ಲಿ ವರ್ಣನೆಯಾಗಿರುವ ಹಾಸ್ಯವನ್ನು ತಿಳಿಸಿ.
೮. ಈ ಪದ್ಯದಲ್ಲಿ ಪ್ರಸ್ತಾಪಗೊಂಡಿರುವ ಪಾತ್ರಗಳ ಪಟ್ಟಿಯನ್ನು ನೀಡಿರಿ.
೯. ಮಂಗ –ಈ ಶಬ್ದಕ್ಕಿರುವ ಇತರ ಪದಗಳನ್ನು ಬರೆಯಿರಿ.

ಹೆಚ್ಚಿನ ತಿಳಿವಳಿಕೆ

ತ್ರೇತಾಯುಗ : ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗಗಳೆಂಬ ನಾಲ್ಕು ಯುಗಗಳಿವೆ ಎಂಬುದು ಒಂದು ಪರಿಕಲ್ಪನೆ. ಪ್ರಸ್ತುತ ನಡೆಯುತ್ತಿರುವುದು ಕಲಿಯುಗವಂತೆ. ಧರ್ಮವು ಕೃತಯುಗದಲ್ಲಿ ನಾಲ್ಕು ಪಾದಗಳ ಮೇಲೂ, ತ್ರೇತಾಯುಗದಲ್ಲಿ ಮೂರು ಪಾದಗಳ ಮೇಲೂ, ದ್ವಾಪರಯುಗದಲ್ಲಿ ಎರಡು ಪಾದಗಳ ಮೇಲೂ ಮತ್ತು ಕಲಿಯುಗದಲ್ಲಿ ಒಂದು ಪಾದದ ಮೇಲೆಯು ನಡೆಯುತ್ತಿದೆಯಂತೆ.

ಹನುಮಂತ : ಇನ್ನೊಂದು ಹೆಸರು ಆಂಜನೇಯ. ಇವನು ವಾನರಶ್ರೇಷ್ಠ. ರಾಮನ ಭಂಟ.

ಚಕ್ರ : ಶ್ರೀ ಕೃಷ್ಣ ಕೈಯಲ್ಲಿ ಹಿಡಿದಿರುವ ಆಯುಧವಾದ ಧರ್ಮ ಚಕ್ರ. ಇದರ ಹೆಸರು ಸುದರ್ಶನ ಚಕ್ರ. ತ್ರೇತಾಯುಗದ ಶ್ರೀ ರಾಮನ ಅವತಾರವೇ ದ್ವಾಪರಯುಗದ ಶ್ರೀ ಕೃಷ್ಣ ಎಂಬುದು ನಮ್ಮ ಜನಪದರ ನಂಬಿಕೆ.

ರಾವಣ : ಲಂಕೆ ಪಟ್ಟಣದ ಚಕ್ರವರ್ತಿ. ಇವನು ರಾಮನ ಪತ್ನಿ ಸೀತೆಯನ್ನು ವನವಾಸದಲ್ಲಿದ್ದಾಗ ಅಪಹರಿಸಿ ತನ್ನ ರಾಜ್ಯಕ್ಕೆ ಕೊಂಡೊಯ್ದನು.

ಲಂಕೆ ಪಟ್ಟಣ : ಲಂಕಾ ಎಂದೂ ಹೆಸರಿದೆ. ಈಗ ಈ ದೇಶಕ್ಕೆ ಶ್ರೀ ಲಂಕ ಎಂದು ಹೆಸರು. ಇದು ರಾವಣನ ರಾಜ್ಯ. ಸೀತೆಯನ್ನು ಅಪಹರಿಸಿದ ರಾವಣನು ತನ್ನ ಪುಷ್ಪಕ ವಿಮಾನದಲ್ಲಿ ಅವಳನ್ನು ಲಂಕೆಗೆ ಕೊಂಡೊಯ್ದು ಅಲ್ಲಿನ ಅಶೋಕ ವನದಲ್ಲಿ ಸೆರೆಯಿಟ್ಟಿದ್ದನು.

* * *

ಕನ್ನಡದ ಅಂಕಿಗಳು

೧.	೧೧.	೨೧.	೩೧.	೪೧	೫೧.	೬೧.	೭೧.	೮೧.	೯೧.
೨.	೧೨.	೨೨.	೩೨.	೪೨.	೫೨.	೬೨.	೭೨.	೮೨.	೯೨.
೩.	೧೩.	೨೩.	೩೩.	೪೩.	೫೩.	೬೩.	೭೩.	೮೩.	೯೩.
೪.	೧೪.	೨೪.	೩೪.	೪೪.	೫೪.	೬೪.	೭೪.	೮೪.	೯೪.
೫.	೧೫.	೨೫.	೩೫.	೪೫.	೫೫.	೬೫.	೭೫.	೮೫.	೯೫.
೬.	೧೬.	೨೬.	೩೬.	೪೬.	೫೬.	೬೬.	೭೬.	೮೬.	೯೬.
೭.	೧೭.	೨೭.	೩೭.	೪೭.	೫೭.	೬೭.	೭೭.	೮೭.	೯೭.
೮.	೧೮.	೨೮.	೩೮.	೪೮.	೫೮.	೬೮.	೭೮.	೮೮.	೯೮.
೯.	೧೯.	೨೯.	೩೯.	೪೯.	೫೯.	೬೯.	೭೯.	೮೯.	೯೯.
೧೦.	೨೦.	೩೦.	೪೦.	೫೦.	೬೦.	೭೦.	೮೦.	೯೦.	೧೦೦.

೧. ಊಟದ ಆಟ

ಒಂದು ಎರಡು
ಬಾಳೆಲೆ ಹರಡು

ಮೂರು ನಾಕು
ಅನ್ನ ಹಾಕು

ಐದು ಆರು
ಬೇಳೇ ಸಾರು

ಏಳು ಎಂಟು
ಪಲ್ಯಕೆ ದಂಟು

ಒಂಬತ್ತು ಹತ್ತು
ಎಲೆ ಮುದಿರೆತ್ತು

ಒಂದರಿಂದ ಹತ್ತು
ಹೀಗಿತ್ತು

ಊಟದ ಆಟವು
ಮುಗಿದಿತ್ತು

– ಜಿ. ಪಿ. ರಾಜರತ್ನಂ

೨. ಹತ್ತು ಹತ್ತು ಇಪ್ಪತ್ತು

ಹತ್ತು ಹತ್ತು ಇಪ್ಪತ್ತು
ತೋಟಕೆ ಹೋದನು ಸಂಪತ್ತು

ಇಪ್ಪತ್ತು ಹತ್ತು ಮುವ್ವತ್ತು
ಕೈಯಲ್ಲೊಂದು ಕಲ್ಲಿತ್ತು

ಮುವ್ವತ್ತು ಹತ್ತು ನಲುವತ್ತು
ಎದುರಿಗೆ ಮಾವಿನ ಮರವಿತ್ತು

ನಲುವತ್ತು ಹತ್ತು ಐವತ್ತು
ಮಾವಿನ ಮರದಲಿ ಕಾಯಿತ್ತು

ಐವತ್ತು ಹತ್ತು ಅರುವತ್ತು
ಕಲ್ಲನು ಬೀರಿದ ಸಂಪತ್ತು

ಅರುವತ್ತು ಹತ್ತು ಎಪ್ಪತ್ತು
ಕಾಯಿಯು ತಪತಪನುದುರಿತ್ತು

ಎಪ್ಪತ್ತು ಹತ್ತು ಎಂಬತ್ತು
ಮಾಲಿಯು ಕಂಡನು ಸಂಪತ್ತು

ಎಂಬತ್ತು ಹತ್ತು ತೊಂಬತ್ತು
ಕಾಲುಗಳೆರಡೂ ಓಡಿತ್ತು

ತೊಂಬತ್ತು ಹತ್ತು ನೂರು
ಓಡಿ ಮನೆಯ ಸೇರು

– ಜಿ. ಪಿ. ರಾಜರತ್ನಂ

* * *

ಲೇಖನ ಚಿಹ್ನೆಗಳು

೧. ಪೂರ್ಣ ವಿರಾಮ .

೨. ಅಲ್ಪ ವಿರಾಮ ,

೩. ವಿವರಣ ವಿರಾಮ :

೪. ಅರ್ಧ ವಿರಾಮ ;

೫. ಪ್ರಶ್ನಾರ್ಥಕ ಚಿಹ್ನೆ ?

೬. ಕೂಡುಗೆರೆ –

೭. ಹಂಸಪಾದ /\

೮. ಅದೆ (ಡಿಟೊ) ,,

೯. ಅಡ್ಡಗೀಟು (ಡೇಶ್) –

೧೦. ಅಚ್ಚರಿ ಚಿಹ್ನೆ !

೧೧. ವಿವರಣ ವಿರಾಮ ಮತ್ತು ಅಡ್ಡಗೀಟು :–

೧೨. ಆದ್ಯಂತ ಅಲ್ಪ ವಿರಾಮ ಅ) ಏಕ ‘ ‘ ಆ) ಇಮ್ಮಡಿ “ ”

೧೩. ಪರ್ಯಾಯ /

೧೪. ಮೊದಲು > ನಂತರ

೧೫. ನಕ್ಷತ್ರ *

* * *

ಪ್ರಶ್ನೆಪತ್ರಿಕೆ ಮಾದರಿ

ಪ್ರಶ್ನೆಪತ್ರಿಕೆ–೧

ಅಕ್ಷರ, ಪದ, ವಾಕ್ಯ ರಚನೆ

[ಕಾಲಾವಧಿ : ೩ ಗಂಟೆಗಳು] **[ಗರಿಷ್ಠ ಅಂಕಗಳು : ೧೦೦]**

I ೧. ಕನ್ನಡ ಅಕ್ಷರಮಾಲೆಯನ್ನು ವರ್ಗೀಕರಣದೊಂದಿಗೆ ವಿವರಿಸಿ ೧೦

೨. ಐತ್ವವಿರುವ ಐದು ಪದಗಳನ್ನು ಬರೆಯಿರಿ ೧೦

೩. ಹತ್ತೂ ಮಹಾಪ್ರಾಣಾಕ್ಷರಗಳಿರುವ ಒಟ್ಟು ಹತ್ತು ಪದಗಳನ್ನು ಬರೆಯಿರಿ ೧೦

೪. ಒ, ಗ್, ಣ್, ಅಃ, ಸೋ, ಕ್ಕ, ಪ್ರ, ಭ್, ಐ, ್ರ ಈ ಹತ್ತು ಅಕ್ಷರಗಳು ಏನು ಎಂಬುದರ ವಿವರಣೆ ನೀಡಿರಿ. ೫ + ೫

೫. ಪೈ, ಟಂ, ಸ್ಯ, ಧಿ, ಸ್ತ್ರೀ ಈ ಅಕ್ಷರಗಳನ್ನು ಬಿಡಿಸಿ ಬರೆಯಿರಿ ೫

೬. ಸಂಧ್ಯಕ್ಷರಗಳೆಂದರೇನು ? ಉದಾಹರಣೆಯೊಂದಿಗೆ ವಿವರಿಸಿ ೫

II **೧. ಐದು ಪದಗಳಿಗೆ ಅರ್ಥ ಬರೆಯಿರಿ** ೫

ಮಡಗು ಮಡಿ ಸರಪಣಿ ಖರ್ಚು ಗಗನ
ಒಲ್ಲೆ ದೊರಕು ಅಕ್ಷಯ ಜಗಿ ನೀರೂರು

೨. ಐದು ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ ೧೦

೩. ಯಾವುದಾದರೂ ಒಂದನ್ನು ಪೂರ್ಣಗೊಳಿಸಿ : ೫

ಅ). "ಹಣ್ಣನು ನೋಡಿತು ಹಕ್ಕಿ; –ಆ
––––––––––––––––––
–––––––––––––––––––
––––––––––––––ಹುಡುಗನ ತಾಯಿ

ಆ). ಬಾಳೆಯ ––––––––––
–––––––––––––––––––––––
––––––––––––––––––––ಮಂಗಗಳು"

III .ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ೨೦

೧. ಬೆಕ್ಕು ಹಕ್ಕಿಯನ್ನು ಹೇಗೆ ಹುಡುಕುತ್ತಿತ್ತು ?

೨. ನಾಯಿ ಏನನ್ನು ಹುಡುಕುತ್ತಿತ್ತು ?

೩. ಸರಪಣಿ ಪದ್ಯದಲ್ಲಿ ಸರಪಣಿಯನ್ನು ಪಟ್ಟಿ ಮಾಡಿ.

೪. ಚಂದಿರನನ್ನು ಕುವೆಂಪು ಯಾವುದಕ್ಕೆ ಹೋಲಿಸಿದ್ದಾರೆ ?

೫. ಕಂದನು ಪೆಪ್ಪರಮೆಂಟನ್ನು ನಿರಾಕರಿಸುವುದು ಏಕೆ ?

೬. ಅರ್ಧಚಂದ್ರ ಪದ್ಯದಲ್ಲಿ ಯಾರು ಯಾರಿಗೆ ಸಂವಾದ ನಡೆಯುತ್ತಿದೆ ?

೭. ಹನುಮಂತು ಸಮುದ್ರ ಹಾರಿದ್ದನ್ನು ಹೇಗೆ ಅಭಿನಯಿಸಿದನು ?

೮. ಅತ್ತೆಯ ಮನೆಗೆ ಹೊರಡೆಂದಾಗ ಹನುಮಂತುವಿನ ಪ್ರತಿಕ್ರಿಯೆ ಹೇಗಿತ್ತು ?

IV. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ ೧೦

೧. 'ಮಂಗಗಳ ಉಪವಾಸ'ದ ಕತೆಯನ್ನು ಸಂಗ್ರಹವಾಗಿ ಬರೆಯಿರಿ.

೨. ಸರಪಣಿ ಪದ್ಯದ ವಿಶೇಷವೇನು ? ವಿವರಿಸಿ.

೩. 'ಹನುಮಂತು' ಕತೆಯ ಸ್ವಾರಸ್ಯವೇನು ?

* * *

ತಿಳಿ ಕನ್ನಡ
ಭಾಗ –೨

೧. ನರಿಗಳಿಗೇಕೆ ಕೋಡಿಲ್ಲ?

– ಕುವೆಂಪು

ತೀರ್ಥಹಳ್ಳಿಗೆ ನಾಲ್ಕೈದು ಮೈಲಿಗಳ ದೂರದಲ್ಲಿ ಒಂದು ಬೆಟ್ಟವಿದೆ. ಅದರ ಹೆಸರು ನವಿಲುಕಲ್ಲು. ಬೆಟ್ಟಕ್ಕೆ ಹಸುರಂಗಿ ತೊಡಿಸಿದಂತೆ ಕಾಡು ದಟ್ಟವಾಗಿ ಬೆಳೆದುಕೊಂಡಿದೆ. ಅದರ ನೆತ್ತಿಯಲ್ಲಿ ನಿಂತು ನೋಡಿದರೆ ಸುತ್ತಲೂ ಮೂವತ್ತು ನಾಲ್ವತ್ತು ಮೈಲಿಗಳ ಚೆಲುವಾದ ಮಲೆನಾಡಿನ ಕಾಡುಗಳ ನೋಟವು ಕಂಗೊಳಿಸುತ್ತದೆ. ಕಾಡು ಹಬ್ಬಿಕೊಂಡ ಆ ಬೆಟ್ಟದ ಸಾಲುಗಳು ಅಲೆಯಲೆಯಾಗಿ, ಬಾನಿನ ಕರೆಯಲ್ಲಿ ಮುಸುಕಾಗಿ ಮೋಡಗಳನ್ನು ಒಂದರ ಮೇಲೊಂದು ಹೇರಿ ಗುಡ್ಡೆ ಹಾಕಿದಂತೆ ಕಾಣಿಸುತ್ತವೆ. ನಡುವೆ ಕಣಿವೆಗಳಲ್ಲಿ ಗದ್ದೆಗಳೂ ಅಡಕೆ ತೋಟಗಳೂ ಕಣ್ಣಿಗೆ ಮುತ್ತು ಕೊಡುವಂತೆ ಹಬ್ಬಿರುವುವು. ಮರಳಿ ಹೇಳುತ್ತೇನೆ : ಆ ಬೆಟ್ಟದ ಹೆಸರು ನವಿಲುಕಲ್ಲು !

ಇಂದಿಗೆ ಸುಮಾರು ಐವತ್ತೆರಡು ವರ್ಷಗಳ ಹಿಂದೆ ಆ ನವಿಲುಕಲ್ಲಿನಲ್ಲಿ ಒಂದು ಗುಬ್ಬಚ್ಚಿಯ ಸಂಸಾರವಿತ್ತು. ಹೆಣ್ಣು ಗುಬ್ಬಚ್ಚಿಯ ಹೆಸರು ಗುಬ್ಬಕ್ಕ. ಗಂಡು ಗುಬ್ಬಚ್ಚಿಯ ಹೆಸರು ಗುಬ್ಬಣ್ಣ. ಅವರಿಗಿದ್ದ ಮನೆ ಸವಿಯಾದ ಮನೆ. ಅದು ಒಂದು ಹೆಮ್ಮರದ ನೆತ್ತಿಯ ಕೊಂಬೆಯ ತುದಿಯಲ್ಲಿತ್ತು. ಗಾಳಿ ಬಂದಾಗ ಆ ಕೊಂಬೆ ತೊಟ್ಟಿಲಂತೆ ತೂಗುತ್ತಿತ್ತು. ಆಗ ಆ ಗಂಡು ಹೆಣ್ಣು ಹಕ್ಕಿಗಳೆರಡೂ ಹಾಡಿ ನಲಿಯುತ್ತಿದ್ದವು. ಅವರ ಮನೆಗೆ ಬೆಲ್ಲದ ಗೋಡೆ; ಸಕ್ಕರೆ ಬಾಗಿಲು ; ಕಬ್ಬಿನ ಮುಚ್ಚಿಗೆ. ಮನೆಯ ಅಂಗಳದಲ್ಲಿ ಒಂದು ಪುಟ್ಟ ಸರೋವರ. ಅದರಲ್ಲಿ ನೀರಿರಲಿಲ್ಲ; ಜೇನುತುಪ್ಪವಿತ್ತು.

ಇಷ್ಟು ಸುಖಗಳಿದ್ದರೂ ಆ ಪಕ್ಷಿ ದಂಪತಿಗಳಿಗೆ ಮಕ್ಕಳಿರಲಿಲ್ಲ. ಗುಬ್ಬಣ್ಣನು ದೇವರಿಗೆ ಮೊರೆಯಿಟ್ಟು, ಹರಕೆ ಹೊತ್ತಮೇಲೆ ಮೂರು ಮಕ್ಕಳಾದರು. ಹರಕೆ ಸಲ್ಲಿಸುವುದಕ್ಕಾಗಿ ಅವನು ಕಾಶಿಗೆ ಯಾತ್ರೆ ಹೋದನು. ಗುಬ್ಬಕ್ಕನೊಬ್ಬಳೆ ಮಕ್ಕಳನ್ನು ನೋಡಿಕೊಂಡು ಸಂಸಾರವನ್ನು ಸಾಂಗವಾಗಿ ನಡೆಸಿಕೊಂಡು ಬರುತ್ತಿದ್ದಳು.

ಹೀಗಿರುತ್ತಿರಲು ಒಂದು ದಿನ ರಾತ್ರಿ ದೊಡ್ಡ ಮಳೆ ಬಂತು. ಮಳೆ ಎಂದರೆ ಮಲೆನಾಡಿನ ಮಳೆ! ಸೋನೆ ಮಳೆಯಲ್ಲ; ಆನೆ ಮಳೆ ! ಅದರ ಜೊತೆಗೆ ಗುಡುಗು ಮಿಂಚು, ಸಿಡಿಲು, ಬಿರುಗಾಳಿ, ಆಲಿಕಲ್ಲು. ಮೇಲೆ ಕಗ್ಗತ್ತಲು ! ಪಾಪ, ಗುಬ್ಬಕ್ಕ ಮನೆಯ ಸಕ್ಕರೆ ಬಾಗಿಲು ಬಲವಾಗಿ ಮುಚ್ಚಿ, ಸಿಹಿಮುತ್ತಿನ ಅಗಣಿ ಹಾಕಿ, ಎಲ್ಲಿ ಬೆಲ್ಲದ ಗೋಡೆ ಕರಗಿ ಹೋಗುವುದೋ ಎಂದು ಚಿಂತಿಸುತ್ತಾ, ಮಕ್ಕಳನ್ನು ತೊಟ್ಟಿಲಲ್ಲಿ ತೂಗುತ್ತಿದ್ದಳು. ಅಯ್ಯೋ ಪಾಪ, ಅವರ ಮನೆಯ ಜೇನುತುಪ್ಪದ ಕೊಳವಂತೂ!

ಅದೇ ಸಮಯದಲ್ಲಿ ಆ ಬೆಟ್ಟದ ಕಿಬ್ಬಿಯಲ್ಲಿ ಆ ಮಾರಿ ಮಳೆಗೆ ಸಿಕ್ಕಿಬಿದ್ದ ಮೂವರು ಪ್ರಯಾಣಿಕರು ಬಹಳ ನರಳುತ್ತ ಬರುತ್ತಿದ್ದರು. ಒಬ್ಬನ ಹೆಸರು ಹುಲಿಯಣ್ಣ; ಒಬ್ಬನ ಹೆಸರು ಕರಡ್ಯಣ್ಣ; ಒಬ್ಬನ ಹೆಸರು ನರಿಯಣ್ಣ. ಆ ಜಡಿಯಲ್ಲಿ ಮೂವರು ನಡುಗುತ್ತಿದ್ದರು. ಎಲ್ಲಿಯಾದರೂ

ಒಂದು ಆಶ್ರಯ ಸಿಕ್ಕಿದರೆ ಸಾಕಲ್ಲಾ ಎಂದು ಭಗವಂತನನ್ನು ಬೇಡಿದರು. ಹೇಗೆಂದರೆ, ಹುಲಿಯಣ್ಣ ಕಾಡು ಕಂಪಿಸುವಂತೆ ಕೂಗಿದನು ; ಕರಡ್ಯಣ್ಣ ಗರ್ಜಿಸಿದನು ; ನರಿಯಣ್ಣ ಬಳ್ಳಿಕ್ಕಿದನು. ಅಂತೂ ಬಹಳ ಕಷ್ಟಪಟ್ಟು ಬೆಟ್ಟ ಹತ್ತಿದರು. ಅವರ ಕಣ್ಣಿಗೆ ಗುಬ್ಬಕ್ಕನ ಮನೆಯ ದೀಪ ಕಾಣಿಸಿತು. ಗುಬ್ಬಕ್ಕನು ತೊಟ್ಟಿಲು ತೂಗುತ್ತ ಹೇಳುತ್ತಿದ್ದ ಜೋಗುಳದ ಹಾಡೂ ಕೇಳಿಸಿತಂತೆ, ನರಿಯಣ್ಣನಿಗೆ. ಮನೆಯನ್ನು ಕಂಡಕೂಡಲೇ ಅವರಿಗೆಲ್ಲ ಬಹಳ ಸಂತೋಷವಾಯಿತು. ಪರಿಚಯವಿಲ್ಲದಿದ್ದರೂ ಕೂಡ ಕಷ್ಟಕಾಲವಾದ್ದರಿಂದ ಗುಬ್ಬಕ್ಕನ ಮನೆಗೆ ಹೋಗಲು ನಿಶ್ಚಯಿಸಿ ಮೂವರೂ ಓಡಿದರು. ಓಡಿ ಮನೆಯ ಚಾವಡಿಗೆ ಬಂದರು. ಮಳೆ ಹೋ ಎಂದು ಸುರಿಯುತ್ತಿತ್ತು. ಮಿಂಚು ಮಿಂಚುತ್ತಿತ್ತು.

ನರಿಯಣ್ಣ ಬಾಗಿಲು ತಟ್ಟಿದನು. ಒಳಗೆ ಬೆದರಿ ಕುಳಿತಿದ್ದ ಗುಬ್ಬಕ್ಕ ಹೆದರಿ ನಡುಗಿದಳು, ಯಾರೋ ಏನೋ ಎಂದು. ನರಿಯಣ್ಣ ಬಲವಾಗಿ ಬಾಗಿಲು ತಟ್ಟಿದನು.

ಗುಬ್ಬಕ್ಕ "ಯಾರಪ್ಪಾ ಅದು?" ಎಂದಳು.

ನರಿಯಣ್ಣ "ನಾನವ್ವಾ!" ಎಂದನು.

"ನಾನು ಎಂದರೆ?"

"ನಾನು ! ನರಿಯಣ್ಣ !"

ಗುಬ್ಬಕ್ಕ ಬೆಚ್ಚಿದಳು. ನರಿಯಣ್ಣನ ದುಷ್ಕೀರ್ತಿ ಗುಬ್ಬಕ್ಕನ ಕಿವಿಗೂ ಕೂಡ ಮುಟ್ಟಿದ್ದಿತು. ಸ್ವಲ್ಪ ಧೈರ್ಯ ತಂದುಕೊಂಡು "ಅಪ್ಪಾ, ಬಡವರ ಮನೆ! ಬಾಗಿಲನ್ನೇಕೆ ಹಾಗೆ ಬಡಿಯುತ್ತೀಯಾ?" ಎಂದಳು.

"ಅಕ್ಕಾ, ಮಳೆಯಲ್ಲಿ ಸಿಕ್ಕಿ ಸಾಕಾಗಿದೆ. ಬೆಳಗಾಗುವ ತನಕ ಸ್ವಲ್ಪ ಜಾಗ ಕೊಟ್ಟರೆ ಸಾಕು" ಎಂದನು ನರಿಯಣ್ಣ.

"ಅಪ್ಪಾ, ಇಲ್ಲಿ ಜಾಗವಿಲ್ಲ. ಮೂವರು ಮಕ್ಕಳು ಬೇರೆ ಇದ್ದಾರೆ. ನಮಗೇ ಕಾಲು ಚಾಚಿ ಮಲಗಲು ತಾವಿಲ್ಲ. ನೀನು ಹೀಗೆ ದೊಂಬಿ ಮಾಡಬೇಡ ಮಾರಾಯಾ! ಮಕ್ಕಳೆದ್ದಾರು!"

ನರಿಯಣ್ಣನಿಗೆ ಯಾರೂ ಬಾಗಿಲು ತೆಗೆಯುವುದಿಲ್ಲ ಎಂದುಕೊಂಡು ಹುಲಿಯಣ್ಣ "ಅಕ್ಕಾ ಗುಬ್ಬಕ್ಕ! ನಾನು ಹುಲಿಯಣ್ಣ, ಇದ್ದೇನೆ. ದಯವಿಟ್ಟು ಬಾಗಿಲು ತೆರೆ. ನಿನಗೇನೂ ಅಪಾಯ ಬರದಂತೆ ನೋಡಿಕೊಳ್ಳುತ್ತೇನೆ. ಹೆದರಬೇಡ. ನಮ್ಮ ಸಂಗಡ ಸಾಧು ಸಜ್ಜನನಾದ ಕರಡ್ಯಣ್ಣನೂ ಇದ್ದಾನೆ" ಎಂದು ಹೇಳಿ ಬಾಗಿಲನ್ನು ದಡಬಡ ಬಡಿಯುತ್ತಿದ್ದ ನರಿಯಣ್ಣನಿಗೆ "ಲೋ ನರಿಯಾ, ಯಾಕೋ ದೊಂಬಿ? ಸುಮ್ಮನಿರೋ" ಎಂದು ಒಂದು ಗುದ್ದು ಕೊಟ್ಟನು.

ಗುಬ್ಬಕ್ಕನಿಗೆ ಸ್ವಲ್ಪ ಧೈರ್ಯ ಬಂದು ಬಾಗಿಲನ್ನು ತೆರೆದಳು. ಮೂವರು ಅತಿಥಿಗಳೂ ಒಳಗೆ ಬಂದರು. ಕಾಲೆಲ್ಲಾ ಕೆಸರಾಗಿತ್ತು. ತೊಳೆದುಕೊಳ್ಳಲು ಬಿಸಿನೀರು ಕೊಟ್ಟಳು. ಮೈಯಲ್ಲ ಒದ್ದೆಯಾಗಿತ್ತು. ಒರಸಿಕೊಳ್ಳಲು ಮೈವಸ್ತ್ರ ಕೊಟ್ಟಳು. ಹೊಟ್ಟೆ ತುಂಬಾ ಹಸಿವೆಯಿತ್ತು. ಹೊಸ ಪೈರಿನ ಹಸನಾದ ಕಾಳನ್ನು ಬೇಯಿಸಿ ಮಾಡಿದ ಕೂಳನ್ನು ಬಡಿಸಿದಳು. ಮೂವರೂ ತಿಂದು ತೇಗಿದರು. ತರುವಾಯ ಮುರುವಿನ ಒಲೆಯ ಬಳಿ ಬೆಂಕಿಯ ಕಾವಿನಲ್ಲಿ ಒರಗಲು ಹುಲ್ಲಿನ ಹಾಸಿಗೆಗಳನ್ನೂ ಕೊಟ್ಟಳು.

ಮೂವರು ಅತಿಥಿಗಳು ಚಳಿ ಕಾಯಿಸಿಕೊಳ್ಳುತ್ತಿದ್ದರು. ಕರಡ್ಯಣ್ಣನು ಬೆಲ್ಲದ ಗೋಡೆಯ ಮೇಲೆ ತಗುಲಿ ಹಾಕಿದ್ದ ಮಹಾತ್ಮಾಗಾಂಧಿಯ ಪಟವನ್ನೂ, ಶ್ರೀರಾಮಕೃಷ್ಣ, ವಿವೇಕಾನಂದರ ಪಟವನ್ನೂ ನೋಡಿ, "ಇವೇಕೆ ಈ ಪಟಗಳು" ಎಂದು ಕೇಳಿದನು.

"ಮಕ್ಕಳು ಈ ಮಹಾಪುರುಷರ ಸನ್ನಿಧಿಯಲ್ಲಿಯೇ ಬೆಳೆದರೆ ಅವರೂ ಮಹಾತ್ಮರಾಗುತ್ತಾರೆ. ಭರತಮಾತೆಯ ಉದ್ಧಾರ ಮಾಡುತ್ತಾರೆ. ಅದಕ್ಕೋಸ್ಕರ ಈ ಪಟಗಳನ್ನು ಇಟ್ಟಿದ್ದೇನೆ. ಅವರಿಗೆ ದಿನವೂ ಅವರ ಕಥೆಗಳನ್ನು ಜೋಗುಳದಂತೆ ಹೇಳುತ್ತೇನೆ. ಹಾಲು ಬೆಣ್ಣೆಗಳಲ್ಲಿ ಅವರ ಮಹಿಮೆಯನ್ನು ಊಡುತ್ತೇನೆ" ಎಂದಳು ಗುಬ್ಬಕ್ಕ.

"ಎಲ್ಲಿ? ನಿನ್ನ ಮಕ್ಕಳನ್ನು ನೋಡೋಣ!" ಎಂದನು ನರಿಯಣ್ಣ.

"ತೊಟ್ಟಿಲಲ್ಲಿ ಮಲಗಿ ನಿದ್ದೆ ಹೋಗಿದ್ದಾರೆ, ಬನ್ನಿ ನೋಡಿ" ಎಂದು ಗುಬ್ಬಕ್ಕನು ಅವರನ್ನು ಕರೆದುಕೊಂಡು ಹೋಗಿ ತೋರಿಸಿದಳು. ಮೂವರು ಮಕ್ಕಳೂ ಮಿಂಚಿನುಂಡೆಗಳಂತೆ ಹೊಳೆಯುತ್ತಿದ್ದರು. ಹುಲಿಯಣ್ಣ ಕರಡ್ಯಣ್ಣ ಇಬ್ಬರೂ ಸಂತೋಷಪಟ್ಟರು. ನರಿಯಣ್ಣನೂ ಬಹಳ ಸಂತೋಷಪಟ್ಟ !

ಎಲ್ಲರೂ ಮಲಗಿಕೊಂಡರು. ಕರಡ್ಯಣ್ಣ ಗೊರಕೆ ಹೊಡೆದದ್ದೂ ಹೊಡೆದದ್ದೆ ! ಆದರೆ ಮಳೆ, ಗಾಳಿ, ಗುಡುಗು ಜೋರಾಗಿದ್ದುದರಿಂದ ಅದು ಯಾರಿಗೂ ತೊಂದರೆ ಮಾಡಲಿಲ್ಲ.

ನಸುಕು ಹರಿಯಿತು. ಮಳೆ ನಿಂತಿದ್ದಿತು. ಗುಬ್ಬಕ್ಕ ಎದ್ದು ಮನೆಯನ್ನು ಗುಡಿಸಿ, ರಂಗೋಲಿ ಹಾಕಿ, ಹಾಲು ಕರೆಯಲು ಕೊಟ್ಟಿಗೆಗೆ ಹೋದಳು. ಹುಲಿಯಣ್ಣ, ಕರಡ್ಯಣ್ಣ ಎದ್ದು ಹೋಗಲನುವಾದರು. ನರಿಯಣ್ಣನನ್ನು ಕರೆದರೆ, "ಅ! ಹೂ! ಊಹೂ!" ಎಂದು ಮಲಗಿಯೆ ಇದ್ದನು. ಪಾಪ, ನರಿಯಣ್ಣನಿಗೆ ಬಹಳ ನಿದ್ದೆ ಎಂದು ತಿಳಿದು ಹುಲಿಯಣ್ಣ ಕರಡ್ಯಣ್ಣ ಹೊರಟುಹೋದರು. ಯಜಮಾನಿ ಸಿಕ್ಕಲಿಲ್ಲವಾದುದರಿಂದ ನಮಸ್ಕಾರ ಹೇಳಲಿಲ್ಲ.

ಅವರು ಹೊರಟುಹೋದ ಮೇಲೆ ನರಿಯಣ್ಣನು ಮೆಲ್ಲಗೆ ಎದ್ದನು. ಮನೆಯಲ್ಲಿ ಯಾರೂ ಇರಲಿಲ್ಲ. ಗುಬ್ಬಕ್ಕನ ಮಕ್ಕಳು ಆಗತಾನೆ ಎದ್ದು ಅಳುತ್ತಿದ್ದವು. ನರಿಯಣ್ಣ ಮೂರು ಮಕ್ಕಳನ್ನೂ ನುಂಗಿ ಬೇಗ ಬೇಗನೆ ಸಕ್ಕರೆಯ ಬಾಗಿಲನ್ನು ಮುರಿದುಕೊಂಡು ಓಡಿಹೋದನು!

ಸ್ವಲ್ಪ ಹೊತ್ತಾದ ಮೇಲೆ ಗುಬ್ಬಕ್ಕ ಹಾಲು ಕರೆದುಕೊಂಡು ಬಂದು ನೋಡುತ್ತಾಳೆ, ಮಕ್ಕಳಿಲ್ಲ! ಅತಿಥಿಗಳೂ ಇಲ್ಲ! ಗುಬ್ಬಕ್ಕ ಗೊಳೋ ಎಂದು ರೋದಿಸತೊಡಗಿದಳು. ಕಾಡಿನಲ್ಲಿ ಕೇಳುವವರಾರು? ಬಿಕ್ಕಿ ಬಿಕ್ಕಿ ಅತ್ತು ಕಡೆಗೆ ಕಳ್ಳರನ್ನು ಹುಡುಕಿಕೊಂಡು ಹೊರಟಳು. ಎಲ್ಲೆಲ್ಲಿಯೋ ಹುಡುಕಿದಳು. ಯಾರಾರನ್ನೋ ಕೇಳಿದಳು. ಕಡೆಗೆ ಹಾರುತ್ತಿರುವಾಗ ದೂರ ಒಂದು ಪರ್ವತದ ತಪ್ಪಲಿನಲ್ಲಿ ಹುಲಿಯಣ್ಣ ಕರಡ್ಯಣ್ಣ ಹೋಗುತ್ತಿದ್ದುದನ್ನು ಕಂಡಳು. ಬೇಗ ಓಡಿಹೋಗಿ ತಡೆದಳು! ಅವರಿಗೆ ಆಶ್ಚರ್ಯವಾಯಿತು. "ಗುಬ್ಬಕ್ಕ, ಏಕೆ ಅಳುತ್ತೀಯಾ?" ಎಂದರು.

"ನೀವೆಲ್ಲ ಕಳ್ಳರು ! ನನ್ನ ಮಕ್ಕಳನ್ನು ತಿಂದು ಬಂದಿದ್ದೀರಿ ! ನಿಮಗೆ ಮಾಡಿದ ಉಪಕಾರಕ್ಕೆ ಇದೇನೆ ಪ್ರತ್ಯುಪಕಾರ? ಅಯ್ಯೋೀ !" ಎಂದು ಅತ್ತಳು.

ಹುಲಿಯಣ್ಣನಿಗೆ ಎದೆ ಕರಗಿಹೋಯಿತು. ಕರಡ್ಯಣ್ಣನಿಗೆ ಕಳವಳ ಹೆಚ್ಚಾಯಿತು. ಆಗ ಹೇಳಿದರು: ತಾವು ಬರುವಾಗ ನರಿಯಣ್ಣ ಅಲ್ಲಿಯೆ ಇದ್ದನೆಂದೂ, ಮಕ್ಕಳು ನಿದ್ದೆ ಮಾಡುತ್ತಿದ್ದವೆಂದೂ ! ಕಡೆಗೆ ನರಿಯಣ್ಣನೆ ಆ ಘೋರಕೃತ್ಯವನ್ನು ಮಾಡಿರಬೇಕೆಂದು ನಿರ್ಧರಿಸಿ, ಗುಬ್ಬಕ್ಕನನ್ನೂ ಜೊತೆಯಲ್ಲಿ ಕರೆದುಕೊಂಡು ನರಿಯಣ್ಣನ ಪತ್ತೆಗೆ ಹೊರಟರು. ಹೊರಟು ಹುಡುಕಿದರು. ಎಲ್ಲಿಯೂ ಸಿಕ್ಕಲಿಲ್ಲ. ಕಡೆಗೆ ಎದುರಿಗೆ ಬರುತ್ತಿದ್ದ ಗೂಬಮ್ಮನನ್ನು ಕೇಳಿದರು. "ನರಿಯಣ್ಣ ಎರಡು ಮೈಲಿ ಆಚೆ ಓಡುತ್ತಿದ್ದ!" ಎಂದು ಗೂಬಮ್ಮ ಹೇಳಲು ಎಲ್ಲರೂ ಓಡಿದರು. ದೂರದಲ್ಲಿ ನರಿಯಣ್ಣ ಹೋಗುತ್ತಿದ್ದ. ಅವನು ಹುಲಿಯಣ್ಣ ಕರಡ್ಯಣ್ಣನ ಜೊತೆಯಲ್ಲಿ ಗುಬ್ಬಕ್ಕನನ್ನು ಕಾಣಲು ತನಗೆ ಕೇಡು ಬಂತೆಂದು ತಿಳಿದು ಓಟಕಿತ್ತನು. ಆದರೆ ಹುಲಿಯಣ್ಣನು ಮಿಂಚಿನಂತೆ ಹಾರಿಹೋಗಿ ಹಿಡಿದನು. ಕರಡ್ಯಣ್ಣನು "ಕಳ್ಳಾ ಒಳ್ಳೇ ಮಾತಿನಿಂದ ಗುಬ್ಬಕ್ಕನ ಮಕ್ಕಳನ್ನು ಕೊಡುತ್ತೀಯೋ ಇಲ್ಲವೋ?" ಎಂದನು. ನರಿಯಣ್ಣನು ಏನೂ ತಿಳಿಯದವನಂತೆ ನಟಿಸಿ, ತಾನು ನಿರಪರಾಧಿ ಎಂದು ವಾದಿಸಿದನು. ಗುಬ್ಬಕ್ಕನು ಗೊಳೋ ಎಂದು ಅಳುತ್ತಲೇ ಇದ್ದಳು. ಹುಲಿಯಣ್ಣನು ಅಳುವುದನ್ನು ಸ್ವಲ್ಪ ನಿಲ್ಲಿಸುವಂತೆ ಹೇಳಿ, ನರಿಯಣ್ಣನ ಹೊಟ್ಟೆಯ ಹತ್ತಿರ ಕಿವಿಯನ್ನು ಚಾಚಿ ಆಲೈಸಿದನು. ಒಳಗೆ ಚೀ ! ಪೀ ! ಸದ್ದು !! ಸಿಕ್ಕಿದ ಎಂದು ಹುಲಿಯಣ್ಣ ನರಿಯಣ್ಣನನ್ನು ಹಿಡಿದುಕೊಂಡು ! ನರಿಯಣ್ಣ ತಾನು ಕೆಟ್ಟೆನೆಂದು ತಿಳಿದು ಹಲ್ಲು ಹಲ್ಲು ಕಿರಿಯುತ್ತ ದಮ್ಮಯ್ಯ ಎಂದನು. ಕರಡ್ಯಣ್ಣನು ಹುಲಿಯಣ್ಣನನ್ನು ಕುರಿತು "ಅವನ ಹೊಟ್ಟೆಯನ್ನು ಸೀಳಿ ಮರಿಗಳನ್ನು ಈಚೆಗೆ ತೆಗೆ!" ಎಂದನು. ಹುಲಿಯಣ್ಣನು ನರಿಯಣ್ಣನನ್ನು ಕೆಳಗೆ ಹಾಕಿಕೊಂಡು ಮೇಲೆ ಕುಳಿತುಕೊಂಡನು; ನರಸಿಂಹನು ಹಿರಣ್ಯಕಶಿಪುವಿನ ಮೇಲೆ ಕುಳಿತಂತೆ. ಇನ್ನೇನು! ಹುಲಿಯಣ್ಣನು ತನ್ನ ಕ್ರೂರ ವ್ಯಾಘ್ರನಖಗಳಿಂದ ನರಿಯಣ್ಣನ ಹೊಟ್ಟೆ ಬಗೆಯಬೇಕು. ಅಷ್ಟರಲ್ಲಿ ನರಿಯಣ್ಣ ಗುಬ್ಬಕ್ಕನನ್ನು ಕುರಿತು "ಅಕ್ಕಾ ಗುಬ್ಬಕ್ಕಾ ! ನಿನ್ನ ದಮ್ಮಯ್ಯ ! ನನ್ನನ್ನು ಕಾಪಾಡು. ನನಗೂ ಮಕ್ಕಳಿದ್ದಾರೆ!" ಎಂದನು. ಗುಬ್ಬಕ್ಕನ ಕರುಳು ಕರಗಿತು. ಎಷ್ಟಾದರೂ ಹೆತ್ತ ಹೆಣ್ಣಲ್ಲವೇ?

"ಹುಲಿಯಣ್ಣಾ, ಬೇಡ! ಬೇಡ! ಬಿಡು" ಎಂದಳು.

"ಹಾಗಾದರೆ ನಿನ್ನ ಮಕ್ಕಳು ಉಳಿಯುವುದು ಹೇಗೆ?" ಎಂದನು ಹುಲಿಯಣ್ಣ.

"ನಾನೊಂದು ಉಪಾಯ ಹೇಳುತ್ತೇನೆ" ಎಂದಳು ಗುಬ್ಬಕ್ಕ.

"ಏನದು?" ಎಂದನು ಕರಡ್ಯಣ್ಣ.

"ಹುಲಿಯಣ್ಣ ನರಿಯಣ್ಣನನ್ನು ಹಿಡಿದುಕೊಳ್ಳಲಿ. ಕರಡ್ಯಣ್ಣ ಅವನ ಬೆನ್ನಿನ ಮೇಲೆ ಬಲವಾಗಿ ಒಂದು ಗುದ್ದು ಹೇರಲಿ. ಆಗ ನನ್ನ ಮಕ್ಕಳು ನರಿಯಣ್ಣನ ಬಾಯಿಂದ ಈಚೆಗೆ ಬೀಳುತ್ತಾರೆ!" ಎಂದಳು ಗುಬ್ಬಕ್ಕ.

ಸರಿ, ಹುಲಿಯಣ್ಣ ಹಿಡಿದುಕೊಂಡ. ಕರಡ್ಯಣ್ಣ ಹೇರಿದ! ಬಂದರು ಈಚೆಗೆ ಗುಬ್ಬಕ್ಕನ ಮೂರು ಮಕ್ಕಳು, ಚೀ,ಪೀ,ಚೀ,ಪೀ ಎನ್ನುತ್ತ !

ಆದರೆ ಮಕ್ಕಳ ಮೈತುಂಬ ನರಿಯಣ್ಣನ ಜೊಲ್ಲು ತುಂಬಿ ಹೋಗಿತ್ತು !

ಗುಬ್ಬಕ್ಕ ಮರಿಗಳನ್ನು ಎತ್ತಿಕೊಂಡು ಹರ್ಷದಿಂದ ಹೋದಳು, ತನ್ನ ಸವಿಯಾದ ಮನೆಗೆ, ಸ್ನಾನ ಮಾಡಿಸಿ, ಉಣ್ಣಲಿಕ್ಕೆ, ಮಲಗಿಸಲು! ಹುಲಿಯಣ್ಣನು ನರಿಯಣ್ಣನಿಗಿದ್ದ ಎರಡು ಕೋಡುಗಳನ್ನು

ಶಿಕ್ಷೆಗಾಗಿ ಮುರಿದನು. ಕರಡ್ಯಣ್ಣನು "ಇನ್ನು ಮೇಲೆ ನಿನ್ನ ಜಾತಿಗೆ ಕೋಡುಗಳಿರದೆ ಹೋಗಲಿ" ಎಂದು ಶಾಪ ಕೊಟ್ಟನು.

ಅಂದಿನಿಂದ ನರಿಯ ಜಾತಿಗೆ ಕೋಡುಗಳಿಲ್ಲ!

****

ಪದಗಳ ಅರ್ಥ

ಅಗಣಿ – ಚಿಲುಕ ; ಕಿಬ್ಬಿ – ತಗ್ಗಿನ ಜಾಗ ; ಊಡು – ತಿನ್ನಿಸು ; ದುಷ್ಕೀರ್ತಿ – ಕೆಟ್ಟ ಹೆಸರು ; ಅನುವಾಗು – ಸಿದ್ಧವಾಗು ; ವ್ಯಾಘ್ರನಖ – ಹುಲಿಯ ಉಗುರು

ಪ್ರಶ್ನೆಗಳು

೧. ನವಿಲುಕಲ್ಲು ಬೆಟ್ಟ ಹೇಗಿತ್ತು?

೨. ಮಳೆ ಹೇಗೆ ಬಂದಿತು? ಆಗ ಗುಬ್ಬಕ್ಕ ಏನು ಮಾಡಿದಳು?

೩. ಗುಬ್ಬಕ್ಕನಿಗೂ ನರಿಯಣ್ಣನಿಗೂ ನಡುವೆ ನಡೆದ ಮಾತುಕತೆ ಏನು?

೪. ಗುಬ್ಬಕ್ಕ ಅತಿಥಿಗಳನ್ನು ಹೇಗೆ ಉಪಚರಿಸಿದಳು?

೫. ಗುಬ್ಬಕ್ಕನ ದುಃಖಕ್ಕೆ ಕಾರಣವೇನು?

೬. ಗುಬ್ಬಕ್ಕನ ಮಕ್ಕಳು ಪತ್ತೆಯಾದದ್ದು ಹೇಗೆ?

೭ ನರಿಯ ಜಾತಿಗೆ ಕೋಡುಗಳು ಏಕಿಲ್ಲ?

ಭಾಷಾಭ್ಯಾಸ

೧. ಈ ಪದಗಳನ್ನು ಬಿಡಿಸಿ ಬರೆಯಿರಿ :

ಜಾಗವಿಲ್ಲ, ಹಸನಾದ, ಮಿಂಚಿನುಂಡೆ, ಉಪಾಯವನ್ನು

೨. 'ಲೋ ನರಿಯಾ' : ಇಲ್ಲಿ 'ಲೋ' ಎನ್ನುವುದು ಸಂಬೋಧನೆಗೆ ಬಳಕೆಯಾಗಿದೆ. ಇದೇ ರೀತಿ ಕನ್ನಡದಲ್ಲಿ ಸಂಬೋಧನೆಗೆ ಬಳಕೆಯಾಗುವ ಇನ್ನಿತರ ಕೆಲವು ಪದಗಳನ್ನು ಪಟ್ಟಿ ಮಾಡಿ.

೨. ಬಾಪೂ ವಾಣಿ

– **‘ಪರಿಮಳ’**

[ಒಂದು ಕೊಠಡಿ. ಗೋಡೆಯಲ್ಲಿ ಒಂದು ಕಡೆ ಸುಂದರವಾದ ಗಾಂಧೀಜಿ, ನೆಹರು ಮುಂತಾದ ಮಹಾಪುರುಷರ ಚಿತ್ರಗಳು ತೂಗುಹಾಕಿವೆ. ಒಂದು ಮೂಲೆಯಲ್ಲಿ ಒಂದು ಪುಟ್ಟ ಮೇಜಿನ ಮೇಲೆ ನಮ್ಮ ಕೋಲುತಾತನ ವಿಗ್ರಹವಿದೆ. ಆ ವಿಗ್ರಹದ ಸಮೀಪದಲ್ಲಿಯೇ ಕೃಷ್ಣಮೂರ್ತಿ ಮತ್ತು ಉದಯಶಂಕರ ಇಬ್ಬರೂ ಕೂತು ಚರಕಗಳಿಂದ ದಾರ ತೆಗೆಯುತ್ತಿದ್ದಾರೆ.]

ಕೃಷ್ಣಮೂರ್ತಿ : ಶಂಕರಾ! ನಮ್ಮ ತಾತ ಗಾಂಧೀಜಿ ಹೊರಟು ಹೋದಾಗಿನಿಂದ ನನಗೇನೋ ಮನಸ್ಸೇ ಸರಿಯಾಗಿಲ್ಲ ಕಣೋ! ಸಮಾಧಾನವೇ ಆಗಿಲ್ಲ. ನೋಡು ಶಂಕರ, ನಮ್ಮ ಕ್ಲಾಸಿನಲ್ಲಿ ಗಾಂಧೀಜಿಯವರ ಫೋಟೋ ತೂಗುಹಾಕಿದ್ದಾರೆ. ಒಂದೊಂದು ಸಲ ಆ ಚಿತ್ರದಲ್ಲಿ ಗಾಂಧೀಜಿ ನಗುಮುಖಾನೇ ನೋಡ್ತಾ ಇದ್ದುಬಿಡ್ತೇನೆ. ನಮ್ಮ ಮೇಷ್ಟ್ರು ಹೇಳೋ ಪಾಠಾನೇ ಗೊತ್ತಾಗೋದಿಲ್ಲ ಕಣೋ!

ಉದಯಶಂಕರ : ನೋಡು ಕಿಟ್ಟು! ನಮ್ಮ ಕ್ಲಾಸಿನಲ್ಲೂ ಗಾಂಧೀಜಿ ಚಿತ್ರ ಹಾಕಿದ್ದಾರೆ. ಮೊನ್ನೇ ದಿವಸ ಮೇಷ್ಟ್ರು ಹುಡುಗರೆನ್ನೆಲ್ಲಾ ಸ್ಪೆಲ್ಲಿಂಗ್ ಕೇಳ್ತಾ ಬಂದರು. ನನ್ನ ಸರದಿ ಬಂತು. Kettleಗೆ spelling ಏನೋ ಅಂದರು. ತಕ್ಷಣ ನನ್ನ ದೃಷ್ಟಿ ಆ ಗಾಂಧೀಜಿ ಚಿತ್ರದ ಕಡೆಗೆ ಹೋಯ್ತು. ಹುಡುಗರೆಲ್ಲಾ ಬೆಪ್ಪಾದರು. ಆದರೆ ನಮ್ಮ ಮೇಷ್ಟ್ರು ಬಹಳ ಬುದ್ಧಿವಂತರು. ಅವರಿಗೆ ಗಾಂಧೀಜಿ ಅಂದರೆ ತುಂಬ ಭಕ್ತಿ. ಆ ಪಿರಿಯಡ್ಡಿಯಲ್ಲಿ ಗಾಂಧೀಜಿಯವರ kettle ಕಥೆ ಹೇಳಿದರು ಕಣೋ!

ಕೃಷ್ಣಮೂರ್ತಿ : ಹಾಗಾದರೆ ಆ ಮೇಷ್ಟ್ರು ತುಂಬ ಒಳ್ಳೆಯವರಪ್ಪ. ನನಗೂ ಅಂತಹ ಒಬ್ಬರು ಡ್ರಾಯಿಂಗ್ ಮೇಷ್ಟ್ರು ಇದಾರೆ. ಮುಂಚೆ ಮುಂಚೆ ಅವರು ಡ್ರಾಯಿಂಗ್ ಪಿರಿಯಡ್ಡಿನಲ್ಲಿ ಹ್ಯಾಟು ಬರೀರಿ, ಕತ್ತೇ ಬರೀರಿ, ನಾಯಿ ಬರೀರಿ ಅಂತ ಹೇಳ್ತಿದ್ದರು ಕಣೋ. ಈಗ ಗಾಂಧೀಜಿ ಚಿತ್ರ ನಮ್ಮ ಕ್ಲಾಸಿಗೆ ಬಂದ ಮೇಲೆ ಅಂದಿನಿಂದ ಡ್ರಾಯಿಂಗ್ ಪಿರಿಯಡ್ಡಿನಲ್ಲಿ ಆ ಮೇಷ್ಟ್ರು ನಮಗೆಲ್ಲಾ ಗಾಂಧೀಜಿ ಕನ್ನಡಕ ಬರೀರಿ, ಗಾಂಧೀಜಿ ಊರುಗೋಲು ಬರೀರಿ, ಗಾಂಧೀಜಿ ಗಡಿಯಾರ ಬರೀರಿ ಅಂತ ಹೇಳ್ತಾರೆ ಕಣೋ! ಅವರು ಬಹಳ ಒಳ್ಳೆಯವರಪ್ಪ.!
(ಹ್ಯಾಟು ಬೂಟೂ ಹಾಕ್ಕೊಂಡು ಬಾಲಕೃಷ್ಣನ ಪ್ರವೇಶ)

ಬಾಲಕೃಷ್ಣ : ಓಹೋ ಗಾಂಧೀ ವಿದ್ಯೆ ಕಲೀತಾ ಇದ್ದೀರೋ!

ಕೃಷ್ಣಮೂರ್ತಿ : ಇದೇನೋ ಬಾಲಕೃಷ್ಣ, ನಿನ್ನ ವೇಷ! ಖಾದಿ ಬಟ್ಟೇನೇ ಹಾಕ್ತಾ ಇದ್ದ ಭೂಪ, ಇಂಗ್ಲಿಷ್ ಕೆಂಚ್ ಪರಂಗಿ ಆಗಿಬಿಟ್ಟಿದ್ದೀಯಲ್ಲೋ?

ಉದಯಶಂಕರ: ಅಷ್ಟೇ ಕಣೋ ಕಿಟ್ಟು! ಗಾಂಧೀಜಿ ಹತ್ತಿರ ಈಜು ಕಲಿಯೋದಕ್ಕೆ, ನೂಲು ತೆಗೆಯೋದಕ್ಕೆ, ಆಟ ಆಡೋದಕ್ಕೆ ಹೋಗ್ತಾ ಇದ್ದಾಗ ಮಾತ್ರ, ತಾನೂ ಬರಬೇಕೂ ಅಂತ ಖಾದಿ ಉಡ್ತಾ ಇದ್ದ. ಈಗೇತಕ್ಕೋ ಅವನಿಗೆ ಖಾದಿ? ಅವನೊಬ್ಬ ಬಾಲವಿಲ್ಲದ ಬಾಲಕೃಷ್ಣ! ಅಲ್ಲಾ! ಅಂದು ನಾವು ಗಾಂಧೀಜಿ ಕೈ ಮೇಲೆ ಕೈ ಹಾಕಿ ಭಾಷೆ ಹಾಕಲಿಲ್ಲವೇ ಬಾಲಕೃಷ್ಣ, ತಪ್ಪದೇ ಖಾದಿ ಬಟ್ಟೇನೇ ಉಡ್ತೀವಿ ಅಂತ!

ಬಾಲಕೃಷ್ಣ : ಹೌದು ಶಂಕರ.

ಉದಯಶಂಕರ: ಹಾಗಾದರೆ ಈಗೇತಕ್ಕೆ ಈ ವೇಷ?

ಬಾಲಕೃಷ್ಣ : ನೋಡು, ನಮ್ಮ ಚಿಕ್ಕಪ್ಪನವರು ಇಂಗ್ಲೆಂಡಿಗೆ ಓದೋದಕ್ಕೆ ಹೋಗಿದ್ರು. ಅವರು ಅಲ್ಲಿಂದ ಬರುವಾಗ ನನಗೋಸ್ಕರ ಈ ಬಟ್ಟೆಗಳನ್ನೆಲ್ಲಾ ತಂದಿದ್ದಾರೆ. ಅವರು ಯಾವಾಗಲೂ ಸೂಟೇ ಹಾಕ್ತಾರೆ ಕಣೋ ಕಿಟ್ಟು!

ಉದಯಶಂಕರ: ಓಹೋ! ನಮ್ಮ ಗಾಂಧೀಜಿಯವರೂ ಇಂಗ್ಲೇಂಡಿಗೆ ಹೋಗಿದ್ರು. ಹಾಗಾದ ಮಾತ್ರಕ್ಕೆ ಅವರು ಯಾವಾಗಲೂ ಸೂಟೇ ಹಾಕ್ತಾ ಇದ್ದರೇನು?

ಕೃಷ್ಣಮೂರ್ತಿ : ಇರಲಿ ಬಾಲಕೃಷ್ಣ! ನಿನ್ನ ಮಾತ್ನ ಒಪ್ಪೋಣ. ಆದರೆ ಕೊಟ್ಟ ಮಾತನ್ನ ತಪ್ತಾರಯೇ! ಮಾತಿಗೆ ತಪ್ಪಿದವ... ಏನೂ ಅಂತ ಗೊತ್ತು ತಾನೇ. ಕೇಳು ಬಾಲಕೃಷ್ಣ, ಕೊಟ್ಟ ಮಾತನ್ನ ಮೀರಬಾರದು. ಗಾಂಧೀಜಿ ನಮಗೆಷ್ಟು ಆಟ ಹೇಳಿ ಕೊಟ್ಟಿದ್ದಾರೆ, ಪಾಠ ಕಲಿಸಿದ್ದಾರೆ, ಉಪಕಾರ ಮಾಡಿದ್ದಾರೆ. ಅವುಗಳನ್ನೆಲ್ಲಾ ಮರೆಯೋದಕ್ಕಾಗುತ್ತಾ! ಅವರಿರಬೇಕಾದರೆ ಒಂದು ವೇಷ, ಒಂದು ಮಾತು, ಅವರು ಹೋದ ಮೇಲೆ ಬೇರೆ ವೇಷ, ಬೇರೆ ಮಾತು ಇದು ಸರಿಯೇನೋ! ಕಳ್ಳತನ ಮಾಡಿದ ಹಾಗೆ ಆಯ್ತಲ್ಲವೇ?

ಬಾಲಕೃಷ್ಣ : ಹೌದು ಕಿಟ್ಟು! ನನ್ನದು ತಪ್ಪು. ಇನ್ನು ಮೇಲೆ ಈ ವೇಷ ಹಾಕೋದಿಲ್ಲ. ಖಾದಿ ಬಟ್ಟೇನೇ ಉಡ್ತೇನಿ.

ಉದಯಶಂಕರ : ನಿಜವಾಗಿಯೂ?

ಬಾಲಕೃಷ್ಣ : ಖಂಡಿತ ಶಂಕರ!

ಉದಯಶಂಕರ: ಭಾಷೆ ಹಾಕ್ತೀಯಾ!

ಬಾಲಕೃಷ್ಣ : ......ಓಹೋ!

ಉದಯಶಂಕರ: ಗಾಂಧೀಜಿಗೆ ಹಾಕಿದಹಾಗೇ ತಾನೇ!

ಬಾಲಕೃಷ್ಣ : ಇಲ್ಲ ಶಂಕರ, ಖಂಡಿತ ಇನ್ನು ಮೇಲೆ ಈ ವೇಷ ಹಾಕೋದಿಲ್ಲ.

ಉದಯಶಂಕರ: ಹೋಗಲಿ ಈಗ ಮಾಡಿದ ತಪ್ಪಿಗೆ ಶಿಕ್ಷೆ ಏನಪ್ಪ?

ಬಾಲಕೃಷ್ಣ : ಏನು ಬೇಕಾದರೂ.

ಉದಯಶಂಕರ: ನೋಡು, ನೀನು ಗಾಂಧೀಜಿ ಪ್ರತಿಮೆ ಮುಂದೆ ಒಂಟಿ ಕಾಲಿನಲ್ಲಿ ನಿಂತುಕೊಂಡು, ಮೂರು ಸಲ ನಿನ್ನ ಕೆನ್ನೆಗೆ ನೀನೇ ಹೊಡಕೋಬೇಕು.

ಬಾಲಕೃಷ್ಣ : ಆಗಲಿ, ಹಾಗೆಯೇ ಮಾಡ್ತಿನಿ.
(ಹಾಗೆಯೇ ಮಾಡುವನು)

ಕೃಷ್ಣಮೂರ್ತಿ: ಬಾ ಇಲ್ಲಿ, ನೀನೂ ನಮ್ಮ ಜೊತೆಗೇನೇ ನೂಲು ತೆಗಿ. ಮಾಡಿದ ತಪ್ಪು ಪರಿಹಾರವಾಗುತ್ತೆ.

ಉದಯಶಂಕರ: ಅಹುದು ಕಿಟ್ಟು, ನಿನ್ನ ಮಾತು ನಿಜ.

ಬಾಲಕೃಷ್ಣ : ಆಗಬಹುದು ಹಾಗೆಯೇ ಮಾಡುತ್ತೇನೆ.

ಕೃಷ್ಣಮೂರ್ತಿ : ಶಂಕರಾ! ಅವನಿಗೆ ಒಂದು ತಕಲೀನ ಕೊಡು.
(ಉದಯಶಂಕರನು ಬಾಲಕೃಷ್ಣನಿಗೆ ಒಂದು ತಕಲಿಯನ್ನೂ ಒಂದಿಷ್ಟು ಹತ್ತಿಯನ್ನೂ ಕೊಡುವನು. ಬಾಲಕೃಷ್ಣನು ತಕಲಿಯಿಂದ ದಾರವನ್ನು ತೆಗೆಯಲಾರಂಭಿಸುವನು)

ಬಾಲಕೃಷ್ಣ : ಕೃಷ್ಣಮೂರ್ತಿ, ಹೊಸದಾಗಿ ಯಾವುದಾದರೂ ಹಾಡನ್ನು ಕಲಿತಿದ್ದೀಯೇನೋ! ಇದ್ದರೆ ಹೇಳು, ಕೇಳೋಣ.

ಉದಯಶಂಕರ: ಹೌದು ಕಿಟ್ಟು ಹೇಳು

ಕೃಷ್ಣಮೂರ್ತಿ : ಆಗಲಿ. *(ಪದ್ಯವನ್ನು ಹೇಳುವನು)*

ದೇವರಾದರು ದೇವರಾದರು
ನಮ್ಮ ದೇಶದ ಗಾಂಧಿಯು
ಇಂದ್ರಲೋಕದ ಚಂದ್ರರಾದರು
ನಮ್ಮ ಭಾಗ್ಯವೆ ಭಾಗ್ಯವು.

ಭರತನಾಡಿನ ಮುದ್ದು ಮಕ್ಕಳೆ
ಸದ್ದು ಮಾಡದೆ ಲಾಲಿಸಿ
ತಾತ ಗಾಂಧಿಯ ಮಧುರ ವಾಣಿಯೆ

ಕೇಳಿ ಬರುತಿದೆ ಲಾಲಿಸಿ

(ಇದ್ದಕ್ಕಿದ್ದ ಹಾಗೆ ಒಂದು ದನಿ ಕೇಳಿ ಬರುವುದು)

ಕೃಷ್ಣಮೂರ್ತಿ: ಎಲ್ಲಿ, ಹುಷ್, ಲಾಲಿಸಿ, ಯಾವುದೋ ವಾಣಿ ಕೇಳಿ ಬರುತ್ತಿದೆ.

ಉದಯಶಂಕರ: *(ಲಾಲಿಸಿ)* ಹೌದು ಕಿಟ್ಟು!

ವಾಣಿ : ಪುಟಾಣಿ ಹಕ್ಕಿಗಳಿರಾ! ನೀವೆಲ್ಲಾ ಜಾಣರು. ನಾನು ನಿಮ್ಮ ಹತ್ತಿರವೇ ಇದ್ದೇನೆ. ನಿಮ್ಮೊಂದಿಗೇ ಆಟವಾಡುತ್ತಿದ್ದೇನೆ. ವಾಕಿಂಗೂ ಬರುತ್ತಿದ್ದೇನೆ. ನೂಲನ್ನೂ ತೆಗೆಯುತ್ತಿದ್ದೇನೆ. ಆದರೆ ನಾನು ಮಾತ್ರ ನಿಮ್ಮ ಕಣ್ಣಿಗೆ ಕಾಣಿಸುತ್ತಿಲ್ಲ. ನೀವೆಲ್ಲಾ ನನ್ನ ಕಣ್ಣಿಗೆ ಕಾಣಿಸುತ್ತಿದ್ದೀರಿ. ನಾನು ಹೇಳಿರೋ ಮಾತುಗಳನ್ನೆಲ್ಲಾ ಜ್ಞಾಪಕ ಇಟ್ಟಿದ್ದೀರಿ ತಾನೇ! ಭಜನೆ ಮಾಡ್ತಾ ಇದ್ದೀರಾ! ಎಲ್ಲಿ, ಈಗ ನನ್ನ ಜೊತೆಗೆ 'ರಾಮನಾಮ' ಹೇಳಿ.

ಭಜನೆ : ರಘುಪತಿ ರಾಘವ ರಾಜಾರಾಂ
ಪತಿತ ಪಾವನ ಸೀತಾರಾಂ
ಈಶ್ವರ ಅಲ್ಲಾ ತೇರೆ ನಾಮ್
ಸಬಕೋ ಸನ್ಮತಿ ದೇ ಭಗವಾನ್.

(ಈ ಮೂವರೂ ಹಾಡುತ್ತಲೇ ಇರುತ್ತಾರೆ. ಆ 'ವಾಣಿ' ನಿಂತರೂ ಇವರ ಭಜನೆ ನಿಲ್ಲುವುದಿಲ್ಲ.)

(ಶ್ರೀನಿವಾಸನ ಪ್ರವೇಶ)

ಶ್ರೀನಿವಾಸ : ಏನಿದು, ಈ ಹೊತ್ತಿನಲ್ಲಿ ಭಜನೆ!

(ಎರಡು ಮೂರು ಸಲ ಗಟ್ಟಿಯಾಗಿ ಕೂಗಿದರೂ ಇವರಿಗೆ ಎಚ್ಚರವಾಗೋದಿಲ್ಲ. ಕೊನೆಗೆ ಶ್ರೀನಿವಾಸನು ಶಂಕರನ ಕಿವಿಯ ಹತ್ತಿರ ಬಂದು 'ಶಂಕರಾ' ಎಂದು ಕೂಗುವನು)

ಕೃಷ್ಣಮೂರ್ತಿ : *(ಎಚ್ಚರವಾಗಿ)* ಓಹೋ! ನೀನು ಶ್ರೀನಿವಾಸ, ಯಾವಾಗ ಬಂದೀ!

ಉದಯಶಂಕರ : *(ಕಣ್ ಕಣ್ ಬಿಡುತ್ತಾ)* ಕಿಟ್ಟು, ನಾವು ಇಷ್ಟು ಹೊತ್ತೂ ಎಲ್ಲಿದ್ದೆವು! ನೋಡು ಕಿಟ್ಟು, ನನ್ನ ಚರಕ ಮಾತಾಡ್ತು ರಾಮನಾಮ ಕೂಡ ಹೇಳ್ತು.

ಬಾಲಕೃಷ್ಣ : ಹೌದು ಕಿಟ್ಟು, ನನ್ನ ತಕಲೀನೂ ಮಾತನಾಡಿದ ಹಾಗೇ ಆಯ್ತು. ಎಷ್ಟು ಮುದ್ದಾಗಿತ್ತು ಆ ಮಾತು.

ಕೃಷ್ಣಮೂರ್ತಿ : ನನಗೆ ಅಲ್ಲಿರೋ ಗಾಂಧೀಜಿ ಪ್ರತಿಮೆ ಮಾತನಾಡಿದ ಹಾಗೂ, ರಾಮನಾಮ ಹೇಳಿದ ಹಾಗೂ ಆಯ್ತಪ್ಪ.

ಶ್ರೀನಿವಾಸ : ಏನ್ರೋ ಅದು, ನಿಮ್ಮ ಮಾತುಗಳು? ಹುಚ್ಚುಗಿಚ್ಚು ಹಿಡಿದಿದಿಯೋ ಏನು?

ಕೃಷ್ಣಮೂರ್ತಿ : ಇಲ್ಲ ಶ್ರೀನಿವಾಸ, ಈಗ ಕೊಂಚ ಹೊತ್ತಿನಲ್ಲಿ ನಾವು ದಾರ ತೆಗೀತಾ, ಹಾಡು ಹೇಳ್ತಾ ಇದ್ದೆವು. ಆಗ ಒಂದು 'ವಾಣಿ' ಕೇಳಿಸ್ತು. ಮಾತಾಡ್ತು, ಭಜನೆ ಮಾಡ್ತು. ಉದಯಶಂಕರನಿಗೆ ಚರಕ ಮಾತಾಡಿದಂತೆ, ಬಾಲಕೃಷ್ಣನಿಗೆ ತಕಲಿ ಮಾತಾಡಿದಂತೆ, ನನಗೆ ಆ ಪ್ರತಿಮೆ ಮಾತಾಡ್ತಪ್ಪ. ಆ ಮಾತುಗಳು ನಮ್ಮ ಗಾಂಧೀಜಿ ಅವರ ಮಾತುಗಳೇ! ಅದೇ ಕಿರುನಗೆ. ಅದೇ ಮುದ್ದು ಮಾತು.

ಶ್ರೀನಿವಾಸ : ನಿಮ್ಮ ಮಾತೆಲ್ಲಾ ನಿಜ! ನಮ್ಮ ಗಾಂಧೀಜಿ ಈ ಚರಕದಲ್ಲೂ ಇದ್ದಾರೆ. ಆ ಪ್ರತಿಮೆಯಲ್ಲೂ ಇದ್ದಾರೆ. ಎಲ್ಲೆಲ್ಲೂ ಇದ್ದಾರೆ. ದೇವರು ಎಲ್ಲಿಲ್ಲ ಹೇಳಿ, ನೀವೇ ಪುಣ್ಯವಂತರಪ್ಪ, ಗಾಂಧೀಜಿ ಮಾತುಗಳನ್ನು ಕಿವಿಯಾರೆ ಕೇಳಿದಿರಿ. ನಾನೂ ಇರಬೇಕಾಗಿತ್ತು.

ಉದಯಶಂಕರ : ನಮ್ಮ ತಾತ, ಆಹಾ! ಎಂಥವರಪ್ಪ.

ಕೃಷ್ಣಮೂರ್ತಿ: ಗೊತ್ತಿಲ್ವೇ? ಅವರು ದೇವರಂಥವರು.

(ತೆರೆ ಬೀಳುವುದು. ನಾಟಕ ಮುಗಿಯುವುದು)

****

ಪದಗಳ ಅರ್ಥ

ತಕಲಿ – ನೂಲನ್ನು ತೆಗೆಯುವ ಸಾಧನ

ಪ್ರಶ್ನೆಗಳು

೧. ಕೃಷ್ಣಮೂರ್ತಿಗೆ ಗಾಂಧೀಜಿಯ ಬಗ್ಗೆ ಇದ್ದ ಆಕರ್ಷಣೆ ಯಾವ ರೀತಿಯದು?

೨. ಮೇಷ್ಟ್ರು ತರಗತಿಯಲ್ಲಿ ಏನು ಮಾಡಿದರು?

೩. ಬಾಲಕೃಷ್ಣ ಮಾಡಿದ ತಪ್ಪು ಯಾವುದು? ಅದನ್ನು ಅವನು ಹೇಗೆ ತಿದ್ದಿಕೊಂಡನು?

೪. ಗಾಂಧೀಜಿಯ 'ವಾಣಿ' ಮಕ್ಕಳಿಗೆ ಏನು ಹೇಳಿತು?

೫. ಗಾಂಧೀಜಿ ಮಕ್ಕಳಿಗೆ ಜೀವಂತವಾದದ್ದು ಹೇಗೆ?

ಭಾಷಾಭ್ಯಾಸ

೧. ಈ ನಾಟಕದಲ್ಲಿ ಬಳಕೆಯಾಗಿರುವ ಇಂಗ್ಲಿಷ್ ಪದಗಳನ್ನು ಪಟ್ಟಿ ಮಾಡಿ ಅವುಗಳ ಮೂಲರೂಪಗಳನ್ನೂ ಬದಲಾದ ರೂಪಗಳನ್ನೂ ಬರೆಯಿರಿ.

೨. ಪುಣ್ಯವಂತ – ಪುಣ್ಯವನ್ನು ಹೊಂದಿದವನು. ಇದೇ ರೀತಿ '–ವಂತ' ಎಂದು ಕೊನೆಯಾಗುವ ಕೆಲವು ಪದಗಳನ್ನು ಪಟ್ಟಿ ಮಾಡಿ ಅರ್ಥ ಬರೆಯಿರಿ.

೩. **ಈ ವಾಕ್ಯಗಳನ್ನು ಗಮನಿಸಿ :**

ಅ. 'ನಮ್ಮ ತಾತ ಗಾಂಧೀಜಿ ಹೊರಟು ಹೋದಾಗಿನಿಂದ ನನಗೇನೋ ಮನಸ್ಸೇ ಸರಿಯಾಗಿಲ್ಲ.....'

ಆ. 'ನಿನ್ನ ಮಾತ್ನ ಒಪ್ಪೋಣ, ಆದರೆ ಕೊಟ್ಟ ಮಾತನ್ನ ತಪ್ಪಾತ್ರೆಯೇ!'

ಇ. 'ನಮ್ಮ ಚಿಕ್ಕಪ್ಪನವರು ಇಂಗ್ಲೇಂಡಿಗೆ ಓದೋದಕ್ಕೆ ಹೋಗಿದ್ರು.'

ಮೊದಲನೆಯ ವಾಕ್ಯದಲ್ಲಿ ನಿರೂಪಕನು ತನ್ನ ಬಗೆಗೇ ಹೇಳಿಕೊಳ್ಳುತ್ತಿದ್ದಾನೆ ('ನನಗೇನೋ'); ಎರಡನೆಯ ವಾಕ್ಯದಲ್ಲಿ ಎದುರಿಗಿರುವ ವ್ಯಕ್ತಿಯನ್ನು ಸಂಬೋಧಿಸಿ ಹೇಳುತ್ತಿದ್ದಾನೆ ('ನಿನ್ನ'); ಮೂರನೆಯ ವಾಕ್ಯದಲ್ಲಿ ಎದುರಿಗಿರದ ಮೂರನೆಯ ವ್ಯಕ್ತಿಯ ಬಗ್ಗೆ ('ಚಿಕ್ಕಪ್ಪ') ಹೇಳುತ್ತಿದ್ದಾನೆ.

ತನ್ನ ಬಗೆಗೆ ಹೇಳಿಕೊಳ್ಳುವುದು ಉತ್ತಮ ಪುರುಷ ನಿರೂಪಣೆ; ಎದುರಿಗಿರುವ ವ್ಯಕ್ತಿಯನ್ನು ಸಂಬೋಧಿಸುವುದು ಮಧ್ಯಮ ಪುರುಷ ನಿರೂಪಣೆ; ಮೂರನೆಯವರ ಬಗ್ಗೆ ಹೇಳುವುದು ಪ್ರಥಮ ಪುರುಷ ನಿರೂಪಣೆ.

ನಿರೂಪಣೆಗಳನ್ನು ಒಂದು ಪುರುಷದಿಂದ ಇನ್ನೊಂದು ಪುರುಷಕ್ಕೆ ಬದಲಾಯಿಸಬಹುದು.

ಉದಾ : 'ನಾನು ಹೇಳುತ್ತೇನೆ' (ಉ.ಪು.) : 'ಅವನು ಹೇಳುತ್ತಾನೆ' (ಪ್ರ.ಪು). ಕೆಲವು ವಾಕ್ಯಗಳನ್ನು ಪಟ್ಟಿ ಮಾಡಿ ಅವುಗಳ ನಿರೂಪಣೆಗಳನ್ನು ಬದಲಾಯಿಸಿ.

೩. ವಚನಗಳು

– ಬಸವಣ್ಣ

೧. ಕಳಬೇಡ, ಕೊಲಬೇಡ,
ಹುಸಿಯ ನುಡಿಯಲು ಬೇಡ, ಮುನಿಯ ಬೇಡ,
ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ !

೨. ನೀರ ಕಂಡಲ್ಲಿ ಮುಳುಗುವರಯ್ಯ!
ಮರವ ಕಂಡಲ್ಲಿ ಸುತ್ತುವರಯ್ಯ!
ಬತ್ತುವ ಜಲವನೊಣಗುವ ಮರನ
ಮೆಚ್ಚಿದವರು ನಿಮ್ಮನೆತ್ತ ಬಲ್ಲರು
ಕೂಡಲ ಸಂಗಮ ದೇವ?

ಪದಗಳ ಅರ್ಥ

ಮುನಿ – ಕೋಪ ಮಾಡಿಕೊ ; ಬಣ್ಣಿಸು – ವರ್ಣಿಸು, ಹೊಗಳು ; ಇದಿರ – ಬೇರೆಯವರನ್ನು ; ಹಳಿ – ನಿಂದಿಸು ; ಪರಿ – ರೀತಿ ; ಬತ್ತು – ಒಣಗು ; ನಿಮ್ಮನೆತ್ತ ಬಲ್ಲರು – ನಿಮ್ಮನ್ನು ಎಲ್ಲಿ ಅರ್ಥ ಮಾಡಿಕೊಳ್ಳುತ್ತಾರೆ?

ಪ್ರಶ್ನೆಗಳು

೧. ಈ ವಚನಗಳಲ್ಲಿರುವ ನೀತಿ ಯಾವುದು?
೨. ಅಂತರಂಗಶುದ್ಧಿ – ಬಹಿರಂಗ ಶುದ್ಧಿ : ವ್ಯತ್ಯಾಸವೇನು?
೩. ಬಸವಣ್ಣನವರು ಬಹಿರಂಗದ ಆಚರಣೆಯನ್ನು ಹೇಗೆ ವಿಡಂಬಿಸಿದ್ದಾರೆ?

ಭಾಷಾಭ್ಯಾಸ

೧. ಮುನಿ : ಈ ಪದಕ್ಕೆ 'ಕೋಪ ಮಾಡಿಕೊ' (ಕನ್ನಡ) ಮತ್ತು 'ಋಷಿ' (ಸಂಸ್ಕೃತ) ಎಂಬ ಎರಡು ಅರ್ಥಗಳಿವೆ. ಇದಕ್ಕೆ 'ನಾನಾರ್ಥ'ಗಳು ಎಂದು ಹೆಸರು. ಹೀಗೆ ನಾನಾರ್ಥಗಳನ್ನು ಹೊಂದಿರುವ ಕೆಲವು ಪದಗಳನ್ನು ಪಟ್ಟಿ ಮಾಡಿ

೨. ವರ್ಣ>ಬಣ್ಣ : ಹೀಗೆ ಸಂಸ್ಕೃತ ಪದ ಕನ್ನಡದಲ್ಲಿ ಬಳಕೆಯಾಗುವಾಗ ಕೆಲವು ಬದಲಾವಣೆಗಳನ್ನು ಪಡೆಯುತ್ತದೆ. ಸಂಸ್ಕೃತ ರೂಪಕ್ಕೆ 'ತತ್ಸಮ' ಎಂದೂ ಕನ್ನಡ ರೂಪಕ್ಕೆ 'ತದ್ಭವ' ಎಂದೂ ಹೆಸರು. ಇಲ್ಲಿ ಕೊಟ್ಟಿರುವ ಪದಗಳ ತತ್ಸಮ /ತದ್ಭವ ರೂಪಗಳನ್ನು ಗುರುತಿಸಿ : ಸಂಜೆ, ಸಿರಿ, ಪುಸ್ತಕ, ತ್ಯಾಗ, ಬಸವ, ಹಕ್ಕಿ, ಹಂಸ.

೬. ಸರ್ವರ ಕವಿ ಸರ್ವಜ್ಞ

– ಡಾ. ಸಿದ್ಧಯ್ಯ ಪುರಾಣಿಕ

ಒಂದು ಭಾಷೆಯನ್ನಾಡುವ ಎಲ್ಲ ಜನರೂ ಏಕಪ್ರಕಾರವಾಗಿ ಮೆಚ್ಚುವ ಕವಿಗಳು ವಿರಳ. ಒಂದೊಂದು ಭಾಷೆಯಲ್ಲಿ ಒಬ್ಬಿಬ್ಬರು ದೊರೆಯುತ್ತಾರೆ. ಇಂಥವರು – ತಮಿಳಿನಲ್ಲಿ ತಿರುವಳ್ಳುವರ್, ತೆಲುಗಿನಲ್ಲಿ ವೇಮನ, ಮರಾಠಿಯಲ್ಲಿ ಸ್ವಾಮಿ ರಾಮದಾಸ, ಹಿಂದಿಯಲ್ಲಿ ಕಬೀರ, ಕನ್ನಡದಲ್ಲಿ ಸರ್ವಜ್ಞ. ಆಯಾ ಭಾಷೆಯಲ್ಲಿ ಇವರ ಹೆಸರು ಮನೆಮಾತು. ಎಲ್ಲರ ಮನಗಳಲ್ಲಿ ಇವರಿಗೆ ಮನೆ. ಇವರ ಪದ್ಯಗಳಲ್ಲಿ ಕಲೆಗಾರಿಕೆ ಹೆಚ್ಚಿಲ್ಲದಿರಬಹುದು. ಆದರೆ ಲೋಕಾನುಭವದ ಸಾರವೇ ಇವುಗಳಲ್ಲಿ ಹರಳುಗಟ್ಟಿರುವ ಕಾರಣ ಇವು ಎಲ್ಲರಿಗೂ ಪ್ರಿಯವಾಗಿವೆ.

ಬೋಳಿಸಿಕೊಂಡ ಮಂಡೆ, ಹೊದ್ದ ತುಂಡುಗಂಬಳಿ, ಹಿಡಿದ ಬೆತ್ತ, ಮುಖದ ತೇಜಸ್ಸು, ನೋಡಿದವರೆಲ್ಲ ನಿಬ್ಬೆರಗಾಗಿ ನಿಲ್ಲುವಂಥ ಮೂರ್ತಿಸ್ವರೂಪ. ಈ ಹಿಂಡನಗಲಿದ ಗಜಕ್ಕೆ ಯಾರ ಹಂಗೂ ಇಲ್ಲ. ಹಂಗಿನ ಬಾಳು ಅವನಿಂದ ಗಾವುದ ಗಾವುದ ದೂರ. 'ಹಂಗಿನಮೃತಕ್ಕಿಂತ ತಂಗುಳನ್ನವು ಲೇಸು', 'ಹಂಗಿನರಮನೆಗಿಂತ ಇಂಗಡದ ಗುಡಿ ಲೇಸು', 'ಅಪಮಾನದೂಟದಿಂದುಪವಾಸ ಕರ ಲೇಸು' ಎಂದು ಘೋಷಿಸಿದ್ದ ಅವನು ಯಾರ ಹಂಗಿಗೂ ಒಳಗಾಗದೆ, 'ಜಗದಿ ಸ್ವಾತಂತ್ರ್ಯವೇ ಲೇಸು' ಎಂಬ ತನ್ನ ನಿಲುವಿಗೆ ತಕ್ಕಂತೆ ಬದುಕಿದ. 'ಹಿರಿದಪ್ಪನಾಡಿದೆ: ತಿರಿವರಿಂ ಸಿರಿವಂತರಾರು' ಎಂಬ ನಂಬಿಕೆಯಿದೆ; ವಿಚಾರಗಳಿಂದ ತುಂಬಿದ ತಲೆಯಿದೆ. ಅನುಭವದಿಂದ ತುಂಬಿದ ಎದೆಯಿದೆ; ಇನ್ನೇನು ಬೇಕು ಬಿಡುಗಡೆಯ ಬಾಳಿಗೆ? 'ಬಾಳುವೆಗೆ ಬಂಧನವೇ ಹೊಲ್ಲ' ಎಂದಿದ್ದ ಅವನು ಎಂದಿಗೂ ಬಂಧನಕ್ಕೆ ಸಿಲುಕಲಿಲ್ಲ.

ತ್ರಿಪದಿಯ ತ್ರಿವಿಕ್ರಮ

ಕನ್ನಡ ನಾಡನೆಲ್ಲ ಅಲೆದ ಈ ತ್ರಿವಿಕ್ರಮ ಅನುಭವಿಯ ವೇದವನ್ನೇ ನಮಗೆ ನೀಡಿದ. ಇವನ ರಚನೆಗಳು ವಚನಗಳೆಂದು ಪ್ರಕಟವಾಗಿದ್ದರೂ ಅವುಗಳಿರುವುದು ತ್ರಿಪದಿಯ ರೂಪದಲ್ಲಿ. ತ್ರಿಪದಿ ಕನ್ನಡ ಛಂದಸ್ಸಿನ ಗಾಯತ್ರಿ. ಮಹಾಕಾವ್ಯಗಳಲ್ಲಿ ಅದಕ್ಕೆ ಇಂಬು ದೊರೆಯದಿದ್ದರೂ ಗರತಿಯರ ಹಾಡುಗಳು ಮೈದಳೆದುದು ಅದರಲ್ಲಿ. ಹರಿಹರನ ಕೈಗೆ ರಗಳೆ, ರತ್ನಾಕರವರ್ಣಿಯ ಕೈಗೆ ಸಾಂಗತ್ಯ ಸಿಕ್ಕು ಪರಮೋನ್ನತಿಯನ್ನು ಪಡೆದಂತೆ ಸರ್ವಜ್ಞನ ಕೈಗೆ ತ್ರಿಪದಿ ಸಿಕ್ಕು ತನ್ನ ತ್ರಿವಿಕ್ರಮತೆಯನ್ನು ಸಾಧಿಸಿಕೊಂಡಿತು. ಅದರ ಮೂರು ಪಾದಗಳು ವಾಮನನ ಮೂರು ಪಾದಗಳೇ. ಒಂದೊಂದು ಪಾದದಲ್ಲಿ ಒಂದೊಂದು ಅರ್ಥಪ್ರಪಂಚ.

ಈ ತ್ರಿಪದಿಗಳು ಒಳಗೊಳ್ಳದ ವಿಷಯವಿಲ್ಲವೆಂದರೂ ಸಲ್ಲುತ್ತದೆ. ಅಧ್ಯಾತ್ಮ, ಯೋಗ, ಧರ್ಮ, ನೀತಿ, ವ್ಯವಹಾರ, ವೈದ್ಯ, ವ್ಯವಸಾಯ, ಜ್ಯೋತಿಷ್ಯ, ಕುಲ, ಜಾತಿ, ಪಥ, ಪಂಥ, ಕಾಲಜ್ಞಾನ, ಗುಣ, ದೋಷ, ಸಜ್ಜನ, ದುರ್ಜನ, ಭಾಷೆ, ದೇಶ, ದೇವರು, ರಾಜನೀತಿ – ಏನೆಲ್ಲ

ಇಲ್ಲಿ ಚರ್ಚಿತವಾಗಿವೆ. ಮಥಿಸಲ್ಪಟ್ಟಿವೆ; ತಮ್ಮ ಟೊಳ್ಳು ಕಳೆದುಕೊಂಡು ಗಟ್ಟಿಯನ್ನು ಉಳಿಸಿಕೊಂಡಿವೆ. ಎಲ್ಲಿಯೂ ಪೂರ್ವಾಗ್ರಹಕ್ಕೆ ಕಟ್ಟುಬಿದ್ದಿಲ್ಲ; ಎಲ್ಲಿಯೂ ಅದು ಮೇಲು ಇದು ಕೀಳು ಎಂಬ ಕಿತ್ತಾಟ ಇಲ್ಲ. ಲೇಸಾವುದು, ಹೊಲ್ಲ ಯಾವುದು ಎಂದು ಪರೀಕ್ಷಿಸಲಾಗಿದೆಯೇ ಹೊರತು ಯಾವುದನ್ನೂ ಉಪೇಕ್ಷಿಸಿಲ್ಲ. ಅವನ ದೃಷ್ಟಿಯೇ ವಿಶ್ವ ವಿಶಾಲದೃಷ್ಟಿ :

" **ಊರೆಲ್ಲ ನೆಂಟರು, ಕೇರಿಯೆಲ್ಲವು ಬಳಗ!**
ಧಾರುಣಿಯೆ ನನ್ನ ಕುಲದೈವವಾಗಿರಲು ಯಾರನ್ನು ಬಿಡಲಿ?" ಎಂದು ಹೇಳಿದ.

ಅವನು ಬದುಕನ್ನು ಕೆದಕಿ ನೋಡಿ ಅದರೊಳಗಿನ ಹದುಳದ ಅಂಶಗಳನ್ನು ಸರ ಮಾಡಿದ. ಹೊಲ್ಲದ ಅಂಶಗಳನ್ನು ಕೇರಿ, ತೂರಿ, ಹಾರಿಸಿ ಬಿಟ್ಟ. ಹೀಗೆ ಹಾರಿಸಿದವುಗಳಲ್ಲಿ ಅಂಧಶ್ರದ್ಧೆಗಳಿವೆ; ಕುಲಜಾತಿಗಳಿವೆ; ಮೇಲುಕೀಳಿನ ಕಲ್ಪನೆಗಳಿವೆ; 'ಮುಟ್ಟೀ ತಟ್ಟೀ' ಎಂಬ ಕೆಟ್ಟ ರೂಢಿಗಳಿವೆ. ದುರ್ಗುಣಗಳಿವೆ: ದುಷ್ಟ ವೃತ್ತಿಗಳಿವೆ – ಬದುಕನ್ನು ಕಂದಿಸುವ, ಕುಂದಿಸುವ, ಬಂಧಿಸುವ ಎಲ್ಲವೂ ಇವೆ. ಎಲ್ಲೆಲ್ಲೂ ವೈಚಾರಿಕತೆಗೆ ಅಗ್ರಪಟ್ಟ, ಮಾನವೀಯತೆಗೆ ಮೊದಲ ಮಣೆ, ವ್ಯಾವಹಾರಿಕತೆಗೆ ಮನ್ನಣೆಯ ಸ್ಥಾನ. ಭಾವಾತಿರೇಕಕ್ಕೆ ಜಾಗವೇ ಇಲ್ಲ. ಅತಿಮಾನುಷತೆ, ಅಸಹಜತೆ, ಉತ್ಪ್ರೇಕ್ಷೆ, ಇತ್ಯಾದಿಗಳಿಗೆ ಸ್ವಾಗತವೇ ಇಲ್ಲ. ಸಹಜತೆ, ಸ್ವಾಭಾವಿಕತೆ, ಯಥಾರ್ಥತೆಗಳೇ ಮುಖ್ಯ ಲಕ್ಷಣಗಳು.

ಇನ್ನು ಈ ತ್ರಿಪದಿಗಳ ಶಕ್ತಿಗೆ ಸಾಕ್ಷಿಯಾಗಿ ಕೆಲವನ್ನಿಲ್ಲಿ ನೋಡಬಹುದಾಗಿದೆ:

ಮಾನವ ಏನಾಗಬೇಕು? "ಏನಾದಡೇನಯ್ಯ ತಾನಾಗದನ್ನಕ್ಕ
ತಾನಾಗಿ ತನ್ನನರಿದವನು ಲೋಕದಲಿ ಏನಾದಡೇನು – ಸರ್ವಜ್ಞ"

ಅಜ್ಞಾನ ತೊಲಗುವುದು ಹೇಗೆ? "ಧ್ಯಾನದ ಹೊಸಬತ್ತಿ ಮೌನದ ತಿಳಿದುಪ್ಪ
ಸ್ವಾನುಭವವೆಂಬ ಬೆಳಗಿನ ಜ್ಯೋತಿಯಜ್ಞಾನವನು ಸುಡುಗು"
ಈ ದೀಪ ಜೀವನದ ಜ್ಯೋತಿಯಾಗದೇ?

ಒಂದು ಅಪ್ರತಿಮ ಪ್ರತಿಮೆ : "ಒಡಲೆಂಬ ಹುತ್ತಕ್ಕೆ ನುಡಿವ ನಾಲಗೆ ಸರ್ಪ
ಕಡುರೋಷವೆಂಬ ವಿಷವೇರೆ ಸಮತೆ ಗಾರುಡಿಗನಂತಕ್ಕು"

ಇದು ಕೈಲಾಸಕ್ಕೆ ಪ್ರವೇಶಪತ್ರ : "ಅನ್ನವನು ಇಕ್ಕುವುದು, ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಾಣವಕ್ಕು – ಸರ್ವಜ್ಞ"

ಇದು ಕೇಡು ಬರುವಾಗಿನ ಚಿತ್ರ : " ಕೇಡು ತಾ ಬರುವಲ್ಲಿ ಕೂಡುವುದು ದುರ್ಬುದ್ಧಿ।
ಕಾಡಿನಲಿ ಕಿಚ್ಚು ಒಗೆದಾಗ ಮಾರುತನು ಕೂಡಿಕೊಂಡಂತೆ ಸರ್ವಜ್ಞ"

ಮಾತಲ್ಲ, ಜ್ಯೋತಿ

ಸರ್ವಜ್ಞನ ಕೈಯಲ್ಲಿ ಕನ್ನಡ ಮಾತು ಕೇವಲ ಮಾತಾಗಿ ಉಳಿಯಲಿಲ್ಲ, ಅದು ಜ್ಯೋತಿಯಾಯಿತು. ಆ ಮಾತು ಕಣ್ಣಿಗೇ ಬೀಳಲಿ, ಕಿವಿಗೇ ಬೀಳಲಿ, ಹೃದಯದ ಒಳಗೆ ದೀಪ ಹಚ್ಚಿದಂತಾಗುತ್ತದೆ. ಬೆಳಕು ತುಳುಕುತ್ತದೆ. ಸರ್ವಜ್ಞನ ಕನ್ನಡ ಭಾಷೆಯ ಬಗ್ಗೆ ವರಕವಿ ಬೇಂದ್ರೆಯವರ ಮಾತು ಮನನೀಯ: "ಇಂದಿನ ಯುಗ ಮಾತುಗಾರಿಕೆಯದು. ಮಾತು ಕಲಿಯಬೇಕೆನ್ನುವವರು ಸರ್ವಜ್ಞ ವಚನಗಳ ಗರಡಿ ಮನೆಯಲ್ಲಿ ಸಾಧನೆ ಮಾಡಬೇಕು. ಚುರುಕು–ಹರಿತ, ಇರಿತ–ತಿವಿತ,

ನಗೆ–ನಯ; ಈ ಪಟ್ಟುಗಳನ್ನು ಕಲಿಯಬೇಕಾದರೆ ಈ ವಚನಗಳೊಡನೆ ಸಲಿಗೆ ಮಾಡಬೇಕು."

ಸರ್ವಜ್ಞನ ಕೈವಾಡದಿಂದ ಕನ್ನಡ ಮಾತಿಗೆ ಕಸುವು ಬಂದಿದೆ, ಕುಸುರು ಬಂದಿದೆ, ಜಸವು ಬಂದಿದೆ. ಒಂದೊಂದು ತ್ರಿಪದಿಯಲ್ಲೂ ಒಂದೊಂದು ಗಾದೆಯೋ, ನಾಣ್ಣುಡಿಯೋ, ಜಾಣ್ಣುಡಿಯೋ, ನಾಂಟು ನುಡಿಯೊ ಉಂಗುರಕ್ಕೆ ಕುಂದಣದಂತೆ ಸೇರಿಕೊಂಡಿದೆ.

ಮಾತಿನ ಮಹತ್ವವನ್ನು ಅರಿತುಕೊಂಡಿದ್ದರಿಂದಲೇ ಸರ್ವಜ್ಞನ ಮಾತುಗಳಿಗೆ ಜ್ಯೋತಿಯಾಗುವುದು ಸಾಧ್ಯವಾಯಿತು. 'ಮಾತಿನಿಂ ನಗೆನುಡಿಯು, ಮಾತಿನಿಂ ಹಗೆ ಕೊಲೆಯು; ಮಾತಿನಿಂ ಸರ್ವ ಸಂಪದವು, ಲೋಕಕ್ಕೆ ಮಾತೇ ಮಾಣಿಕವು' ಎಂದು ಸಾರಿದ ಅವನ ಮಾತುಗಳೆಲ್ಲ ಮಾಣಿಕಗಳೇ. ನಾವೆಲ್ಲ ಮಾತು ಬಲ್ಲವರಾಗಬೇಕು.

ಮಾತರಿಯದೆ ಕೆಡದಿರಬೇಕಾದರೆ ಸರ್ವಜ್ಞನ ಸೂಳ್ನುಡಿಗಳನ್ನು ತಲೆಯಲ್ಲಿ ತುಂಬಿಕೊಳ್ಳಬೇಕು. 'ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು। ಮಾತ ತಾನರಿಯದಧಮಂಗೆ ಮಾಣಿಕವು ತೂತುಬಿದ್ದಂತೆ' ಎಂಬುದು ಸರ್ವಜ್ಞನ ನಿಲುವು. ಆದರೊಂದು ಎಚ್ಚರಿಕೆ: 'ಮೆಲ್ಲನೆಯ ಸುರಿನೀರು ಕಲ್ಲ ಭೇದಿಸಲಕ್ಕು'. ಆದುದರಿಂದ 'ಕಲ್ಲ ಮೇಲಿನ ನೀರು ಮೆಲ್ಲನೆಯ ಸರಿದಂತೆ ಸೊಲ್ಲನಾರೈದು ನುಡಿವನ ಜಾಣ್ಮೆಯು ಎಲ್ಲಕ್ಕು ಮಿಗಿಲು'. ಇನ್ನು ಮಾತಾಡುವವ ರಸಿಕನಾಗಿದ್ದರೆ ಕೇಳುವುದೇನಿದೆ? 'ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ'.

ಮಾತು ಹೊತ್ತಿಗೆ ಸರಿಯಾಗಿ ಒದಗಿದರೆ ಅದರ ಶಕ್ತಿ ಬಹಳ. 'ಹೊತ್ತಿಗೊದಗಿದ ಮಾತು ಸತ್ತವನು ಎದ್ದಂತೆ। ಹೊತ್ತಾಗಿ ನುಡಿದ ಮಾತು ಕೈ ಜಾರಿದ ಮುತ್ತಿನಂತಿಹುದು'. ಸರ್ವಜ್ಞನ ಮಾತುಗಳು ಹೊತ್ತಿಗೊದಗುವ ಮಾತುಗಳು.

****

ಪದಗಳ ಅರ್ಥ

ಮಂಡೆ – ತಲೆ ; ಹಂಗು – ಋಣ ; ಗಾವುದ – ದೂರದ ಒಂದು ಅಳತೆ; ಏಂಗಡ – ಒಂಟಿಯಾದ ; ತಿರಿವರಿಂ – ಭಿಕ್ಷುಕರಿಗಿಂತಲೂ ; ಹೊಲ್ಲ – ಕೆಟ್ಟದ್ದು ; ತ್ರಿಪದಿ – ಮೂರು ಸಾಲುಗಳ ಒಂದು ಪದ್ಯ ಜಾತಿ; ಇಂಬು – ಅವಕಾಶ ; ಗರತಿ – ಗೃಹಿಣಿ ; ಸುಡುಗು – ಸುಡುತ್ತದೆ ; ಗಾರುಡಿಗ – ಮಂತ್ರವಾದಿ ; ನನ್ನಿ – ಸತ್ಯ ; ಬಗೆದಡೆ – ಪರಿಗಣಿಸಿದರೆ ; ಬಿನ್ನಾಣ – ಸಂ. 'ವಿಜ್ಞಾನ' ವಿಶೇಷವಾದ ಜ್ಞಾನ ; ಕಸುವು – ಬಲ, ಕೆಚ್ಚು, ಸ

ಪ್ರಶ್ನೆಗಳು

೧. ಸರ್ವಜ್ಞನ ಸ್ವರೂಪ ಯಾವ ರೀತಿಯದು?

೨. ತ್ರಿಪದಿಗಳಲ್ಲಿ ಒಳಗೊಂಡಿರುವ ವಿಷಯಗಳು ಯಾವುವು?

೩. ಸರ್ವಜ್ಞನ ಬಗ್ಗೆ ಬೇಂದ್ರೆಯವರು ಏನು ಹೇಳಿದ್ದಾರೆ?

೪. ಮಾತಿನ ಬಗ್ಗೆ ಸರ್ವಜ್ಞನ ವಿಚಾರಗಳು ಹೇಗೆ ವ್ಯಕ್ತವಾಗಿವೆ?

ಭಾಷಾಭ್ಯಾಸ

೧. ಈ ಉದಾಹರಣೆಗಳನ್ನು ಗಮನಿಸಿ :

ತುಂಡುಗಂಬಳಿ = ತುಂಡು + ಕಂಬಳಿ ; ಹಿಂಡನಗಲಿದ = ಹಿಂಡನು + ಅಗಲಿದ ; ಮೈದಳೆದುದು = ಮೈ + ತಳೆದುದು ; ಗಟ್ಟಿಯನ್ನು = ಗಟ್ಟಿ + ಅನ್ನು

ಒಂದಕ್ಕಿಂತ ಹೆಚ್ಚು ಪದಗಳು ಸೇರಿ ಈ ಪದಗಳು ಸಿದ್ಧವಾಗಿವೆ. ಇದಕ್ಕೆ 'ಸಂಧಿ' ಎಂದು ಹೆಸರು. ಹೀಗೆ ಪದಗಳು ಒಟ್ಟಾಗಿ ಸೇರುವಾಗ ಕನ್ನಡದಲ್ಲಿ ಮುಖ್ಯವಾಗಿ ಮೂರು ರೀತಿಯ ಬದಲಾವಣೆಗಳಾಗಬಹುದು

೧. ಇರುವ ಧ್ವನಿ ಬಿಟ್ಟುಹೋಗುವುದು ಅಥವಾ ಲೋಪವಾಗುವುದು.

ಉದಾ : ಹಿಂಡನು + ಅಗಲಿದ = ಹಿಂಡನಗಲಿದ

ಇಲ್ಲಿ ಮೊದಲ ಪದದ ಕೊನೆಯಲ್ಲಿರುವ 'ಉ' ಸ್ವರ ಲೋಪವಾಗಿದೆ. ಆದ್ದರಿಂದ ಇದು ಲೋಪಸಂಧಿ.

ನಿರ್ದಿಷ್ಟವಾಗಿ ಹೇಳುವುದಾದರೆ ಉಕಾರ ಲೋಪಸಂಧಿ.

೨. ಇಲ್ಲದಿರುವ ಧ್ವನಿ ಸೇರಿಕೊಳ್ಳುವುದು.

ಉದಾ : ಗಟ್ಟಿ + ಅನ್ನು = ಗಟ್ಟಿಯನ್ನು

ಇಲ್ಲಿ 'ಯ್' ಎಂಬ ವ್ಯಂಜನ ಬಂದು ಸೇರಿಕೊಂಡಿದೆ. ಆದ್ದರಿಂದ ಇದು ಆಗಮಸಂಧಿ : ಇಲ್ಲಿ ಆಗಿರುವುದು ಯಕಾರಾಮ ಸಂಧಿ.

೩. ಒಂದು ಧ್ವನಿಗೆ ಬದಲಾಗಿ ಮತ್ತೊಂದು ಧ್ವನಿ ಬರುವುದು.

ಉದಾ : ತುಂಡು + ಕಂಬಳಿ = ತುಂಡುಗಂಬಳಿ

ಇಲ್ಲಿ ಎರಡನೆಯ ಪದದ ಮೊದಲಲ್ಲಿರುವ 'ಕ' ಧ್ವನಿಗೆ ಬದಲಾಗಿ ಸಂಧಿಯಲ್ಲಿ 'ಗ' ಕಾಣಿಸಿಕೊಂಡಿದೆ ಇದಕ್ಕೆ ಆದೇಶಸಂಧಿ ಎಂದು ಹೆಸರು.

ಈ ಪಠ್ಯಭಾಗದಿಂದ ಸಂಧಿಯಾಗಿರುವ ಕೆಲವು ಕನ್ನಡ ಪದಗಳನ್ನು ಪಟ್ಟಿ ಮಾಡಿ ಅವುಗಳನ್ನು ಬಿಡಿಸಿ ಬರೆದು ಸಂಧಿ ಯಾವುದೆಂಬುದನ್ನು ಗುರುತಿಸಿ.

೫. ಎಲ್ಲಾನು ಬಲ್ಲೆನೆಂಬುವಿರಲ್ಲ

– ಪುರಂದರದಾಸ

ಎಲ್ಲಾನು ಬಲ್ಲೆನೆಂಬುವಿರಲ್ಲ । ಅವಗುಣ ಬಿಡಲಿಲ್ಲ ॥ ಪ ॥

ಸೊಲ್ಲಿಗೆ ಶರಣರ ಕಥೆಗಳ ಪೇಳುತ
ಅಲ್ಲದ ನುಡಿಯನು ನುಡಿಯುವಿರಲ್ಲ ॥ ಅ.ಪ. ॥

ಕಾವಿಯನುಟ್ಟು ತಿರುಗುವಿರಲ್ಲ ಕಾಮವ ಬಿಡಲಿಲ್ಲ ।
ನೇಮನಿಷ್ಠೆಗಳ ಮಾಡುವಿರಲ್ಲ ತಾಮಸ ಬಿಡಲಿಲ್ಲ ॥
ತಾವೊಂದರಿಯದೆ ಪರರನು ತಿಳಿಯದೆ
ಶ್ವಾನನ ಕುಳಿಯಲಿ ಬೀಳುವಿರಲ್ಲ ॥ ೧ ॥

ಗುರುಗಳ ಸೇವೆ ಮಾಡಿದಿರಲ್ಲ ಗುರುತಾಗಲಿಲ್ಲ ।
ಪರಿ ಪರಿ ದೇಶವ ತಿರುಗಿದಿರಲ್ಲ ಪೊರಯುವರಿನ್ನಿಲ್ಲ ॥
ಅರಿವೊಂದರಿಯದೆ ಆಗಮ ತಿಳಿಯದೆ
ನರಕ ಕೂಪದಲಿ ಬೀಳುವಿರಲ್ಲ ॥ ೨ ॥

ಬ್ರಹ್ಮಜ್ಞಾನಿಗಳೆನಿಸುವಿರಲ್ಲ ಹಮ್ಮು ಬಿಡಲಿಲ್ಲ ।
ಸುಮ್ಮನೆ ಯಾಗವ ಮಾಡುವಿರಲ್ಲ ಸುಳ್ಳನು ಬಿಡಲಿಲ್ಲ ॥
ಗಮ್ಮನೆ ಪುರಂದರ ವಿಠಲನ ಪಾದಕೆ
ಹೆಮ್ಮೆ ಬಿಟ್ಟು ನೀವೆರಗಲೆ ಇಲ್ಲ ॥ ೩ ॥

****

ಪದಗಳ ಅರ್ಥ

ಬಲ್ಲೆನು – ತಿಳಿದಿದ್ದೇನೆ ; ಅವಗುಣ – ಕೆಟ್ಟ ಗುಣ ; ಸೊಲ್ಲು – ಮಾತು ; ಪೇಳು – ಹೇಳು ; ಅಲ್ಲದ ನುಡಿ – ಕೆಟ್ಟ ಮಾತು ; ತಾಮಸ – ಕೆಟ್ಟಗುಣ ; ಶ್ವಾನನ ಕುಳಿ – ನಾಯಿಯ ಜನ್ಮ ; ಪೊರೆ – ಕಾಪಾಡು ; ಆಗಮ – ಶಾಸ್ತ್ರ ; ಕೂಪ – ಬಾವಿ ; ಹಮ್ಮು – ಅಹಂಕಾರ.

ಪ್ರಶ್ನೆಗಳು

೧. ಸೋಗಿನ ಜ್ಞಾನಿಗಳ ವರ್ತನೆ ಯಾವ ರೀತಿಯದು?

೨.   ಈ ಹಾಡಿನ ಹಿನ್ನೆಲೆಯಲ್ಲಿ ನಿಜವಾದ ಜ್ಞಾನಿಯ ಲಕ್ಷಣಗಳನ್ನು ಗುರುತಿಸಿ.

ಭಾಷಾಭ್ಯಾಸ

೧.   ಈ ವಾಕ್ಯಗಳನ್ನು ಗಮನಿಸಿ :

ಪ್ರಶ್ನೆ : ನಿನ್ನ ಬಳಿ ಹಣವಿದೆಯೇ?

ಉತ್ತರ : ಇಲ್ಲ.

ಪ್ರಶ್ನೆ : ಅವಳು ನಿನ್ನ ತಂಗಿಯೇ?

ಉತ್ತರ : ಅಲ್ಲ.

'ಇಲ್ಲ' ಮತ್ತು 'ಅಲ್ಲ' ಎಂಬ ಪದಗಳು ಬಳಕೆಯಾಗುವ ರೀತಿಯಲ್ಲಿ ಇರುವ ವ್ಯತ್ಯಾಸಗಳನ್ನು ಗಮನಿಸಿ. ಈ ಹಾಡಿನಲ್ಲಿ ಈ ಪದಗಳು ಹೇಗೆ ಬಳಕೆಯಾಗಿವೆ ಎಂಬುದನ್ನು ಗುರುತಿಸಿ.

೫. ಸಭಾಪರ್ವ

– ಎ.ಆರ್. ಕೃಷ್ಣಶಾಸ್ತ್ರೀ

ಧರ್ಮರಾಜನಿಗೆ ರಾಜಸೂಯ ಎಂಬ ಯಜ್ಞವನ್ನು ಮಾಡಬೇಕೆಂದು ಆಸೆಯಾಯಿತು. ಅದನ್ನು ದೊಡ್ಡ ರಾಜರೆಲ್ಲಾ ಮಾಡುತ್ತಿದ್ದರು. ಆದ್ದರಿಂದ ಅವನು ಕೃಷ್ಣನನ್ನು ಕರೆಸಿ ಕೇಳಿದನು. ಅವನು 'ಆಗಬಹುದು; ಆದರೆ ಜರಾಸಂಧನೆಂಬ ಬಲವಾದ ರಾಜನಿದ್ದಾನೆ; ಅವನು ತಾನು ಚಕ್ರವರ್ತಿ ಎಂದು ಹೇಳಿಕೊಳ್ಳುತ್ತಿದ್ದಾನೆ; ಅವನು ಇರುವತನಕ ಆಗುವುದಿಲ್ಲ' ಎಂದು ಹೇಳಿ, ಭೀಮ, ಅರ್ಜುನ ಇಬ್ಬರನ್ನೂ ಕರೆದುಕೊಂಡು ಜರಾಸಂಧನ ಮನೆಗೆ ಹೋದನು. ಅಲ್ಲಿ ಅವರು ಅವನನ್ನು ಕೊಂದು ಅವನು ಸೆರೆಹಾಕಿಕೊಂಡಿದ್ದ ರಾಜರನ್ನೆಲ್ಲಾ ಬಿಡಿಸಿದರು. ಆಮೇಲೆ ಯಜ್ಞವು ನಡೆಯಿತು. ಅದರಲ್ಲಿ, ಕೃಷ್ಣನೇ ಎಲ್ಲರಿಗಿಂತಲೂ ದೊಡ್ಡವನೆಂದು ಧರ್ಮರಾಯನು ಅವನಿಗೆ ಪೂಜೆ ಮಾಡಿದನು. ಅದನ್ನು ನೋಡಿದ ಶಿಶುಪಾಲನೆಂಬ ರಾಜನಿಗೆ ಸಿಟ್ಟು ಬಂತು. ಅವನಿಗೆ ಕೃಷ್ಣನನ್ನು ಕಂಡರೆ ಆಗುತ್ತಿರಲಿಲ್ಲ. ಆದ್ದರಿಂದ ಕೃಷ್ಣನನ್ನು ಬೈದನು. ಕೃಷ್ಣನು ಅವನನ್ನು ತನ್ನ ಚಕ್ರದಿಂದ ಹೊಡೆದು ಕೊಂದುಹಾಕಿದನು.

ದುರ್ಯೋಧನನೂ ಆ ಯಜ್ಞಕ್ಕೆ ಬಂದಿದ್ದನು. ಅವನು ಪಾಂಡವರ ಅರಮನೆಯಲ್ಲಿದ್ದಾಗ ತಳತಳನೆ ಹೊಳೆಯುತ್ತಿದ್ದ ಅದರ ನೆಲವನ್ನು ನೀರು ಎಂದು ತಿಳಿದುಕೊಂಡು ಅದನ್ನು ದಾಟಿದನು. ನೀರನ್ನು ನೆಲವೆಂದು ತಿಳಿದುಕೊಂಡು ಅದರಲ್ಲಿ ಬಿದ್ದನು. ಗೋಡೆಯನ್ನು ನೋಡಿ ಬಾಗಿಲು ಎಂದು ತಿಳಿದುಕೊಂಡು ನುಗ್ಗಿ ಡಿಕ್ಕಿ ಹೊಡೆದನು. ಅದನ್ನು ನೋಡಿ ಎಲ್ಲರೂ ನಕ್ಕರು. ಅವನಿಗೆ ಅವಮಾನವಾಯಿತು. ಆ ಯಜ್ಞದಲ್ಲಿ ಎಷ್ಟೋ ಜನ ರಾಜರು ಧರ್ಮರಾಜನಿಗೆ ರಾಶಿರಾಶಿ ಮುತ್ತು ರತ್ನಗಳನ್ನು ಕಾಣಿಕೆಯಾಗಿ ಒಪ್ಪಿಸಿದರು. ಅವನೂ ಬೇಕಾದ ಹಾಗೆ ದಾನಧರ್ಮಗಳನ್ನು ಮಾಡಿದನು. ಇದನ್ನೆಲ್ಲಾ ನೋಡಿ ದುರ್ಯೋಧನನಿಗೆ ಹೊಟ್ಟೆಯ ಕಿಚ್ಚು ಇನ್ನೂ ಹೆಚ್ಚಾಯಿತು. 'ಏನೇನು ಮಾಡಿದರೂ ಈ ಪಾಂಡವರು ಸಾಯುವುದಿಲ್ಲವಲ್ಲ. ದಿನದಿನಕ್ಕೆ ಇನ್ನೂ ಮುಂದಕ್ಕೆ ಬರುತ್ತಿದ್ದಾರಲ್ಲ !' ಎಂದು ಚಿಂತೆಯಾಯಿತು.

ದುರ್ಯೋಧನನಿಗೆ ಶಕುನಿ ಎಂಬ ಮಾವನಿದ್ದನು. ಅವನು 'ಪಾಂಡವರನ್ನು ಉಪಾಯದಿಂದ ಗೆಲ್ಲಬೇಕು; ಅವರನ್ನು ಪಗಡೆಯ ಆಟಕ್ಕೆ ಕರೆ ; ಧರ್ಮರಾಯನಿಗೆ ಆಡುವುದಕ್ಕೆ ಬರುವುದಿಲ್ಲ; ನಾನು ನಿನ್ನ ಕಡೆ ಆಟ ಆಡಿ ಅವರನ್ನು ಸೋಲಿಸಿಬಿಡುತ್ತೇನೆ ; ಆಗ ಅವರ ರಾಜ್ಯವನ್ನು ಕಿತ್ತುಕೊಂಡು ಓಡಿಸಿಬಿಡೋಣ; ಅವರು ಕಾಡುಪಾಲಾಗುತ್ತಾರೆ; ಅವರ ರಾಜ್ಯ ನಿನಗೆ ಬರುತ್ತದೆ' ಎಂದು ಹೇಳಿಕೊಟ್ಟನು. ಧೃತರಾಷ್ಟ್ರನು 'ಜೂಜು ಕೆಟ್ಟದ್ದು; ಜೂಜಾಡಬಾರದು' ಎಂದು ಮಗನಿಗೆ ಬುದ್ಧಿ ಹೇಳಿದನು. ಆದರೆ ಅವನು ಕೇಳಲಿಲ್ಲ. ಧರ್ಮರಾಯನಿಗೆ ಹೇಳಿಕಳುಹಿಸಿದನು. ಅವನು

ತಮ್ಮಂದಿರನ್ನೂ ದ್ರೌಪದಿಯನ್ನೂ ಕರೆದುಕೊಂಡು ಬಂದನು. ಆಟದಲ್ಲಿ ಧರ್ಮರಾಯನು ಸೋತನು; ಅವನ ರಾಜ್ಯ ಹೋಯಿತು; ಐಶ್ವರ್ಯ ಹೋಯಿತು ; ಆಮೇಲೆ ತಮ್ಮಂದಿರನ್ನು ಸೋತನು; ಕೊನೆಗೆ ಹೆಂಡತಿಯನ್ನೂ ಸೋತನು. ದುರ್ಯೋಧನನ ತಮ್ಮ ದುಶ್ಶಾಸನನು ಅವಳನ್ನು 'ನಮ್ಮ ಮನೆಯಲ್ಲಿ ಚಾಕರಿ ಮಾಡು ಬಾ' ಎಂದು ಎಳೆದುಕೊಂಡು ಬಂದನು. ಭೀಮನಿಗೆ ಸಿಟ್ಟು ಬಂದು ದ್ರೌಪದಿಗೆ ಹೀಗೆ ಅವಮಾನ ಮಾಡಿದ ದುಶ್ಶಾಸನನ ಹೊಟ್ಟೆಯನ್ನು ಬಗೆದು ಅವನ ರಕ್ತವನ್ನು ಕುಡಿಯುತ್ತೇನೆ ಎಂದು ಶಪಥ ಮಾಡಿದನು. ದುರ್ಯೋಧನನು ತನ್ನ ತೊಡೆಯನ್ನು ತಟ್ಟಿ ದ್ರೌಪದಿಗೆ ತೋರಿಸಿದನು. ಅವಳಿಗೆ ತುಂಬ ನಾಚಿಕೆಯಾಯಿತು. ಆಗ ಭೀಮನು ಯುದ್ಧದಲ್ಲಿ ಗದೆಯಿಂದ ಅವನ ತೊಡೆಗಳನ್ನು ಮುರಿಯುತ್ತೇನೆ ಎಂದು ಶಪಥ ಮಾಡಿದನು. ಧೃತರಾಷ್ಟ್ರನು ಹೆದರಿ, ಧರ್ಮರಾಯನಿಗೆ ಅವನು ಸೋತದ್ದನ್ನೆಲ್ಲಾ ಹಿಂತಿರುಗಿ ಕೊಡಿಸಿದನು. ಆದರೆ ಅವನನ್ನು ದುರ್ಯೋಧನನು ಮತ್ತೆ ಆಟಕ್ಕೆ ಕರೆದನು; ಈಗಲೂ ಧರ್ಮರಾಯನು ಎಲ್ಲವನ್ನೂ ಸೋತದ್ದರಿಂದ ಹನ್ನೆರಡು ವರ್ಷ ಕಾಡಿಗೆ ಹೋಗಿ ಇರಬೇಕಾಯಿತು. ಅವನ ತಮ್ಮಂದಿರೂ ದ್ರೌಪದಿಯೂ ಅವನ ಜೊತೆಯಲ್ಲಿ ಹೋದರು.

****

ಪದಗಳ ಅರ್ಥ

ಯಜ್ಞ – ಯಾಗ ; ಚಾಕರಿ – ಸೇವೆ

ಪ್ರಶ್ನೆಗಳು

೧. ರಾಜಸೂಯಕ್ಕೆ ಇದ್ದ ಅಡ್ಡಿ ಯಾವುದು? ಅದು ಹೇಗೆ ನಿವಾರಣೆಯಾಯಿತು?

೨. ದುರ್ಯೋಧನನು ಹೊಟ್ಟೆಯ ಕಿಚ್ಚು ಪಡಲು ಕಾರಣವೇನು?

೩. ದುರ್ಯೋಧನನಿಗೆ ಶಕುನಿ ಹೇಳಿಕೊಟ್ಟ ಉಪಾಯವೇನು?

೪. ದ್ರೌಪದಿಗೆ ಆದ ಅವಮಾನ ಯಾವ ಬಗೆಯದು?

ಭಾಷಾಭ್ಯಾಸ

೧. ಈ ವಾಕ್ಯಗಳನ್ನು ಗಮನಿಸಿ :

ಅವನು ಮಾಡಿದನು	ಅವರು ಮಾಡಿದರು
ಅವಳು ಮಾಡಿದಳು	ಅವರು ಮಾಡಿದರು

ಅದು ಮಾಡಿತು ಅವು ಮಾಡಿದವು

ಈ ವಾಕ್ಯಗಳಲ್ಲಿ ಎರಡೆರಡು ಪದಗಳಿವೆ. ಮೊಲನೆಯ ಪದ ಯಾರು / ಯಾವುದು ಎಂಬುದನ್ನು ಹೇಳಿದರೆ ಎರಡನೆಯದು ಕೆಲಸವನ್ನು ಹೇಳುತ್ತದೆ. ಮೊದಲನೆಯದಕ್ಕೆ ಕರ್ತೃಪದವೆಂದೂ ಎರಡನೆಯದಕ್ಕೆ ಕ್ರಿಯಾಪದವೆಂದೂ ಹೆಸರು.

ಕರ್ತೃಪದದ ಲಿಂಗ ಮತ್ತು ವಚನಗಳನ್ನು ಕ್ರಿಯಾಪದವೂ ಸೂಚಿಸುತ್ತದೆ.

ಒಂದನ್ನು ಸೂಚಿಸುವುದು ಏಕವಚನವಾದರೆ ಒಂದಕ್ಕಿಂತ ಹೆಚ್ಚನ್ನು ಸೂಚಿಸುವುದು ಬಹುವಚನ.

ಏಕವಚನದಲ್ಲಿ ಪುಲ್ಲಿಂಗ–ಸ್ತ್ರೀಲಿಂಗಗಳು ಬೇರೆಬೇರೆಯಾಗಿವೆ. ಆದರೆ ಬಹುವಚನದಲ್ಲಿ ಇವೆರಡೂ ಒಂದೇ ಆಗಿರುವುದನ್ನು ಗಮನಿಸಿ.

೨. ಬೇರೆ ಬೇರೆ ಲಿಂಗ–ವಚನಗಳಿರುವ ಕೆಲವು ವಾಕ್ಯಗಳನ್ನು ಈ ಪಠ್ಯದಿಂದ ಆರಿಸಿ ಬರೆಯಿರಿ. ಅವುಗಳಲ್ಲಿ ಕರ್ತೃಪದ ಮತ್ತು ಕ್ರಿಯಾಪದಗಳನ್ನು ಗುರುತಿಸಿ. ವ್ಯತ್ಯಾಸಗಳನ್ನು ಗಮನಿಸಿ.

೨. ದಾನಧರ್ಮ, ಮನೆಮಠ, ಹಣ್ಣುಕಾಯಿ – ಈ ಪ್ರಯೋಗಗಳನ್ನು ಗಮನಿಸಿ. ಇವು ಜೋಡಿಪದಗಳು. ರೂಢಿಯಲ್ಲಿರುವ ಇಂತಹ ಕೆಲವು ಜೋಡಿಪದಗಳನ್ನು ಪಟ್ಟಿ ಮಾಡಿ.

೬. ರಾಷ್ಟ್ರಕವಿ ಕುವೆಂಪು

– ಪ್ರಭುಶಂಕರ

‘ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು
ಕಾಮನಬಿಲ್ಲನು ಕಾಣುವ ಕವಿಯೊಳು
ತೆಕ್ಕನೆ ಮನ ಮೈ ಮರೆಯುವುದು’

ಎಂದು ಕನ್ನಡ ಭಾಷೆ, ಸಾಹಿತ್ಯದ ಅಭಿಮಾನವನ್ನು ಮೆರೆದು ಕನ್ನಡಿಗರಲ್ಲಿ ಕನ್ನಡದ ಕೆಚ್ಚು ಹೆಚ್ಚಿಸಿದವರು ರಸಋಷಿ ಕವಿ ಕುವೆಂಪು ಅವರು.

ಕನ್ನಡ ಸಾಹಿತ್ಯ ಚರಿತ್ರೆಯು ಕುವೆಂಪು ಅವರ ಸಾಹಿತ್ಯಕ ಬೆಳವಣಿಗೆ, ಸಾಧನೆ, ಸಿದ್ಧಿಗಳಿಂದ ಅವರು ಇತರ ಕವಿಗಳ ಮೇಲೆ ಬೀರಿದ ಪ್ರಭಾವದಿಂದ ಕಂಗೊಳಿಸುತ್ತಿದೆ. ಕಾವ್ಯ, ನಾಟಕ, ಸಣ್ಣಕತೆ, ಕಾದಂಬರಿ, ವಚನ, ಕವನ, ಮಹಾಕಾವ್ಯ, ಸಾಹಿತ್ಯ ವಿಮರ್ಶೆ ಈ ಒಂದೊಂದು ಪ್ರಕಾರದಲ್ಲಿಯೂ ಕುವೆಂಪು ಅವರು ಗಣನೀಯವಾದ ಕೊಡುಗೆಯನ್ನು ನೀಡಿದ್ದಾರೆ. ಕನ್ನಡಕ್ಕೆ ರಾಷ್ಟ್ರಮಟ್ಟದ ಖ್ಯಾತಿಯನ್ನು ತಂದುಕೊಟ್ಟ ಮೊದಲಿಗರಲ್ಲಿ ಅವರೂ ಒಬ್ಬರು.

ಕುವೆಂಪು ಅವರ ಪೂರ್ಣ ಹೆಸರು ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಎಂದು. ಶಿವಮೊಗ್ಗ ಜಿಲ್ಲೆಯ ಕುಪ್ಪಳಿ ಕವಿಯ ಊರು. ೧೯೦೪ ನೇ ಇಸವಿ ಡಿಸೆಂಬರ್ ೨೯ರಂದು ತಾಯಿಯ ತವರಾದ ಹಿರೇಕೊಡಿಗೆಯಲ್ಲಿ ಜನಿಸಿದರು. ಬಾಲಕನಿದ್ದಾಗಲೇ ಕುವೆಂಪು ಅವರಿಗೆ ಸಾಹಿತ್ಯ ಸಂಸ್ಕಾರವು ದೊರೆಯಿತು. ಮನೆಯಲ್ಲಿ ತಂದೆ ಹಾಗೂ ಚಿಕ್ಕಪ್ಪ ಇಬ್ಬರೂ ಸಾಹಿತ್ಯಾಸಕ್ತರು. ಜೈಮಿನಿ ಭಾರತ, ತೊರವೆ ರಾಮಾಯಣಗಳ ವಾಚನ ನಡೆಯುತ್ತಿತ್ತು. ಬಾಲಕ ಅದನ್ನು ಆಸಕ್ತಿಯಿಂದ ಕೇಳುತ್ತಿದ್ದನು. ನಿಸರ್ಗದ ಮಡಿಲಿನಲ್ಲಿ ಹುಟ್ಟಿ ಬೆಳೆದ ಬಾಲಕನಿಗೆ ಪ್ರಕೃತಿಯೂ ಕಾವ್ಯ ರಚಿಸುವಲ್ಲಿ ಪ್ರೇರಣೆ ನೀಡಿತು.

ಕುವೆಂಪು ಅವರು ಪ್ರಾಥಮಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ, ಮಾಧ್ಯಮಿಕ ವಿದ್ಯಾಭ್ಯಾಸವನ್ನು ಮೈಸೂರಿನ ಹಾರ್ಡ್‌ವಿಕ್ ಹೈಸ್ಕೂಲಿನಲ್ಲಿ ಮುಗಿಸಿದರು. ಮಂಗಳೂರು ಆನಂದರಾಯರಿಂದ ಇವರಿಗೆ ಇಂಗ್ಲಿಷ್ ಸಾಹಿತ್ಯಾಧ್ಯಯನದಲ್ಲಿ ಒಲವು ಮೂಡಿತು. ಎಳವೆಯಲ್ಲಿಯೇ ಷೆಲ್ಲಿ, ವರ್ಡ್ಸ್‌ವರ್ಥ್, ಕೀಟ್ಸ್ ಮುಂತಾದವರ ಕವನಗಳು, ಟಾಲ್‌ಸ್ಟಾಯ್‌ನ ಕಾದಂಬರಿಗಳು ಹಾಗೂ ಪೌರ್ವಾತ್ಯ, ಪಾಶ್ಚಾತ್ಯ ತತ್ವಜ್ಞಾನಿಗಳ ಬರಹಗಳು ಹೆಚ್ಚು ಪ್ರಭಾವ ಬೀರಿದವು. ಶ್ರೀರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರು ಕುವೆಂಪು ಅವರ ಆದರ್ಶ ವ್ಯಕ್ತಿಗಳಾದರು.

ಕುವೆಂಪು ಅವರು ಹೈಸ್ಕೂಲಿನಲ್ಲಿದ್ದಾಗ ‘ಬಿಗಿನರ್ಸ್ ಮ್ಯೂಜ್’ ಎಂಬ ಇಂಗ್ಲಿಷ್ ಕವನಸಂಕಲನ ಪ್ರಕಟಿಸಿದರು. ಐರಿಷ್ ಕವಿ ಜೇಮ್ಸ್ ಕಜಿನ್ಸ್ ಅವರ ಸಲಹೆಯಂತೆ ಮಾತೃಭಾಷೆ ಕನ್ನಡದಲ್ಲಿ ಸಾಹಿತ್ಯ ರಚನೆಗೆ ತೊಡಗಿದರು. ತಮ್ಮದೇ ‘ಏಪ್ರಿಲ್’ ಎಂಬ ಆಂಗ್ಲ ಕವನವನ್ನು ‘ಚೈತ್ರ–ವಿಶಾಖ’ ಎಂದು ಅನುವಾದಿಸಿ ಪ್ರಕಟಿಸಿದರು. ಇದರಿಂದ ಕವಿಯ ಜೀವವಾಹಿನಿ ಇಂಗ್ಲಿಷಿನಿಂದ ಕನ್ನಡದ ಕಡೆಗೆ ತಿರುಗಿ ಹರಿಯತೊಡಗಿತು.

ಕೆ.ವಿ. ಪುಟ್ಟಪ್ಪನವರು ಎಂಟ್ರನ್ಸ್ ಪರೀಕ್ಷೆಯಲ್ಲಿ ರಸಾಯನಶಾಸ್ತ್ರ, ಜೀವವಿಜ್ಞಾನ, ಬಿ.ಎ. ತರಗತಿಯಲ್ಲಿ ಮನಶ್ಶಾಸ್ತ್ರ ಮತ್ತು ತತ್ವಶಾಸ್ತ್ರಗಳನ್ನು ಅಧ್ಯಯನ ಮಾಡಿದರು. ಮೈಸೂರು ವಿಶ್ವವಿದ್ಯಾಲಯದಿಂದ ತತ್ವಶಾಸ್ತ್ರ ಹಾಗೂ ಕನ್ನಡ ವಿಷಯಗಳಲ್ಲಿ ಎಂ.ಎ. ಪದವಿ ಪಡೆದರು. ತಮ್ಮ ವಿದ್ಯಾಭ್ಯಾಸ ಮುಗಿಸಿ ಅಧ್ಯಾಪಕ ವೃತ್ತಿಯಲ್ಲಿ ತೊಡಗುವತನಕ ೧೨ ವರ್ಷಕಾಲ ಅವರು ಮೈಸೂರಿನ ರಾಮಕೃಷ್ಣಾಶ್ರಮದಲ್ಲಿದ್ದರು. ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ ಹಾಗೂ ಬಿ.ಎಂ. ಶ್ರೀಕಂಠಯ್ಯನವರು ಪುಟ್ಟಪ್ಪನವರ ಮೆಚ್ಚಿನ ಗುರುಗಳಾಗಿದ್ದರು. ಅಧ್ಯಾತ್ಮ–ಕಾವ್ಯ ಇವು ಪುಟ್ಟಪ್ಪನವರ ಎರಡು ಕಣ್ಣುಗಳಾಗಿದ್ದವು. ವಿದ್ಯಾರ್ಥಿಯಾಗಿದ್ದಾಗಲೇ ಪುಟ್ಟಪ್ಪನವರು ಕವನ, ನಾಟಕಗಳನ್ನು ರಚಿಸಿ ತಮ್ಮ ಗುರುಗಳ ಹಾಗೂ ಸಾಹಿತ್ಯಾಸಕ್ತರ ಮೆಚ್ಚುಗೆ ಪಡೆದರು. ಜಲಗಾರ, ಯಮನ ಸೋಲು, ಅಮಲನ ಕಥೆ, ಬೊಮ್ಮನಹಳ್ಳಿಯ ಕಿಂದರಿ ಜೋಗಿ, ಸಮುದ್ರ ಲಂಘನಗಳಂಥ ಕೃತಿಗಳಿಂದ ಕಾವ್ಯಪ್ರಿಯರ ಹೃದಯದಲ್ಲಿ ಸ್ಥಿರವಾದ ಸ್ಥಾನ ಗಳಿಸಿದ್ದರು.

೧೯೨೯ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾದರು. ೧೯೩೦ರಲ್ಲಿ ಅವರ ಮೊಟ್ಟ ಮೊದಲ ಕವನ ಸಂಕಲನ 'ಕೊಳಲು' ಪ್ರಕಟವಾಯಿತು. ಅವರು ರಚಿಸಿದ 'ಚಿತ್ರಾಂಗದಾ' ಕನ್ನಡದ ಮೊದಲ ಖಂಡಕಾವ್ಯ. ೧೯೩೭ರಲ್ಲಿ ದೇವಂಗಿಯ ಹೇಮಾವತಿಯವರನ್ನು ಅವರು ಮದುವೆಯಾದರು. ಮಲೆನಾಡಿನ ಪ್ರಕೃತಿ ಸೌಂದರ್ಯದಂತೆಯೇ ಜನಜೀವನವನ್ನು ತೆರೆದ ಕಣ್ಣುಗಳಿಂದ, ತೆರೆದ ಹೃದಯದಿಂದ ನೋಡಿದ ಕವಿ ಬೃಹತ್ತಾದ 'ಕಾನೂರು ಹೆಗ್ಗಡತಿ' ಎಂಬ ಕಾದಂಬರಿಯನ್ನು ಬರೆದು ೧೯೩೮ರಲ್ಲಿ ಪ್ರಕಟಿಸಿದರು. ಅದೇ ರೀತಿ ಇನ್ನೊಂದು ಕಾದಂಬರಿ 'ಮಲೆಗಳಲ್ಲಿ ಮದುಮಗಳು' ಮಹತ್ವದ್ದಾಗಿದೆ. ನಿಸರ್ಗ ವರ್ಣನೆಗಾಗಿ ಇವರನ್ನು ಕನ್ನಡದ ವರ್ಡ್ಸ್‌ವರ್ಥ್ ಎಂತಲೂ ಕರೆಯುವರು.

೧೯೪೬ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರೂ ಹಾಗೂ ಮುಖ್ಯಸ್ಥರೂ ಆದರು. ೧೯೪೯ರಲ್ಲಿ ಅವರ 'ರಾಮಾಯಣ ದರ್ಶನಂ' ಎಂಬ ಮಹಾಛಂದಸ್ಸಿನ ಮೇರುಕೃತಿ ಪ್ರಕಟವಾಯಿತು. ಯುಗಧರ್ಮವಾದ ಅಹಿಂಸೆ, ವಿಜ್ಞಾನವು ತೆರೆದ ಲೋಕಗಳು ಈ ಕೃತಿಯಲ್ಲಿ ಸೂಕ್ತ ರೀತಿಯಲ್ಲಿ ಮೈದೋರಿದೆ. ರೂಪಕ, ಉಪಮೆಗಳು ಕಾವ್ಯಕ್ಕೆ ಹೊಸ ಮೆರುಗು ನೀಡಿವೆ. 'ರಾಮಾಯಣ ದರ್ಶನಂ' ಒಂದು ಮಹೋನ್ನತ ಸಿದ್ಧಿ. ಕವಿಯನ್ನು ಮಾತ್ರವಲ್ಲದೆ ಕನ್ನಡವನ್ನೂ ವಿಶ್ವಸಾಹಿತ್ಯದ ಉನ್ನತ ವೇದಿಕೆಯಲ್ಲಿ ಸ್ಥಾಪಿಸಿದ ಕೃತಿ.

ಕುವೆಂಪು ಅವರ ಸಾಹಿತ್ಯ ರಚನೆ ಅಪಾರವಾದುದು. ಶೇಕ್ಸ್‌ಪಿಯರ್‌ನ ಟೆಂಪೆಸ್ಟ್‌ನ್ನು 'ಬಿರುಗಾಳಿ' ಎಂದು ಹ್ಯಾಮ್ಲೆಟ್‌ನ್ನು 'ರಕ್ತಾಕ್ಷಿ'ಯೆಂದು ರೂಪಾಂತರ ಮಾಡಿದ್ದಾರೆ. ವಾಲ್ಮೀಕಿಯ ಭಾಗ್ಯ, ನನ್ನ ಗೋಪಾಲ, ಶ್ಮಶಾನ ಕುರುಕ್ಷೇತ್ರಂ ಎಂಬ ಸ್ವತಂತ್ರ ನಾಟಕಗಳನ್ನು ಬರೆದಿದ್ದಾರೆ. ಸಾವಿರಾರು ಕವನಗಳನ್ನು ರಚಿಸಿದ್ದಾರೆ. ನವಿಲು, ಕೊಳಲು, ಪಾಂಚಜನ್ಯ, ಕಲಾಸುಂದರಿ, ಅಗ್ನಿಹಂಸ, ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ, ಪಕ್ಷಿಕಾಶಿ ಇವು ಕವಿಯು ಬರೆದ ಕವನ ಸಂಕಲನಗಳು, ಕಥೆ, ಕಾದಂಬರಿಗಳು ಸೃಜನಶೀಲ ಸಾಹಿತ್ಯಕ್ಕೆ, ಕಾವ್ಯಮೀಮಾಂಸೆಗೆ ಅಪೂರ್ವ ಕೊಡುಗೆಗಳಾಗಿವೆ.

ಕುವೆಂಪು ಅವರಿಗೆ ಕನ್ನಡ ಜನತೆ, ಸರಕಾರ, ವಿಶ್ವವಿದ್ಯಾಲಯ, ಕೇಂದ್ರ ಸರಕಾರ, ರಾಜ್ಯ ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ, ಎಲ್ಲ ಬಗೆಯ ಅತ್ಯುನ್ನತ ಗೌರವಗಳನ್ನು

ನೀಡಿವೆ. ಅವರು ೧೯೫೫ರಲ್ಲಿ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದರು. ಅದೇ ವರ್ಷ ಪ್ರಪ್ರಥಮ ಬಾರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ಅವರ 'ರಾಮಾಯಣ ದರ್ಶನಂ' ಕಾವ್ಯಕ್ಕೆ ದೊರಕಿತು. ಮೈಸೂರು, ಕರ್ನಾಟಕ, ಬೆಂಗಳೂರು, ಗುಲ್ಬರ್ಗ ವಿಶ್ವವಿದ್ಯಾಲಯಗಳು ಗೌ.ಡಿಲಿಟ್ ಪದವಿ ನೀಡಿದವು. ೧೯೫೬ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದರು. ೧೯೫೭ರಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ೧೯೫೮ರಲ್ಲಿ ಭಾರತ ಸರಕಾರವು 'ಪದ್ಮಭೂಷಣ ಪ್ರಶಸ್ತಿ' ನೀಡಿತು. ೧೯೬೪ರಲ್ಲಿ ಕರ್ನಾಟಕ ಸರಕಾರ 'ರಾಷ್ಟ್ರಕವಿ' ಬಿರುದು ನೀಡಿತು. ಕುವೆಂಪುರವರ ಅಭಿಮಾನಿಗಳು 'ಗಂಗೋತ್ರಿ' ಎಂಬ ಬೃಹತ್ ಅಭಿನಂದನಾ ಗ್ರಂಥ ಸಲ್ಲಿಸಿದರು. ೧೯೬೮ರಲ್ಲಿ 'ರಾಮಾಯಣ ದರ್ಶನಂ' ಈ ಸಾಹಿತ್ಯ ಕೃತಿಗೆ ಅತ್ಯುಚ್ಚ 'ಜ್ಞಾನಪೀಠ ಪ್ರಶಸ್ತಿ' ದೊರಕಿತು. ೧೯೮೮ರಲ್ಲಿ 'ಪಂಪಪ್ರಶಸ್ತಿ ಪುರಸ್ಕಾರ'ವೂ ಈ ಕೃತಿಗೆ ದೊರೆಯಿತು. ಇಂಥ ಮಹಾಕವಿ, ರಸಋಷಿ ೧೯೯೪ರಲ್ಲಿ ವಿಧಿವಶವಾದರು.

ಕುವೆಂಪು ಅವರು ಮೌಢ್ಯಕ್ಕೆ ಪರಮಶತ್ರು. ಜಾತಿ ಪದ್ಧತಿ ನಿರ್ಮೂಲನಗೊಳ್ಳದೆ ಈ ದೇಶದ, ಜನರ ಉದ್ಧಾರ ಅಸಾಧ್ಯ ಎಂದು ಒತ್ತಿ ಒತ್ತಿ ಹೇಳಿದ್ದಾರೆ. 'ಯಾವ ವ್ಯಕ್ತಿಯೂ ಯಾವುದೇ ಜಾತಿಯ ಶಿಶುವಲ್ಲ, ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲೂ ಅವನದೇ ಆದ ಧರ್ಮ ಇದೆ. ಈ ಜಗತ್ತಿನಲ್ಲಿ ಎಷ್ಟು ಜನ ವ್ಯಕ್ತಿಗಳಿದ್ದಾರೆಯೋ ಅಷ್ಟು ಧರ್ಮಗಳಿರಲಿ' ಎಂಬ ವಿವೇಕಾನಂದರ ವಾಣಿ ಮಾನವತೆಯ ಜೀವನಧರ್ಮವಾಗಲಿ ಎಂಬ ಹಾರೈಕೆ ಅವರದಾಗಿದೆ.

ಕುವೆಂಪು ಅವರಿಗೆ ಅಪಾರ ಕನ್ನಡಾಭಿಮಾನವಿತ್ತು. ಅದನ್ನು ಅವರು ನಾಡಿನ ಉದ್ದಗಲಕ್ಕೂ ಹಬ್ಬಿಸಿದರು. 'ವಿಶ್ವಮಾನವ ಮಂತ್ರ' ಅವರದಾಗಿತ್ತು. 'ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ, ಕನ್ನಡಕ್ಕಾಗಿ ಕೊರಳೆತ್ತು ನಿನ್ನ ದನಿ ಪಾಂಚಜನ್ಯವಾಗುತ್ತದೆ' ಎಂಬುದು ಅವರ ಸಂದೇಶವಾಗಿದೆ.

****

ಪದಗಳ ಅರ್ಥ :

ತೆಕ್ಕನೆ – ತಕ್ಷಣ; ಗಣನೀಯ – ಅತಿ ಹೆಚ್ಚಿನ; ಅತ್ಯುಚ್ಚ – ಅತಿ ದೊಡ್ಡ; ಮೌಢ್ಯ – ಮೂಢನಂಬಿಕೆ.

ಪ್ರಶ್ನೆಗಳು :

೧. ಕನ್ನಡ ಸಾಹಿತ್ಯಕ್ಕೆ ಕುವೆಂಪು ಅವರ ಕೊಡುಗೆ ಯಾವ ಬಗೆಯದು?

೨. ಕುವೆಂಪು ಅವರ ಬಾಲ್ಯ ಹೇಗೆ ರೂಪುಗೊಂಡಿತು?

೩. ಕುವೆಂಪು ಅವರ ಕೃತಿಗಳನ್ನು ಪರಿಚಯಿಸಿ.

೪. ಕುವೆಂಪು ಅವರಿಗೆ ದೊರೆತ ಗೌರವಗಳಾವುವು?

೫. ಕುವೆಂಪು ಅವರ ಸಂದೇಶವೇನು?

ಭಾಷಾಭ್ಯಾಸ:

೧. ಈ ಪ್ರಯೋಗಗಳನ್ನು ಗಮನಿಸಿ:

ಪ್ರಕೃತಿಯು – ಪ್ರಕೃತಿಯೂ

ಪ್ರಾಧ್ಯಾಪಕರು – ಪ್ರಾಧ್ಯಾಪಕರೂ

ಮುಖ್ಯಸ್ಥರು – ಮುಖ್ಯಸ್ಥರೂ

ಕನ್ನಡವನ್ನು – ಕನ್ನಡವನ್ನೂ

ಮೊದಲನೆಯ ಗುಂಪಿನ ಪದಗಳು ಹ್ರಸ್ವದಿಂದ ಕೊನೆಗೊಂಡಿದ್ದರೆ, ಎರಡನೆಯ ಗುಂಪಿನ ಪದಗಳು ದೀರ್ಘದಿಂದ ಕೊನೆಗೊಂಡಿವೆ. ಇದರಿಂದ ಉಂಟಾದ ಅರ್ಥವ್ಯತ್ಯಾಸವೇನು? ಇದರಿಂದ ವಾಕ್ಯರಚನೆ ಹೇಗೆ ಬದಲಾಗುತ್ತದೆ ಎಂಬುದನ್ನು ಗುರುತಿಸಿ.

೨. ಒಂದನ್ನು ಸೂಚಿಸುವುದು ಏಕವಚನ ಮತ್ತು ಒಂದಕ್ಕಿಂತ ಹೆಚ್ಚಿನದನ್ನು ಸೂಚಿಸುವುದು ಬಹುವಚನ ಎಂಬುದನ್ನು ಹಿಂದಿನ ಪಾಠದ ಅಭ್ಯಾಸದಲ್ಲಿ ಗಮನಿಸಿದ್ದೇವೆ. ಆದರೆ ಬಹುವಚನ ಇನ್ನೂ ಒಂದು ರೀತಿಯಲ್ಲಿ ಬಳಕೆಯಾಗುವುದನ್ನು ಈ ಪಾಠದಲ್ಲಿ ಗಮನಿಸಬಹುದು.

ಇಲ್ಲಿ ಕುವೆಂಪು ಅವರ ಬಗೆಗೆ ಹೇಳುವಾಗ ಬಹುವಚನವನ್ನು ಬಳಸಲಾಗಿದೆ. ಎಂದರೆ ಸಂಖ್ಯೆ ಒಂದೇ ಆಗಿದ್ದರೂ, ಗೌರವವನ್ನು ಸೂಚಿಸಲು ಬಹುವಚನವನ್ನು ಬಳಸಲಾಗುತ್ತದೆ.

ಉದಾ: ಗುರುಗಳು ಬಂದರು.

೭. ಕನಸಿನಲ್ಲಿ

– ವಿ.ಜಿ. ಭಟ್ಟ

ಕಾಡಿಗೆ ಹೋದೆನು ಕನಸಿನಲಿ
ಒಯ್ದಿತು ನನ್ನನು ಪಟ್ಟೆ ಹುಲಿ
ಸೊಂಡಿಲಿನಲಿ ತಣ್ಣೀರನು ತಂದು
ಆನೆಯು ಜಳಕವ ಮಾಡಿಸಿತು
ಮರಗಳು ನೀಡಿದ ಹಣ್ಣುಗಳನ್ನು
ಸಿಂಹವು ಊಡಿಸಿತು,

ಹಂಸಗಳೆಲ್ಲಾ ಹಾಸಿಗೆ ಮಾಡಿ
ಹಕ್ಕಿಗಳೆಲ್ಲಾ ಹಾಡನು ಹಾಡಿ
ಮೊಲಗಳು ಕತೆಯನು ಹೇಳಿದವು
ನಿಮ್ಮೂರಿನ ಮಳೆಬೆಳೆ ಹೇಗೆಂದು
ನರಿಗಳು ಕೇಳಿದವು

ಗಾಳಿಯ ಹಾಕಿತು ನವಿಲಿನ ಹಿಂಡು
ಇದನೆಲ್ಲಾ ನನ್ನಪ್ಪನು ಕಂಡು
"ನನ್ನನು ಕೇಳದೆ ಯಾತಕೆ ಬಂದೆ?"
ಎಂದಬ್ಬರಿಸಲು ಹೆದರಿಕೆಯಿಂದ
ಪ್ರಾಣಿಗಳೆಲ್ಲಾ ಓಡಿದವು.
ದೂರದಿ ಗವಿಯಲಿ ಸುಮ್ಮನೆ ನಿಂತು
ಅಪ್ಪನ ನೋಡಿದವು
ಬೆನ್ನಿಗೆ ಛಡಿಗಳು ಬೀಳಲು 'ಅಯ್ಯೋ
ಅಯ್ಯೋ' ಎಂದತ್ತೆ.
ಎಚ್ಚರವಾಯಿತು. ಅಪ್ಪನು ಇಲ್ಲ
ಕಾಡಿಗೆ ಹೋಗಲು ಆಗಲೆ ಇಲ್ಲ
ಎಂದೆಂದೂ ಮತ್ತೆ.

****

ಪದಗಳ ಅರ್ಥ:

ಜಳಕ – ಸ್ನಾನ ; ಊಡಿಸು – ತಿನ್ನಿಸು

ಪ್ರಶ್ನೆಗಳು :

೧. ಹುಡುಗನನ್ನು ಪ್ರಾಣಿಪಕ್ಷಿಗಳು ಹೇಗೆ ಉಪಚರಿಸಿದವು?

೨. ಅಪ್ಪನಿಗೆ ಸಿಟ್ಟು ಬರಲು ಕಾರಣವೇನು? ಅದರ ಪರಿಣಾಮವೇನಾಯಿತು?

ಭಾಷಾಭ್ಯಾಸ :

೧. ಗದ್ಯದಲ್ಲಿ ಬಳಕೆಯಾಗುವ ಭಾಷಾರೂಪಗಳಿಗೂ ಪದ್ಯದಲ್ಲಿ ಬಳಕೆಯಾಗುವ ಭಾಷಾರೂಪಗಳಿಗೂ ಕೆಲವೊಮ್ಮೆ ವ್ಯತ್ಯಾಸಗಳಿರುತ್ತವೆ.

ಉದಾ: ಕನಸಿನಲ್ಲಿ – ಕನಸಿನಲಿ; ನನ್ನನ್ನು – ನನ್ನನು; ತಣ್ಣೀರನ್ನು – ತಣ್ಣೀರನು. ಪದ್ಯದ ಲಯದ ದೃಷ್ಟಿಯಿಂದ ಈ ಬದಲಾವಣೆಗಳಾಗುವುದುಂಟು. ಇಂತಹ ಕೆಲವು ಪದಗಳ ಪಟ್ಟಿ ಮಾಡಿ.

೨. ಇಲ್ಲಿನ ಏಕವಚನ ಕ್ರಿಯಾಪದಗಳನ್ನು ಬಹುವಚನಕ್ಕೂ ಬಹುವಚನದ ಕ್ರಿಯಾಪದಗಳನ್ನು ಏಕವಚನಕ್ಕೂ ಬದಲಿಸಿ ಬರೆಯಿರಿ. ವ್ಯತ್ಯಾಸವನ್ನು ಗಮನಿಸಿ.

೩. ಈ ಕವಿತೆ ಉತ್ತಮ ಪುರುಷ ನಿರೂಪಣೆಯಲ್ಲಿದೆ. ಇದನ್ನು ಪ್ರಥಮ ಪುರುಷ ನಿರೂಪಣೆಗೆ ಬದಲಿಸಿ ಬರೆಯಿರಿ.

೮. ಸ್ವಾಮಿಯ ಅಜ್ಜಿ

– ಇಂಗ್ಲಿಷ್ ಮೂಲ : ಆರ್.ಕೆ. ನಾರಾಯಣ್

ಕನ್ನಡಕ್ಕೆ : ಎಚ್.ವೈ. ಶಾರದಾಪ್ರಸಾದ್

ಮುಂದಿನ ಹಾಲ್‌ಗೂ ಊಟದ ಮನೆಗೂ ನಡುವೆ ಒಂದು ಕೋಣೆ, ಕಿಟಕಿಗಳಿಲ್ಲ. ಕತ್ತಲೋ ಕತ್ತಲೆ. ಐದು ಜಮಖಾನಗಳನ್ನು ಒಂದರ ಮೇಲೆಂದು ಹಾಸಿ ತಯಾರಿಸಿದ ಹಾಸಿಗೆ, ಮೂರು ದುಪ್ಪಟಿ, ಐದು ದಿಂಬು, ಚಿತ್ರದ ಚಚ್ಚೌಕದ ಮಡಿಪೆಟ್ಟಿಗೆ, ಚಿಕ್ಕದೊಂದು ಮರದ ಪೆಟ್ಟಿಗೆ, ಅದರಲ್ಲಿ ಕೆಲವು ತಾಮ್ರದ ಪುಡಿಗಾಸು, ಕೊಂಚ ಲವಂಗ, ಯಾಲಕ್ಕಿ, ಅಡಕೆ, ವಿಭೂತಿ – ಇವಿಷ್ಟೇ ಅಜ್ಜಿಯ ಆಸ್ತಿ. ಆಕೆಗೂ ಆಕೆಯ ಐಶ್ವರ್ಯ ಸರ್ವಸ್ವಕ್ಕೂ ಈ ಕೋಣೆಯಲ್ಲೇ ಆವಾಸ.

ರಾತ್ರಿ ಊಟ ಆದ ಮೇಲೆ ಅಜ್ಜಿಯ ತೊಡೆಯ ಮೇಲೆ ತಲೆ ಇಟ್ಟುಕೊಂಡು ಸ್ವಾಮಿ ಬೆಚ್ಚಗೆ ಮಲಗಿದ್ದಾನೆ. ಯಾಲಕ್ಕಿ ಲವಂಗದ ಹಿತವಾದ ವಾಸನೆ ಕೊಠಡಿಯನ್ನೆಲ್ಲ ಆವರಿಸಿದೆ.

'ಅಜ್ಜಿ, ಅಜ್ಜಿ ನಿಂಗೊತ್ತಿಲ್ಲಾ ಅಜ್ಜಿ, ರಾಜಂ ಎಷ್ಟು ದೊಡ್ಡ ಮನುಷ್ಯ ಅನ್ನೋದು' ರಾಜಂಗೂ ಮಣಿಗೂ ಮೊದಲಿದ್ದ ಹಗೆತನ, ಆಮೇಲಿನ ಗೆಳೆತನ ಎಲ್ಲವನ್ನೂ ಸ್ವಾಮಿ ಉತ್ಸಾಹದಿಂದ ಬಣ್ಣಿಸುತ್ತ ಇದ್ದ.

'ನೋಡಜ್ಜಿ ಅವನ ಹತ್ತಿರ ನಿಜವಾದ ಪೋಲೀಸ್ ಡ್ರೆಸ್ ಇದೆ, ಗೊತ್ತಾ?, ಎಂದ ಸ್ವಾಮಿ.

'ಹಾಗೇನು! ಅವನಿಗೇಕೆ ಪೋಲೀಸ್ ಬಟ್ಟೇ?'

'ಅವರಪ್ಪ ಪೋಲೀಸ್ ಸೂಪರಿಂಟೆಂಡೆಂಟ್, ಅಜ್ಜೀ, ಊರಿನಲ್ಲಿ ಎಷ್ಟು ಪೋಲೀಸ್‌ನವರು ಇದ್ದಾರೋ ಅವರೆಲ್ಲರಿಗೂ ಅವರೇ ಆಫೀಸರು.' ಅಜ್ಜಿ ತಲೆದೂಗಿದಳು. ಪೋಲೀಸ್ ಕಚೇರಿ ಬಲು ಭಾರಿಯದಾಗಿರಬೇಕು ಎಂದಳು. ತನ್ನ ಗಂಡ, ಸ್ವಾಮಿಯ ತಾತ ಸಬ್‌ಮ್ಯಾಜಿಸ್ಟ್ರೇಟಾಗಿ ಎಷ್ಟು ದರ್ಪದಿಂದ ಬಾಳಿದರು. ಜಿಲ್ಲೆಯ ಪೋಲೀಸಿನವರೆಲ್ಲ ಅವರನ್ನು ಕಂಡರೆ ಹೇಗೆ ಗಡಗಡನೆ ನಡುಗುತ್ತಿದ್ದರು. ಭಾರಿ ಭಾರಿ ದರೋಡೆಕೋರರೆಲ್ಲ ಅವರ ಹೆಸರು ಕೇಳಿದರೆ ಹೇಗೆ ಕಾಲಿಗೆ ಬುದ್ಧಿ ಹೇಳುತ್ತಿದ್ದರು – ಎಂಬುದನ್ನೆಲ್ಲ ಹೇಳಲು ಮೊದಲು ಮಾಡಿದಳು. ಈ ಕತೆ ಎಂದಿಗೆ ಮುಗಿದೀತೋ ಎಂದು ಸ್ವಾಮಿ ತವಕದಿಂದ ಕಾದು ನೋಡಿದ. ಅಜ್ಜಿಯ ಮಾತಿಗೆ ಕೊನೆಮೊದಲೇ ಇರಲಿಲ್ಲ. ಈಗಾದ್ದು ಆಗಾದ್ದು ಎಲ್ಲ ಕಲಸುಮೇಲೋಗರ ಮಾಡಿ ಜಡಿಮಳೆ ಹೊಯ್ದಂತೆ ಮಾತಾಡುತ್ತಲೆ ಇದ್ದಳು.

"ಇರೋ ನಂಬರೆಲ್ಲ ಅವನಿಗೇ ಬರುತ್ತಾ ಮಗೂ"

"ಅಯ್ಯೋ, ಈ ಅಜ್ಜೀಗೆ ಏನು ಗೊತ್ತೇ ಇಲ್ಲ. ಅವನಿಗೆ ನೂರಕ್ಕೆ ತೊಂಬತ್ತು ನಂಬರು, ಅಜ್ಜೀ".

"ಹಾಗಿರಬೇಕು. ಮಗೂ, ನೀನೂ ಅವನ ಥರಾನೇ ನಂಬರು ತೊಗೋಬೇಕು. ನೋಡು...... ನೋಡು ಸ್ವಾಮಿ, ನಿಮ್ಮ ತಾತ ಇದ್ದಾರಲ್ಲ. ಅವರು ಪರೀಕ್ಷೆಗೆ ಹೋದಾ ಅಂದ್ರೆ. ಮೇಷ್ಟರುಗಳಿಗೆಲ್ಲ ಗಾಬರಿಯಾಗುತ್ತಿತ್ತಂತೆ. ಒಂದು ಪ್ರಶ್ನೆ ಹಾಕಿದರೂಂತ ಇಟ್ಟುಕೊ. ಮಿಕ್ಕವರು ಉತ್ತರ ಹೇಳೋದ್ರ ಹತ್ತರಷ್ಟು ಬೇಗ ಅವರು ಉತ್ತರ ಹೇಳಿಬಿಡ್ತಾ ಇದ್ದರಂತೆ. ಅವರ ಉತ್ತರ ಹೇಗಿರ್ತಾ ಇತ್ತು ಅಂದ್ರೆ ಮೇಷ್ಟರುಗಳು ಒಂದೊಂದು ಸಲ ಇನ್ನೂರು ನಂಬರು ಕೊಡ್ತಾ ಇದ್ದರಂತೆ. ಅವರು ಎಫ್.ಎ. ಪ್ಯಾಸು ಮಾಡಿದಾಗ ಇಷ್ಟಗಲದ ಮೆಡಲು ಬಂದಿತ್ತು. ಎಷ್ಟೋ ವರ್ಷಗಳು ನನ್ನ ಬಂಗಾರದ ಸರಕ್ಕೆ ಅದನ್ನು ಪದಕದ ಹಾಗೆ ಹಾಕ್ಕೊಂಡಿದ್ದೆ. ಅದನ್ನು ಯಾವಾಗ ತೆಗೆದೆ ನಾನು? ಹಾ ನೋಡಿದ್ಯಾ ನಿಮ್ಮ ಸೋದರತ್ತೆ ಹುಟ್ಟಿದಾಗ.... ಅಲ್ಲ ನಿಮ್ಮ ಸೋದರತ್ತೆ ಹುಟ್ಟಿದಾಗಲ್ಲ.... ನಿಮ್ಮ ತಂದೆ ಹುಟ್ಟಿದಾಗ ಇರಬೇಕು..... ಈಗ ನೆನಪಿಗೆ ಬಂತು. ಪುರುಡುನೀರಾದ ದಿನ... ಅಲ್ಲ, ಅಲ್ಲ. ನಾನು ಮೊದಲು ಹೇಳಿದ್ದೇ ಸರಿ. ನಿಮ್ಮ ಸೋದರತ್ತೆ ಹುಟ್ಟಿದಾಗಲೇ. ಈಗೆಲ್ಲಿ ಆ ಮೆಡ್ಲು. ನಿಮ್ಮತ್ತೇಗೆ ಕೊಟ್ಟಿಟ್ಟ ಹಾಗೆ ಜ್ಞಾಪಕ – ಆ. ಅವಳು ಅದನ್ನು ಕರಗಿಸಿ ನಾಲ್ಕು ಬಳೆ ಮಾಡಿಸಿಕೊಂಡ್ಳು. ಅದೂ ಎಷ್ಟು ಅಧ್ವಾನ ಆಗಿತ್ತೂಂತೀ, ಆ ಬಳೆಗಳು! ಅವಳಂಥಾ ಮಂಕುಮೂದೇವಿ ಇದುವರೆಗೂ ನಮ್ಮ ವಂಶದಲ್ಲಿ ಇನ್ನೊಬ್ಬಳು ಹುಟ್ಟಿಲ್ಲ...."

"ಅಯ್ಯೋ, ಅಜ್ಜೀ, ಸಾಕಜ್ಜೀ ನಿನ್ನ ಪುರಾಣ. ಕೆಲಸಕ್ಕೆ ಬಾರದ ನಿನ್ನ ಕತೆ ಕಟ್ಟಿಕೊಂಡು ನಾನೇನು ಮಾಡಿಕೊಳ್ಳಲೀ ನೀನು ರಾಜಂ ವಿಷಯ ಕೇಳ್ತೀಯೋ ಇಲ್ವೋ!"

"ಹೂ ಆಗಲಿ ಮಗು, ನಿನ್ನಿಷ್ಟದ ಹಾಗೇ ಆಗಲಿ,"

"ಅಜ್ಜೀ, ರಾಜಂ ಪುಟ್ಟ ಹುಡುಗನಾಗಿದ್ದಾಗ ಒಂದು ಹುಲೀನ ಕೊಂದು ಹಾಕಿದನಂತೆ, ಅಜ್ಜೀ".

"ಅಬ್ಬಾ! ಎಷ್ಟು ಧೈರ್ಯಸ್ಥನಾಗಿರಬೇಕು ಅವ!"

"ಬೇಕುಬೇಕೂಂತ ನನಗೋಸ್ಕರ ನೀನು ಹಾಗೆ ಹೇಳ್ತಾ ಇದ್ದೀಯ. ನಂಗೊತ್ತು ನೀನಿದೊಂದನ್ನೂ ನಂಬೋದಿಲ್ಲ"

ಸ್ವಾಮಿನಾಥನ್ ಬಹಳ ಜೋರಿಂದ ಕತೆ ಹೇಳತೊಡಗಿದ: "ರಾಜಂ ತಂದೆ ಒಂದು ಸಲ ಒಂದು ಕಾಡಿನಲ್ಲಿ ಕ್ಯಾಂಪು ಮಾಡಿದ್ದರು. ಮಗನನ್ನೂ ಕರೆದುಕೊಂಡು ಹೋಗಿದ್ದರು. ಇದ್ದಕ್ಕಿದ್ದ ಹಾಗೆ ಎರಡು ಭಾರಿ ಪಟ್ಟೆ ಹುಲಿ ಹಿಂದಿನಿಂದ ಬಂತು. ಒಂದು ಅವರಪ್ಪನ ಮೇಲೆ ಬಿದ್ದು ಅವರನ್ನು ನೆಲಕ್ಕೆ ಕೆಡವಿತು. ಇನ್ನೊಂದು ರಾಜಂನ ಅಟ್ಟಿಸಿಕೊಂಡು ಬಂತು. ಅವನು ಓಡಿಹೋಗಿ ಒಂದು ಪೊದೆ ಹಿಂದೆ ಅವಿತುಕೊಂಡದ್ದೇ ಗುರಿಯಿಟ್ಟು ಒಂದು ಗುಂಡು ಹೊಡೆದ ನೋಡು, ಹುಲಿ ರಕ್ತ ಕಾರತಾ ಬಿದ್ದುಬಿಡ್ತು. ನೆಲದ ಮೇಲೆ".

ಕತೆ ಮುಗಿಯಿತು.

"ಇದೇನಜ್ಜೀ, ನಿದ್ದೆ ಹೋಗ್ಬಿಟ್ಟಿದ್ದೀಯ?" ಎಂದ ಸ್ವಾಮಿ.

"ಇಲ್ಲ ಕಂದ, ಕೇಳ್ತಾ ಇದ್ದೀನಿ"

"ಹಾಗಾದರೆ ಹೇಳು ನೋಡೋಣ. ಎಷ್ಟು ಹುಲಿ ಬಂದು ಯಾರ ಯಾರ ಮೇಲೆ ಬಿತ್ತು?"

"ರಾಜಂ ಮೇಲೆ ಎರಡೋ ಮೂರೋ ಹುಲಿ ಬಿತ್ತು" ಎಂದಳು ಅಜ್ಜಿ. ಈ ಆಭಾಸ ಕಂಡು ಸ್ವಾಮಿಗೆ ಕೋಪ ಬಂತು. " ಮುಖ್ಯವಾದ ಅನೇಕ ವಿಷಯಾನ ಹೇಳೋಣ ಪಾಪ ಅಂತ ನಾನು ಗಂಟಲು ಒಣಗಿಸಿಕೊಳ್ಳೋದು, ನೀನು ದಿಮಾಕು ಮಾಡಿಕೊಂಡು ನಿದ್ದೆ ಮಾಡಿಬಿಟ್ಟು ತೋಚಿದ ಹಾಗೆಲ್ಲ ಕೂಗೋದು, ಹೋಗಜ್ಜಿ ಇನ್ನೊಂದು ಮಾತೂ ಹೇಳೊಲ್ಲ ನಿಂಗೆ, ನೀನು ಯಾಕೆ ಲಕ್ಷ್ಯವಿಟ್ಟು ಕೇಳೊಲ್ಲ ಅನ್ನೋದು ನನಗ್ಗೊತ್ತು. ನಿಂಗೆ ರಾಜಂನ ಕಂಡರೆ ತುಂಬ ಹೊಟ್ಟೆಕಿಚ್ಚು!"

"ಛೇ, ರಾಜಂ ಎಷ್ಟು ಮುದ್ದಾದ ಹುಡುಗ! ಅವನ ಮೇಲೆ ನನಗೆ ಏಕಪ್ಪಾ ದ್ವೇಷ!" ಎಂದಳು ಅಜ್ಜಿ. ಒಂದು ದಿನವಾದರೂ ಆಕೆ ರಾಜಂನ ನೋಡಿಯೆ ಇರಲಿಲ್ಲ. ಆದರೆ ಸ್ವಾಮಿ ಮಾತಲ್ಲಿ ನಂಬಿಕೆ ತೋರಿಸಬೇಡವೆ! ಸ್ವಾಮಿಗೆ ಸಂತೋಷವಾಯಿತು. ಆದರೆ ಮರುಕ್ಷಣದಲ್ಲೇ ಅವನಿಗೆ ಮತ್ತೊಂದು ಶಂಕೆ ಉಂಟಾಯಿತು. "ಅಜ್ಜಿ, ಈ ಹುಲಿ ಕತೇನ ನೀನು ನಂಬೋದೇ ಇಲ್ಲ, ಹೋಗಜ್ಜಿ".

"ಇಲ್ಲಾ ಮಗು, ನೀನು ಹೇಳೋ ಒಂದೊಂದು ಮಾತೂ ನಿಜ, ಮಗು" ಎಂದು ಹೇಳಿ ಅಜ್ಜಿ ಮೊಮ್ಮಗನನ್ನು ಸಮಾಧಾನ ಪಡಿಸಿದಳು. ಸ್ವಾಮಿ ಹೇಳಿದ: "ಹುಷಾರಜ್ಜಿ, ಯಾರಾದರೂ ರಾಜಂನ ಸುಳ್ಳುಗಾರ ಅಂದುಗಿಂದ್ರೆ ತಕ್ಷಣ ಅವರನ್ನು ಷೂಟ್ ಮಾಡಿಬಿಡ್ತಾನೆ ಅವನು. ಜೋಕೆ!"

"ಹಾಗೆ ಇರಬೇಕು ಗಂಡು ಮಕ್ಕಳು. ಮಗೂ, ಇನ್ನು ಹರಿಶ್ಚಂದ್ರನ ಕತೆ ಹೇಳ್ತೀನಿ ಕೇಳು. ತಾನಾಡಿದ ಮಾತು ಉಳಿಸಿಕೊಳ್ಳೋದಕ್ಕಾಗಿ ಅವನು ಮನೆ ಕಳಕೊಂಡ, ಮಠ ಕಳಕೊಂಡ, ಅಷ್ಟೈಶ್ವರ್ಯ ಕಳಕೊಂಡ, ಆಸ್ತಿ ಕಳಕೊಂಡ, ಹೆಂಡತಿ ಕಳಕೊಂಡ, ಮಗನ್ನ ಕಳಕೊಂಡ, ಕೊನೆಗೆ ಎಲ್ಲಾನೂ ಮತ್ತೆ ಪಡಕೊಂಡ" ಎಂದು ಹರಿಶ್ಚಂದ್ರನ ಕತೆ ಹೇಳತೊಡಗಿದಳು. ಆ ವೇಳೆಗೆ ಸ್ವಾಮಿ ಸಣ್ಣ ಗೊರಕೆ ಹೊಡೆಯುತ್ತಿದ್ದ ಸದ್ದು ಆಕೆಗೆ ಕೇಳಿಸಿತು. "ಪಾಪ ಮಗು ನಿದ್ದೆ ಹೋದ" ಎಂದು ಹೇಳಿ, ದುಪ್ಪಟಿ ಸರಿಯಾಗಿ ಹೊದ್ದಿಸಿ, ದೃಷ್ಟಿ ತೆಗೆದು, ನೆಟಿಕೆ ಮುರಿದು, ದೇವರ ಸ್ತೋತ್ರ ಹೇಳಿ ತಾನೂ ಮಲಗಿಕೊಂಡಳು.

****

ಪದಗಳ ಅರ್ಥ:

ಎಫ್.ಎ. – First Arts ಪರೀಕ್ಷೆ; ಪುರುಡುನೀರು – ಹೆರಿಗೆಯ ಮೈಲಿಗೆಯನ್ನು ಕಳೆಯುವ ಸ್ನಾನ; ಲಕ್ಷ್ಯ – ಗಮನ.

ಪ್ರಶ್ನೆಗಳು :

೧. ಅಜ್ಜಿಯ ಆಸ್ತಿ ಯಾವುದು ?

೨. ಅಜ್ಜಿ ತನ್ನ ಗಂಡನನ್ನು ಹೇಗೆ ಹೊಗಳಿಕೊಳ್ಳುತ್ತಾಳೆ?

೩. ಅಜ್ಜಿಯ ಕತೆ ಸ್ವಾಮಿಗೆ ಬೇಸರ ತರಿಸಲು ಕಾರಣವೇನು ?

೪.	ಸ್ವಾಮಿ ಅಜ್ಜಿಗೆ ಹೇಳಿದ ಕತೆ ಯಾವುದು ?

ಭಾಷಾಭ್ಯಾಸ :

೧.	ಈ ಪಠ್ಯಭಾಗದಲ್ಲಿ ಬಳಕೆಯಾಗಿರುವ ಇಂಗ್ಲಿಷ್ ಮೂಲದ ಪದಗಳನ್ನು ಪಟ್ಟಿ ಮಾಡಿ. ಅವುಗಳ ಮೂಲರೂಪಗಳನ್ನು ಬರೆದು, ಆಗಿರುವ ಬದಲಾವಣೆಯನ್ನು ಗುರುತಿಸಿ.

೨.	'ಗಡಗಡನೆ ನಡುಗು' – ಇಲ್ಲಿ ಗಡಗಡ ಎಂಬ ಪದ ಕ್ರಿಯೆಯಲ್ಲಿ ಅನುಕರಿಸಿ ತೋರಿಸುತ್ತದೆ. ಇಂತಹ ಇನ್ನು ಕೆಲವು ಪ್ರಯೋಗಗಳನ್ನು ಪಟ್ಟಿ ಮಾಡಿ ಅವನ್ನು ವಾಕ್ಯಗಳಲ್ಲಿ ಪ್ರಯೋಗಿಸಿ.

೩.	ನೋಡಿತು–ನೋಡೀತು, ಬಂದನು–ಬಂದಾನು, ಹೋದಳು–ಹೋದಾಳು – ಈ ಪ್ರಯೋಗಗಳಲ್ಲಿರುವ ವ್ಯತ್ಯಾಸವನ್ನು ಗುರುತಿಸಿ ವಾಕ್ಯದಲ್ಲಿ ಪ್ರಯೋಗಿಸಿ.

೯. ನವ ಮೋಜು ತಾಣಗಳು

– ಪ್ರೊ. ಶಿವರಾಮು ಕಾಡನಕುಪ್ಪೆ

ಭಾರತೀಯ ಸಮಾಜದಲ್ಲಿ ಎಂಥ ತಲ್ಲಣಗಳು ಸೃಷ್ಟಿಯಾಗುತ್ತಿವೆಯೆಂದರೆ, ಬದುಕನ್ನು ಕ್ಷಣಕ್ಷಣಕ್ಕೂ ಭೋಗಮುಖಿಯಾಗಿಸುವುದೇ ಅಂತಿಮಗುರಿಯೆಂದು ಜೀವನಯಾನ ಬಗೆಯಲು ಯತ್ನಿಸುತ್ತಿದೆ. ಇದೊಂದು ಮಿಥ್ಯಾರೋಪ; ಬದುಕಿನ ಸಹಜ ಲಯವನ್ನು ಕೃತಕ ಜೀವನ ಶೈಲಿಗಳ ಮೂಲಕ ದಾರಿ ತಪ್ಪಿಸುವ ಯತ್ನ. ಇಂಥ ಕೃತಕ ಜೀವನಶೈಲಿಗಳಲ್ಲಿ ಮೋಜು ಮಾಡುವ ಅನೇಕ ವಿಧಾನಗಳಿವೆ. ಈ ಮೋಜುಗಾರಿಕೆಯಿಂದ ಸುಖ ಅನುಭವಿಸುತ್ತಿದ್ದೇವೆಂದು ತಮಗೆ ತಾವು ಭ್ರಮಿಸಿರುವ ನವನಾಗರಿಕ ಸಮಾಜವು ತನಗರಿವಿಲ್ಲದಂತೆ ಭೋಗ ಮೂಲ ನವವ್ಯಾಧಿಗಳಿಗೆ ಸಿಲುಕಿ ಅಸ್ವಸ್ಥಗೊಳ್ಳುತ್ತಿದೆ. ಸುಖವೆಂಬ 'ಚಟ'ಕ್ಕೆ ಬಲಿಯಾಗುತ್ತಿದೆ.

ಹಿಂದೊಂದು ಕಾಲವಿತ್ತು. ಮೋಜಿನ ಕೆಲಸವೆಂದರೆ ಮೈಮನಗಳನ್ನು ಅರಳಿಸುವ ಪ್ರಕ್ರಿಯೆ ಎಂದು ತಿಳಿದು ಆ ನಿಟ್ಟಿನ ಮೋಜಿನ ಅನಂದವನ್ನು ನೀಡುವ ಕೆಲಸಗಳನ್ನು ಸ್ಥಳಗಳನ್ನು ಹುಡುಕಿ ತೃಪ್ತಿ ಪಡೆಯಲು ಮಾನವ ಹಾತೊರೆಯುತ್ತಿದ್ದನು. ಕವಿ ಕಾವ್ಯ ಸಾಂಗತ್ಯ: ಪುರಾಣ ಪುಣ್ಯಶ್ರವಣ; ಸದಭಿರುಚಿಯ ಸಮಾನ ಮನಸ್ಕರ ಒಡನಾಟ, ಇವುಗಳಲ್ಲಿ ತನ್ನ ಬಿಡುವಿನ ವೇಳೆಯನ್ನು ಕಳೆಯಲು ಯತ್ನಿಸುತ್ತಿದ್ದನು. ಹಳ್ಳಿಗಾಡಿನ ರೈತರು, ಶ್ರಮಿಕರು, ಹುಡುಗರು ಪ್ರಕೃತಿ ಮಧ್ಯೆ, ಹಳ್ಳ ತೊರೆ ಕೆರೆಗಳ ಮಧ್ಯೆ ಕಾಲಕಳೆದು ಉಲ್ಲಾಸಗೊಳ್ಳುತ್ತಿದ್ದರು. ಅವುಗಳ ಒಡನಾಟದಿಂದ ಬದುಕನ್ನು ಕಲಿಯುತ್ತಿದ್ದರು. ಪ್ರಕೃತಿ ದರ್ಶನದಿಂದ ಜೀವನದ ಗತಿಶೀಲತೆಯನ್ನು ಅರಿಯುವ ಯತ್ನ ಮಾಡುತ್ತಿದ್ದರು.

ಕಾಲ ಬದಲಾದಂತೆ ಸುಖವೆಂಬುದು ನಗರ ಬದುಕಿನಲ್ಲಿದೆ ಎಂಬ ನಂಬಿಕೆಯು ವಿಕಾಸಗೊಂಡಿತು. ಭಾರತದ ಗ್ರಾಮಜನರ ಕನಸು ನಗರಜೀವನವನ್ನು ಎಳೆಸುವುದು; ಅನುಕರಿಸುವುದು ಆದರ್ಶವಾಗಿ ಕಂಡಿತು. ಆದರೂ ನಗರ ಸೇರಿದ ಜನತೆ ಆಗಿಂದಾಗ್ಗೆ ಪ್ರಕೃತಿ ಪರಿಸರವನ್ನು ಪ್ರೀತಿಸುವ, ಅದರ ಮಡಿಲಿಗೆ ಬಂದು ಸೇರುವ, ಅದರ ಸಾನ್ನಿಧ್ಯದಿಂದ ಸಂತೃಪ್ತಗೊಳ್ಳುವ ಮನಃಸ್ಥಿತಿಯಲ್ಲೇ ಇತ್ತು. ಇದರ ಪೂರೈಕೆಗಾಗಿ ಶಾಲಾಕಾಲೇಜುಗಳಲ್ಲಿ ಸಂಘಸಂಸ್ಥೆಗಳಲ್ಲಿ ಪ್ರಕೃತಿ ತಾಣಗಳಿಗೆ ಬಿಡುವಿನ ದಿನಗಳಲ್ಲಿ ವಿಹಾರ ಹೋಗುವ ಪರಿಪಾಠವನ್ನು ಇಟ್ಟುಕೊಳ್ಳುತ್ತಿದ್ದರು. ಶಾಲಾಕಾಲೇಜುಗಳಲ್ಲಿ ಈ ಪ್ರಕೃತಿ ವಿಹಾರ ಮೋಜಿನ ಜೊತೆ ಶಿಕ್ಷಣದ ಭಾಗವೂ ಆಗುತ್ತಿತ್ತು. ನದಿಯಲ್ಲಿ ಈಜಾಡುವ, ಮರಳಿನಲ್ಲಿ ಒದ್ದಾಡುವ, ಹುಲ್ಲು ಹಸುರಿನಲ್ಲಿ ಕುಣಿದಾಡುವ ಕ್ರಿಯೆಗಳು ಪ್ರಕೃತಿಯನ್ನು ಬೆಳೆಯುವ ಮನಗಳಿಗೆ ಹತ್ತಿರ ತರುತ್ತಿದ್ದವು. ಈ ಪ್ರಕೃತಿಸ್ಪರ್ಶದಿಂದ ಎಳೆಯ ಮನಸ್ಸುಗಳು ಪ್ರಕೃತಿ ಲಯವನ್ನು ಅರಿಯಲು ಅನುವಾಗುತ್ತಿತ್ತು. ಜೊತೆಗೆ ಕಲಿಯುವ ಮನಸ್ಸುಗಳಿಗೆ ಭೌಗೋಳಿಕ ಪರಿಚಯ, ಮರಗಿಡ ಬಳ್ಳಿಗಳನ್ನು ಅರಿಯುವಿಕೆ ಮತ್ತು ಸ್ಪರ್ಶದಿಂದ ಇದೆಲ್ಲವೂ ನನ್ನದೆಂಬ ಪ್ರೀತಿ ಮೂಡುತ್ತಿತ್ತು. ಮಕ್ಕಳಿಗಿಂತ ಭಿನ್ನವಾದ

ಅನುಭವವನ್ನು ಹಿರಿಯರು ಪಡೆಯುತ್ತಿದ್ದರು. ನಗರದ ಕರ್ಕಶ ಏಕತಾನ ಬದುಕಿನಿಂದ ಕ್ಷಣಕಾಲ ಬಿಡುಗಡೆ ಹೊಂದಿ, ನಲುಗಿ ಹೋಗಿರುವ ಮೈಮನಸ್ಸುಗಳನ್ನು ಪ್ರಕೃತಿಯ ಸ್ಪರ್ಶದಿಂದ ನವೀಕರಿಸಿಕೊಳ್ಳುತ್ತಿದ್ದರು.

ಆದರೆ ಇಂದು ನಗರಗಳಲ್ಲಿ ನವ ಮೋಜಿನ ತಾಣಗಳು ಹುಟ್ಟಿಕೊಂಡಿವೆ. ಅವುಗಳನ್ನು ಫ್ಯಾಂಟಸಿ ಪಾರ್ಕ್‌ಗಳೆಂದು ಕರೆಯುತ್ತಾರೆ. ಇಲ್ಲಿ ಕೃತಕ ನೀರಾಟಗಳು, ಹಾರಾಟಗಳು, ತೇಲಾಟಗಳು ಇರುತ್ತವೆ. ಇವು ಮನಸ್ಸನ್ನು ಶಾಂತಗೊಳಿಸಿ ವಿಕಾಸಗೊಳಿಸುವ ಬದಲು, ಉದ್ರೇಕಗೊಳಿಸಿ ಮೈಮನಗಳನ್ನು ಗಾಬರಿಗೊಳಿಸುತ್ತವೆ. ಒಂದು ಬಗೆಯ ಹುಚ್ಚು ಆನಂದವನ್ನು ಉಂಟುಮಾಡುತ್ತವೆ. ಪ್ರಕೃತಿಮಾತೆಯ ಮಡಿಲಲ್ಲಿ ಬಡವ ಬಲ್ಲಿದ, ಕೆಳಜಾತಿ, ಮೇಲ್ಜಾತಿ ಎಂಬ ಭೇದವಿಲ್ಲ. ಆದರೆ ಇಲ್ಲಿ ಬಡವರಿಗೆ ಪ್ರವೇಶವೇ ಇಲ್ಲ! ಇಲ್ಲಿ ಉಳ್ಳವರು ಮೋಜು ನಡೆಸುವರು. ಇಂಥ ಕೃತಕ ಮೋಜಿನ ಸೆಳೆತದಲ್ಲಿ ಕೃತಕ ಆನಂದವನ್ನು ಪಡೆಯುತ್ತಾ, ಬದುಕಿನ ಸಹಜಗತಿಯಿಂದ ಮನಸ್ಸುಗಳು ದೂರವಾಗುತ್ತಾ ಸಾಗುತ್ತವೆ.

ಸುಖವೆಂಬ ಈ ಮರೀಚಿಕೆಯಿಂದ ಬಿಡುಗಡೆ ಹೊಂದಲು ಪ್ರಕೃತಿ ತಾಯಿಯ ಮಡಿಲು ಸೇರುವ ತವಕ ನಗರಜೀವಿಗಳಲ್ಲಿ ಮೂಡಬೇಕಿದೆ.

****

ಪದಗಳ ಅರ್ಥ:

ವ್ಯಾಧಿ – ಕಾಯಿಲೆ; ಅಸ್ವಸ್ಥ – ಅನಾರೋಗ್ಯ; ಪ್ರಕ್ರಿಯೆ – ಒಂದು ಉದ್ದೇಶದಿಂದ ಕೂಡಿದ ಕ್ರಿಯೆಗಳ ಸರಣಿ; ಗತಿಶೀಲತೆ – ಚಲನೆಯ ಗುಣ ; ಏಕತಾನ – (ಬೇಸರ ತರಿಸುವ) ಒಂದೇ ರಾಗ; ಉದ್ರೇಕ – ಕೆರಳು.

ಪ್ರಶ್ನೆಗಳು :

೧. ಭೋಗದ ಚಟದಿಂದ ಉಂಟಾಗಿರುವ ಪರಿಣಾಮ ಎಂತಹದು ?

೨. ಹಿಂದಿನ ಕಾಲದ ಮೋಜು ಹೇಗಿತ್ತು ?

೩. ಇಂದಿನ ಮೋಜಿನ ತಾಣಗಳು ಹೇಗಿವೆ ?

ಭಾಷಾಭ್ಯಾಸ :

೧. ಈ ವಾಕ್ಯಗಳನ್ನು ಗಮನಿಸಿ :

೧. ನದಿ ಜೋರಾಗಿ ಹರಿಯುತ್ತಿದೆ.

೨. ನದಿ ಜೋರಾಗಿ ಹರಿಯುತ್ತಿದ್ದರೂ ಅಪಾಯವೇನೂ ಆಗಿಲ್ಲ.

೩. ನದಿ ಜೋರಾಗಿ ಹರಿಯುತ್ತಿರುವುದರಿಂದ ಜನರು ಇನ್ನೊಂದು ದಂಡೆಗೆ ಹೋಗಲು ಕಷ್ಟಪಡುತ್ತಿದ್ದಾರೆ.

ಮೊದಲನೆಯ ವಾಕ್ಯ ಒಂದು ಘಟನೆಯನ್ನು ಹೇಳುತ್ತಿದೆ; ಒಂದು ಕ್ರಿಯಾಪದದಿಂದ ಕೂಡಿದೆ. ಆದರೆ ಎರಡನೆಯ ವಾಕ್ಯ ಒಂದಕ್ಕಿಂತ ಹೆಚ್ಚು ಘಟನೆಗಳನ್ನು ಹೇಳುತ್ತಿದೆ. ಒಂದಕ್ಕಿಂತ ಹೆಚ್ಚಿನ ಕ್ರಿಯಾಪದ ಹಾಗೂ ಸಂಯೋಜಕ ಪದದಿಂದ ಕೂಡಿದೆ. ಇನ್ನು ಮೂರನೆಯ ವಾಕ್ಯ ಒಂದೇ ವಾಕ್ಯದಂತೆ ತೋರುತ್ತಿದ್ದರೂ ಅದರಲ್ಲಿ ಒಂದಕ್ಕಿಂತ ಹೆಚ್ಚಿನ ವಾಕ್ಯಗಳಿರುವುದನ್ನು ಗುರುತಿಸಬಹುದು.

* ಮೊದಲನೆಯ ವಾಕ್ಯ **ಮೂಲವಾಕ್ಯ** ಎನ್ನಿಸಿಕೊಳ್ಳುತ್ತದೆ.

* ಎರಡನೆಯದು **ಸಂಯೋಜಕ ವಾಕ್ಯ**. ಇದರಲ್ಲಿ ಎಂದು, ಆದರೆ, ಮತ್ತು, ಅಥವಾ, ಅದರಿಂದ ಮೊದಲಾದ ಸಂಯೋಜಕ ಪದಗಳ ಬಳಕೆ ಇರುತ್ತದೆ. ಇದರಲ್ಲಿ ಇನ್ನೊಂದು ವಿಧಾನವೆಂದರೆ – ಊ, ಓ ಮೊದಲಾದ ಪ್ರತ್ಯಯಗಳನ್ನು ಸಂಯೋಜಕಗಳಾಗಿ ಬಳಸುವುದು.

* ಮೂರನೆಯದು **ಸಂಕೀರ್ಣವಾಕ್ಯ**. ಇದರಲ್ಲಿ ಒಂದಕ್ಕಿಂತ ಹೆಚ್ಚಿನ ಮೂಲವಾಕ್ಯಗಳಿರುವುದನ್ನು ಗುರುತಿಸಬಹುದು.

ಪ್ರಸ್ತುತ ಪಠ್ಯಭಾಗವನ್ನು ಆಧರಿಸಿ ಈ ಮೂರು ಬಗೆಯ ವಾಕ್ಯಗಳನ್ನು ರಚಿಸಿರಿ.

೨. 'ನವ' ಎಂಬ ಪದ 'ಹೊಸತು' ಮತ್ತು 'ಒಂಬತ್ತು' ಹೀಗೆ ಎರಡು ಅರ್ಥಗಳಲ್ಲಿ ಬಳಕೆಯಾಗುತ್ತದೆ. ಇದಕ್ಕೆ ಇನ್ನೂ ಒಂದೆರಡು ಉದಾ: ಮುನಿ – ಋಷಿ, ಕೋಪಿಸಿಕೊಳ್ಳು; ಬೇಡ – ಬೇಟೆಗಾರ, ನಿರಾಕರಿಸು.

ಹೀಗೆ 'ನಾನಾರ್ಥ' (ಒಂದಕ್ಕಿಂತ ಹೆಚ್ಚು ಅರ್ಥ) ಕೊಡುವ ಕೆಲವು ಪದಗಳನ್ನು ಪಟ್ಟಿ ಮಾಡಿ ಅರ್ಥಗಳನ್ನು ಗುರುತಿಸಿ.

ಲೇಖಕರ ಪರಿಚಯ

೧. ಕುವೆಂಪು : ವಿವರವಾದ ಲೇಖನವನ್ನು ಕೊಡಲಾಗಿದೆ.

೨. 'ಪರಿಮಳ' : 'ಪರಿಮಳ' ಕಾವ್ಯನಾಮದ ಎಚ್. ಶ್ರೀನಿವಾಸಮೂರ್ತಿ ಅವರದು ಮಕ್ಕಳ ಸಾಹಿತ್ಯದಲ್ಲಿ ವಿಶೇಷವಾದ ಹೆಸರು. ಕತೆ, ಕವನ, ನಾಟಕ, ವ್ಯಕ್ತಿಚಿತ್ರ ಈ ಎಲ್ಲ ಪ್ರಕಾರಗಳಲ್ಲೂ ಸಾಹಿತ್ಯ ರಚನೆ ಮಾಡಿದ ಹಿರಿಯರಲ್ಲಿ ಅವರೊಬ್ಬರು. ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸಿದವರು.

೩. ಬಸವಣ್ಣ : 'ಭಕ್ತಿಭಂಡಾರಿ' ಎಂದು ಹೆಸರಾದ ಬಸವಣ್ಣ ಕನ್ನಡದ ಪ್ರಮುಖ ವಚನಕಾರ; ಹನ್ನೆರಡನೆಯ ಶತಮಾನದ ಪ್ರಮುಖ ಸುಧಾರಕ.

೪. ಸಿದ್ಧಯ್ಯಪುರಾಣಿಕ : 'ಕಾವ್ಯಾನಂದ' ಇವರ ಕಾವ್ಯನಾಮ. ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿರಚನೆ ಮಾಡಿದ ಹಿರಿಯರು. ಸರ್ಕಾರಿ ಸೇವೆಯಲ್ಲಿ ಉನ್ನತ ಹುದ್ದೆಯಲ್ಲಿದ್ದರು. ವಚನಗಳನ್ನು ರಚಿಸಿರುವುದು ಇವರ ವಿಶೇಷ.

೫. ಪುರಂದರದಾಸ : ೧೬ನೆಯ ಶತಮಾನದ ಕನ್ನಡದ ಪ್ರಮುಖ ಕೀರ್ತನಕಾರ.

೬. ಎ.ಆರ್. ಕೃಷ್ಣಶಾಸ್ತ್ರಿ : ಹೊಸಗನ್ನಡ ಸಾಹಿತ್ಯದ ಹಿರಿಯ ತಲೆಮಾರಿನ ಲೇಖಕರು, ವಿದ್ವಾಂಸರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. 'ವಚನಭಾರತ' ಇವರ ಜನಪ್ರಿಯ ಕೃತಿ. ಮಕ್ಕಳಿಗಾಗಿ 'ನಿರ್ಮಲಭಾರತೀ' ಎಂಬ ಮಕ್ಕಳ ಮಹಾಭಾರತವನ್ನು ಬರೆದಿದ್ದಾರೆ.

೭. ಡಾ. ಪ್ರಭುಶಂಕರ : ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರು. ಪ್ರಬಂಧ ಹಾಗೂ ವ್ಯಕ್ತಿಚಿತ್ರ ಪ್ರಕಾರಗಳಲ್ಲಿ ವಿಶೇಷವಾಗಿ ಸಾಧನೆ ಮಾಡಿದವರು.

೮. ವಿ.ಜಿ. ಭಟ್ಟ : ಕನ್ನಡದ ಪ್ರಮುಖ ನವ್ಯಕವಿಗಳಲ್ಲೊಬ್ಬರು. ವಿಡಂಬನೆ ಇವರ ವಿಶೇಷವಾದ ಗುಣ.

೯. ಆರ್.ಕೆ. ನಾರಾಯಣ್ : ಭಾರತದ ಪ್ರಮುಖ ಇಂಗ್ಲಿಷ್ ಕಾದಂಬರಿಕಾರರು. 'ಸ್ವಾಮಿ ಮತ್ತು ಅವನ ಸ್ನೇಹಿತರು' ಇವರ ಜನಪ್ರಿಯ ಕೃತಿ. ಇದನ್ನು ಎಚ್.ವೈ. ಶಾರದಾಪ್ರಸಾದ್ ಕನ್ನಡಕ್ಕೆ ಅನುವಾದಿಸಿದ್ದಾರೆ.

೧೦. ಪ್ರೊ. ಶಿವರಾಮು ಕಾಡನಕುಪ್ಪೆ : ಕನ್ನಡ ಪ್ರಾಧ್ಯಾಪಕರು ಮತ್ತು ವಿಮರ್ಶಕರು; ಅಂಕಣಬರಹಗಾರರಾಗಿಯೂ ಕೆಲಸ ಮಾಡಿದ್ದಾರೆ. ಮೈಸೂರಿನ ವಿದ್ಯಾವರ್ಧಕ ಪದವಿ ಕಾಲೇಜಿನ ಪ್ರಾಂಶುಪಾಲರು.

****

ಮಾದರಿ ಪ್ರಶ್ನೆಪತ್ರಿಕೆ

ಕನ್ನಡ ಪ್ರವೇಶ ಪರೀಕ್ಷೆ

ಪ್ರಶ್ನೆಪತ್ರಿಕೆ – ೨

ಭಾಷೆ ಮತ್ತು ಸಾಹಿತ್ಯ ಪರಿಚಯ

ಅವಧಿ : ೩ ಗಂಟೆಗಳು ಗರಿಷ್ಠ ಅಂಕಗಳು : ೧೦೦

ಭಾಗ – ೧

(ಅ) ಹತ್ತು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : ೧ x ೧೦ = ೧೦

೦೧. ತೀರ್ಥಹಳ್ಳಿಯ ಹತ್ತಿರದ ಬೆಟ್ಟದ ಹೆಸರೇನು ?

೦೨. ಉದಯಶಂಕರನಿಗೆ ಉಪಾಧ್ಯಾಯರು ಯಾವ ಪದದ ಸ್ಪೆಲಿಂಗ್ ಕೇಳಿದರು ?

೦೩. ನೀರು–ಮರಗಳನ್ನು ಕಂಡಲ್ಲಿ ಜನ ಏನು ಮಾಡುತ್ತಾರೆ ?

೦೪. ತಮಿಳಿನಲ್ಲಿ ಜನ ಮೆಚ್ಚಿದ ಕವಿ ಯಾರು ?

೦೫. ಬ್ರಹ್ಮಜ್ಞಾನಿಗಳು ಏನನ್ನು ಬಿಡಲಿಲ್ಲ ?

೦೬. ಕುವೆಂಪು ಅವರು ಯಾವ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು ?

೦೭. ಹುಡುಗನನ್ನು ಕಾಡಿಗೆ ಯಾರು ಕರೆದೊಯ್ದರು ?

೦೮. ಸ್ವಾಮಿಯ ಪೂರ್ಣ ಹೆಸರೇನು ?

೦೯. ಹಳ್ಳಿಗಾಡಿನ ಜನ ಯಾವುದರ ಮಧ್ಯೆ ತಮ್ಮ ಕಾಲವನ್ನು ಕಳೆಯುತ್ತಿದ್ದರು ?

೧೦. ಧರ್ಮರಾಯನಿಗೆ ಯಾವ ಯಜ್ಞವನ್ನು ಮಾಡಬೇಕೆಂದು ಆಸೆಯಾಯಿತು ?

೧೧. ದುರ್ಯೋಧನನ ಮಾವ ಯಾರು ?

೧೨. ಕುವೆಂಪು ಅವರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿಯಾವುದು ?

(ಆ) ಬಿಟ್ಟ ಸ್ಥಳವನ್ನು ಸರಿಯಾದುದನ್ನು ಆರಿಸಿ ಬರೆಯಿರಿ : ೧ x ೫ = ೫

೧. 'ನರಿಗಳಿಗೇಕೆ ಕೋಡಿಲ್ಲ?' ಕತೆಯನ್ನು ಬರೆದವರು .... (ಎ.ಆರ್. ಕೃಷ್ಣಶಾಸ್ತ್ರಿ, ಕುವೆಂಪು)

೨. ಗಾಂಧೀಜಿಗೆ ಪ್ರಿಯವಾದದ್ದು .... (ರಾಮನಾಮ, ವಾಕಿಂಗು)

೩. ಬಸವಣ್ಣನವರ ಅಂಕಿತ .... (ಚನ್ನಮಲ್ಲಿಕಾರ್ಜುನ, ಕೂಡಲಸಂಗಮದೇವ)

೪. ಮಹಾಭಾರತವನ್ನು ಬರೆದವರು .... (ವಾಲ್ಮೀಕಿ, ವ್ಯಾಸ)

೫. ಪುರಂದರದಾಸರು ....ಗಳನ್ನು ರಚಿಸಿದ್ದಾರೆ. (ಕೀರ್ತನೆಗಳು, ವಚನಗಳು)

(ಇ) ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ : ೧ x ೫= ೫

೧. ತ್ರಿಪದಿ	೧. ರಕ್ಷಾಕ್ಷಿ
೨. ನರಿಯಣ್ಣ	೨. ಹಾಸಿಗೆ
೩. ಬಾಪೂ	೩. ಸರ್ವಜ್ಞ
೪. ಹ್ಯಾಮ್ಲೆಟ್	೪. ಕನ್ನಡ
೫. ಹಂಸ	೫. ತಕಲಿ
	೬. ಕೋಡು

(ಈ) ಯಾವುದಾದರೂ ಎರಡು ಪದ್ಯಗಳ ಸಾರಾಂಶವನ್ನು ಬರೆಯಿರಿ : ೨ x ೫ = ೧೦

೧. ಕೇಡು ತಾ ಬರುವಲ್ಲಿ ಕೂಡುವುದು ದುರ್ಬುದ್ಧಿ
ಕಾಡಿನಲಿ ಕಿಚ್ಚು ಒಗೆದಾಗ ಮಾರುತನು
ಕೂಡಿಕೊಂಡಂತೆ ಸರ್ವಜ್ಞ

೨. ಹಂಸಗಳೆಲ್ಲಾ ಹಾಸಿಗೆ ಮಾಡಿ
ಹಕ್ಕಿಗಳೆಲ್ಲಾ ಹಾಡನು ಹಾಡಿ
ಮೊಲಗಳು ಕತೆಯನು ಹೇಳಿದವು
ನಿಮ್ಮೂರಿನ ಮಳೆಬೆಳೆ ಹೇಗೆಂದು
ನರಿಗಳು ಕೇಳಿದವು

೩. ಗುರುಗಳ ಸೇವೆ ಮಾಡಿದಿರಲ್ಲ ಗುರುತಾಗಲಿಲ್ಲ
ಪರಿಪರಿ ದೇಶವ ತಿರುಗಿದರಲ್ಲ ಪೊರೆಯುವರಿನ್ನಿಲ್ಲ
ಅರಿವೊಂದರಿಯದೆ ಆಗಮ ತಿಳಿಯದೆ
ನರಕಕೂಪದಲಿ ಬೀಳುವಿರಲ್ಲ

(ಉ) ಐದಕ್ಕೆ ಟಿಪ್ಪಣಿ ಬರೆಯಿರಿ : ೨ x ೫ = ೧೦

೧. ಬಸವಣ್ಣ ೨. ಚರಕ ೩. ಪ್ರಭುಶಂಕರ
೪. ಜರಾಸಂಧ ೫. ದುಶ್ಶಾಸನ ೬. ರಾಜಂ
೭. ಅಪ್ಪ

(ಊ) ನಾಲ್ಕು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ : ೪ x ೫ = ೨೦

೧. ಗುಬ್ಬಕ್ಕನ ಮಕ್ಕಳು ಪತ್ತೆಯಾದದ್ದು ಹೇಗೆ ?
೨. ಗಾಂಧೀಜಿಯ 'ವಾಣಿ' ಮಕ್ಕಳಿಗೆ ಏನು ಹೇಳಿತು ?
೩. ಅಂತರಂಗ ಶುದ್ಧಿ – ಬಹಿರಂಗ ಶುದ್ಧಿ ಇವುಗಳ ಬಗೆಗೆ ಬಸವಣ್ಣನವರ ಅಭಿಪ್ರಾಯವೇನು?
೪. ಸರ್ವಜ್ಞನ ಸ್ವರೂಪ ಯಾವ ರೀತಿಯದು ?
೫. ದ್ರೌಪದಿಗೆ ಆದ ಅವಮಾನ ಯಾವ ಬಗೆಯದು ?
೬. ಅಜ್ಜಿ ತನ್ನ ಗಂಡನನ್ನು ಹೇಗೆ ಹೊಗಳಿಕೊಂಡಳು ?

೭. ಇಂದಿನ ಮೋಜಿನ ತಾಣಗಳು ಜನರ ಮೇಲೆ ಉಂಟು ಮಾಡಿರುವ ಪರಿಣಾಮ ಯಾವ ರೀತಿಯದು ?

ಭಾಗ – ೨

(ಅ) ಅರ್ಥ ಬರೆಯಿರಿ : ೧ x ೪ = ೪

ಅಗಣಿ, ಮಂಡೆ, ನನ್ನಿ, ಕೂಪ

(ಆ) ನಾನಾರ್ಥಗಳನ್ನು ಬರೆಯಿರಿ : ೧ x ೪ = ೪

ಮುನಿ, ಬೇಡ, ಹಳಿ, ನವ

(ಇ) ಬಿಡಿಸಿ ಬರೆಯಿರಿ : ೧ x ೪ = ೪

ಹಸನಾದ, ಜೊತೆಯಲ್ಲಿ, ತುಂಡುಗಂಬಳಿ, ಮೆಚ್ಚಿದವರು

(ಈ) ಸೇರಿಸಿ ಬರೆಯಿರಿ : ೧ x ೪ = ೪

ನಾಡು + ಅ, ಬಂಡೆ + ಕಲ್ಲು, ಮರ + ಅನ್ನು, ಮೂರು + ಹತ್ತು

(ಉ) ಮೂಲರೂಪಗಳನ್ನು ಗುರುತಿಸಿ : ೧ x ೪ = ೪

ಬಣ್ಣ, ತಾಣ, ಹೇಳು, ಕ್ಲಾಸು

(ಊ) – ಕಾರ, – ವಂತ ಎಂದು ಕೊನೆಯಾಗುವ ಎರಡೆರಡು ಪದಗಳನ್ನು ಬರೆಯಿರಿ : ೧ x ೪ = ೪

(ಋ) ಈ ಕ್ರಿಯಾಪದಗಳ ವಚನವನ್ನು ಬದಲಾಯಿಸಿ : ೧ x ೪ = ೪

ಹೇಳಿದವು, ಬಿಟ್ಟನು, ನೋಡುತ್ತಾರೆ, ಬರುತ್ತಿದ್ದಾಳೆ

(ೠ) ಸೂಚನೆಗೆ ಅನುಗುಣವಾಗಿ ವಾಕ್ಯರಚನೆ ಮಾಡಿ : ೧ x ೪ = ೪

೧. 'ಅಲ್ಲ' ಎಂಬ ಉತ್ತರ ಬರುವಂತೆ ಒಂದು ಪ್ರಶ್ನೆಯನ್ನು ರೂಪಿಸಿ.

೨. 'ನಾನು ಊರಿಗೆ ಹೋಗುತ್ತೇನೆ' – ಇದನ್ನು ಪ್ರಥಮ ಪುರುಷದಲ್ಲಿ ಬರೆಯಿರಿ.

೩. 'ರಾಮನು ಊರಿಗೆ ಬಂದನು. ಆಗ ಬಹಳ ತಡವಾಗಿತ್ತು' – ಇದನ್ನು ಒಂದು ವಾಕ್ಯವಾಗಿ ಬರೆಯಿರಿ.

೪. 'ಗಿಡದಲ್ಲಿ ಹಣ್ಣು ಬಿಟ್ಟಿದ್ದರೂ ಯಾರೂ ತಿನ್ನಲಿಲ್ಲ' – ಇದರಲ್ಲಿನ ಮೂಲವಾಕ್ಯಗಳನ್ನು ಗುರುತಿಸಿ.

(ಎ) ಎರಡು ಪ್ರಶ್ನೆಗಳಿಗೆ ಉತ್ತರಿಸಿ : ೨ x ೪ = ೮


೧. ಲೋಪಸಂಧಿ ಎಂದರೇನು ? ಉದಾಹರಣೆಯೊಂದಿಗೆ ಪರಿಚಯಿಸಿ.

೨. ಕರ್ತೃಪದಕ್ಕೂ ಕ್ರಿಯಾಪದಕ್ಕೂ ಇರುವ ಸಂಬಂಧವನ್ನು ಉದಾಹರಣೆಗಳೊಂದಿಗೆ ತಿಳಿಸಿ.

೩. ಮೂರು ಬಗೆಯ ನಿರೂಪಣೆಗಳನ್ನು ಪರಿಚಯಿಸಿ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ. ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ ತಲಪುವಂತೆ ಮಾಡುವುದೇ ಪುಸ್ತಕೋದ್ಯಮದ ಪ್ರಾಥಮಿಕ ಆಶಯ. ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ ಸ್ಪಂದಿಸುತ್ತ. ಆ ಕ್ಷೇತ್ರದಲ್ಲಿ ಬಹುವೇಗವಾಗಿ ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ ಆರಾಧನೆ ಮಾಡುತ್ತಿದ್ದೇವೆಂದು ಭಾವಿಸುವುದರ ಜೊತೆಗೆ ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದೇ ಜೀವಂತಿಕೆಯ ಲಕ್ಷಣ ಎಂದು ಕನ್ನಡ ಸಾಹಿತ್ಯ ಪರಿಷತ್ತು ಪರಿಗಣಿಸಿದೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು



ಕನ್ನಡ ಸಾಹಿತ್ಯ ಪರಿಷತ್ತು